ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಹಣ ಕೊಟ್ಟಾಗ ಅವನ್ನು ನಾನು ವಿಚಾರ ಮಾಡುತ್ತೇನೆ ಎಂದು ನಾನು ಹೇಳಲಿಲ್ಲ.

I have got the blue-prints ready and it will not take any time to issue order to the engineers.

Mr. SPEAKER.—I am happy that there is no difference of opinion on this matter. I invite all these hon. Members to come to my chamber. Let us have an informal talk in my chamber at 3-15 P.M. when the Chief Minister will also join us. Let all the hon. Members put their heads together and find out a solution. Nobody will be happier than myself if an agreed solution is arrived at.

General Discussion on the Annual Financial Statement of the Mysore State Electricity Board for 1968-69.

†ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಪತಿಗಳೇ, ನೆನ್ನೆ ದಿವಸ ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ವಿದ್ಯುಚ್ಛಕ್ತಿ ಮಂಡಲಿಯ 1968-69 ಮತ್ತು 1969-70ನೇ ಸಾಲಿನ ಬಜೆಟ್ಟಿನ ಬಗ್ಗೆ ಇರುವ ಅನೇಕ ನ್ಯೂನತೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದೇನೆ. ಈ ನ್ಯೂನತೆಗಳ ಬಗ್ಗೆ ಇನ್ನೂ ಅನೇಕ ವಿಷಯಗಳನ್ನು ಮತ್ತೆ ನಾನು ಹೇಳಬೇಕಾಗಿದೆ. ಈ ನ್ಯೂನತೆಗಳಿಂದ ಎಷ್ಟೊಂದು ಹಣ ಹಾಳಾಗುತ್ತಿವೆ ಎಂಬ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಈಗ ನೀರಾವರಿ ಪಂಪ್‌ಸೆಟ್ಟುಗಳ ಮೇಲಿನ ದರವನ್ನು ಹೆಚ್ಚು ಮಾಡಿದ್ದಾರೆ. ವಿದ್ಯುಚ್ಛಕ್ತಿ ಮಂಡಲಿಯವರು ಏನು ಒಂದು ಅಂಕಿಅಂಶಗಳನ್ನು ಸರ್ಕಾರದ ಮುಂದೆ ಮತ್ತು ಸಾರ್ವಜನಿಕರ ಮುಂದೆ ಮತ್ತು ಬಳಕೆದಾರರ ಮುಂದೆ ಇಟ್ಟಿದ್ದಾರೆಯೋ ಅವು ಬಹಳ ಉತ್ಪ್ರೇಕ್ಷೆಯಿಂದ ಕೂಡಿವೆ ಎಂದು ಹೇಳುತ್ತೇನೆ. ಈಗ ಒಂದು ಬಾವಿಯ ಹತ್ತಿರಕ್ಕೆ ಲೈನ್ ಎಳೆಯಬೇಕಾದರೆ ಸರಾಸರಿ 3 ಸಾವಿರ ರೂಪಾಯಿಗಳು ಖರ್ಚಾಗುತ್ತದೆಂದು ಮಂಡಲಿಯವರು ಹೇಳಿದ್ದಾರೆ. ಈ ಬಗ್ಗೆ ಅನೇಕ ವಾದ ವಿವಾದಗಳು ಇವೆ. ಇವತ್ತಿನ ದಿವಸ ಮಂಡಲಿಯವರು ಬಳಕೆದಾರರ ಅನುಕೂಲಕ್ಕಾಗಿ 3 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಲೈನ್ ಎಳೆದರೂ ಕೂಡ ಆ ಒಂದು ಸ್ವತ್ತು ಮಂಡಲಿಯವರದ್ದೇ ಆಗಿರುತ್ತದೆ. ಯಾರ ಅನುಕೂಲಕ್ಕಾಗಿ ಲೈನ್ ಎಳೆಯುತ್ತಾರೋ, ಅವರದ್ದೇ ಸ್ವತ್ತು ಎಂದು ಮಂಡಲಿಯವರು ಹೇಳಿದರೆ ದರ ಹೆಚ್ಚು ಮಾಡಿದ್ದನ್ನು ಒಪ್ಪಿಕೊಳ್ಳಬಹುದಾಗಿತ್ತು. ಈಗ ಒಂದು ಭಾಗಕ್ಕೆ ಲೈನ್ ಎಳೆಯಬೇಕಾದರೆ ಒಂದು ಸಪರೇಟ್ ಎಸ್ಟಿಮೇಟ್ ತಯಾರು ಮಾಡುತ್ತಾರೆ. ಆ ಭಾಗಕ್ಕೆ ಬೇಕಾಗುವ ಸಾಮಾನುಗಳಿಗೆ ಮತ್ತು ಲೇಬರ್‌ಸ್ ಬಗ್ಗೆ ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ಲೆಕ್ಕ ಹಾಕುತ್ತಾರೆ. ಲೇಬರ್‌ಸ್ ಬಗ್ಗೆ ಮಂಡಲಿಯವರು ಖರ್ಚು ಮಾಡುವ ಹಣದಲ್ಲಿ ಬಹಳಷ್ಟು ಹಣವನ್ನು ಉಳಿಸಬಹುದು. ಈಗ ಒಂದು ಪೋಲನ್ನು ನೆಡಬೇಕಾದರೆ ಆ ಪೋಲನ್ನು ಗಾಡಿಯಲ್ಲಿ ಹಾಕಿಕೊಂಡು ಅದರ ಹಿಂದೆ ಸ್ಮಶಾನ ಯಾತ್ರೆಗೆ ಹೋಗುವಂತೆ 20-30 ಜನ ಅವರದ್ದೇ ಘೋಷಣೆಗಳನ್ನು ಕೂಗಿಕೊಂಡು ಹೋಗುತ್ತಾರೆ. ನಾಲ್ಕು ಜನ ಮಾಡುವ ಕೆಲಸವನ್ನು 20-30 ಜನ ಮಾಡುತ್ತಾರೆ. ಇಷ್ಟೊಂದು ಜನ ಲೈನ್‌ಮನ್‌ಗಳು ಇದ್ದರೂ ಕೂಡ, ಫ್ಯೂಜ್ ಹೋಗಿದೆ, ಬಂದು ಹಾಕಿಕೊಡಿ ಎಂದು ಕೇಳಿದರೆ ಲೈನ್ ಮೆನ್‌ಗಳು ಇಲ್ಲ ಎಂದು ಆಫೀಸ್‌ನವರು ಹೇಳುತ್ತಾರೆ. ಇಲ್ಲಿ ಹಣ ಹೇಗೆ ಪೋಲಾಗುತ್ತಿದೆ ಎನ್ನುವುದಕ್ಕಾಗಿ ಇಂತಹ ಒಂದು ಉದಾಹರಣೆ ಹೇಳಿದೆ. ಇಲ್ಲಿರುವ ಜನರೇ ಬೋರ್ಡಿಗೆ ಸೇರಿದ ಸಾಮಾನುಗಳನ್ನು ಕದ್ದು ಹೊರಗಡೆ ಮಾರಾಟ ಮಾಡುತ್ತಿರುವುದು ಎಲ್ಲರಿಗೂ ಗೊತ್ತಾಗಿದೆ. ಇದರಲ್ಲಿ ಕಾಪರ್ ವೈರ್ ಕಳ್ಳತನ ಬಹಳ ಜಾಸ್ತಿಯಾಗಿತ್ತು ಎಂದು ಕೇಳಿದ್ದೇವೆ. ಇದಕ್ಕೆ ಕಾರಣ ಇಲ್ಲಿರುವ ಲೈನ್‌ಮನ್‌ಗಳು ಹಾಗೂ ಇನ್ನಿತರರು ಸೇರಿಕೊಂಡು ಬೇಕಾದಷ್ಟು ಹಣವನ್ನು ಪೋಲು ಮಾಡುತ್ತಿದ್ದಾರೆ ಮತ್ತು ಬೆಲೆ ಬಾಳುವ ಸಾಮಾನುಗಳನ್ನು ಮಾರಿ ಹಣ ಸಂಪಾದನೆ ಮಾಡುತ್ತಿದ್ದಾರೆ. ವರ್ಕ್ ಚಾರ್ಜ್ ಎಸ್ಟಾಬ್ಲಿಷ್‌ಮೆಂಟಿಗೆ ಸೇರಿದ ಜನರೇ ಇವನ್ನೆಲ್ಲಾ ಮಾಡುತ್ತಿದ್ದರೂ ಇದರ ಕಡೆಗೆ ಸರಿಯಾದ ಬಿಗಿ ಇಟ್ಟು ತನಿಖೆ ಮಾಡುತ್ತಿಲ್ಲ. ಇಡೀ ಸೆಂಟ್ರಲ್ ಸ್ಟೋರು ಕೈಕೆಳಗೆ ಇರುವ ಲೈನ್‌ಮೆನ್‌ಗಳು ಹಾಗೂ ಇನ್ನಿತರ ಜನರು ಖದೀಮರಾಗಿದ್ದಾರೆ. ಇವರಿಂದರೇ ಬೋರ್ಡಿಗೆ ವಿಪರೀತವಾದ ನಷ್ಟವಾಗುತ್ತಿದೆ. ಅಲ್ಲದೆ ಇಲ್ಲಿ ಆಗಾಗ್ಗೆ

(ಶ್ರೀ ಎನ್. ಚಿಕ್ಕೇಗೌಡ)

ಸಾಮಾನುಗಳನ್ನು ಹಳೆಯದಾಗಿವೆ ಎಂದು ಹರಾಜು ಹಾಕುತ್ತಾರೆ. ಇವರಲ್ಲಿ ಇಲ್ಲಿರತಕ್ಕ ಅಧಿಕಾರಿಗಳೇ ಸೇರಿಕೊಂಡು ಬೇಕಾದಷ್ಟು ಹಣ ಹೊಡೆಯುತ್ತಿದ್ದಾರೆ, ಹೀಗೆ ಒಂದು ಸಾರಿ ಬಹಳವಾದ ಸಾಮಾನುಗಳು ಕಳುವಾದವು ಎಂದು ಒಬ್ಬ ಲೈನ್‌ಮನ್ ಪತ್ತೆಹಚ್ಚಿ ಕೊಟ್ಟಿದ್ದಾರೆ ಎಂದು ಅವರಿಗೆ ಬೋರ್ಡಿನವರು 250 ರೂಪಾಯಿಗಳ ಬಹುಮಾನ ಕೊಟ್ಟಿದ್ದಾರೆ. ಆಮೇಲೆ ಹಿಡಿದಿಟ್ಟ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಂಡರೋ ಏನೋ ಒಂದು ಗೊತ್ತಾಗುತ್ತಿಲ್ಲ. ಇದರಿಂದ ಬೋರ್ಡಿಗೆ ಲಕ್ಷಾಂತರ ರೂಪಾಯಿಗಳಷ್ಟು ಹಣ ಪೋಲಾಗುತ್ತಲಿವೆ. ಇದನ್ನೆಲ್ಲಾ ಸರಿಯಾಗಿ ತನಿಖೆ ಮಾಡಲು ಏರ್ಪಾಡು ಮಾಡಿದ್ದಾರೆಯೋ ಇಲ್ಲವೇ ಎನ್ನುವುದರ ಬಗ್ಗೆ ಸರಕಾರದವರು ತಮ್ಮ ಉತ್ತರದಲ್ಲಿ ಹೇಳಬೇಕು ಎಂದು ಕೇಳುತ್ತೇನೆ. 68-69ನೇ ಸಾಲಿನ ಸ್ಟೇಟ್‌ಮೆಂಟಿನಲ್ಲಿ ಇಲ್ಲಿರುವ ಸ್ಟೋರ್ಸ್‌ಗಳಲ್ಲಿ ಸುಮಾರು ಒಂಬತ್ತೂವರೆ ಕೋಟಿ ರೂಪಾಯಿ ಬೆಲೆಯುಳ್ಳ ಸಾಮಾನುಗಳಿವೆ ಎಂದು ಗೊತ್ತಾಗುತ್ತದೆ. ಇದರಲ್ಲಿ ಬರೇ ಸೆಂಟ್ರಲ್ ಸ್ಟೋರ್ಸ್ ಬಗ್ಗೆ ಹೇಳಿದ್ದಾರೆ. ಇದರಲ್ಲಿ ಸೆಕ್ಷನ್ ಆಫೀಸರು, ಅಸಿಸ್ಟೆಂಟು ಇಂಜನೀಯರು ಹಾಗೆ ಇನ್ನೂ ಇತರ ಅಧಿಕಾರಿಗಳು ಇದ್ದಾರೆ. ಇವರೆಲ್ಲಾ ಸೇರಿಕೊಂಡು ಇರುವ ಸಾಮಾನುಗಳನ್ನು ದುರುಪಯೋಗ ಮಾಡುತ್ತಿದ್ದಾರೆ. ಮತ್ತು ಇಲ್ಲಿ ಸಿಮೆಂಟು ಕಂಬಗಳನ್ನು ಮ್ಯಾನುಫ್ಯಾಕ್ಚರು ಮಾಡಬೇಕೆಂದು ಸುಮಾರು 50 ಸೆಂಟರುಗಳನ್ನು ಮಾಡಿದ್ದಾರೆ. ಇದರಲ್ಲಿ ಎಷ್ಟೆಷ್ಟು ಸಿಮೆಂಟು ಪೋಲುಗಳನ್ನು ಮಾಡುತ್ತಿದ್ದಾರೆ ಎನ್ನುವ ಸರಿಯಾದ ಅಂಕೆ ಸಂಖ್ಯೆಗಳಿಲ್ಲ. ಇಲ್ಲಿ ಬರುವ ಸಿಮೆಂಟು ಹಾಗೂ ಕಬ್ಬಿಣ ಇತ್ಯಾದಿ ಸಾಮಾನುಗಳನ್ನು ಇಲ್ಲಿರುವ ಅಧಿಕಾರಿಗಳೇ ದುರುಪಯೋಗ ಮಾಡಿಕೊಂಡು ಬೇಕಾದ ಹಾಗೆ ಮನೆ ಮಠಗಳನ್ನು ಮಾಡಿಕೊಂಡಿದ್ದಾರೆ. ಇವತ್ತು ನಮ್ಮ ಹೊಸಕೋಟೆಯಲ್ಲಿ ಕೂಡ ನಮ್ಮ ಕಣ್ಣೆದುರಿಗೆ ಇರುವ ಅಧಿಕಾರಿಗಳು ಎರಡು ಮೂರು ಬಂಗಲೆಗಳನ್ನು ಮಾಡಿಕೊಂಡಿದ್ದಾರೆ. ಇದಕ್ಕೆ ಇಲ್ಲಿ ಬರುವ ಸಿಮೆಂಟು ಹಾಗೂ ಕಬ್ಬಿಣವನ್ನುಪಯೋಗಿಸಿಕೊಂಡು ಮಾಡಿದ್ದಾರೆ ಎಂದು ನಾವು ಒಂದು ಸಾರಿ ಬೋರ್ಡಿನ ಛೇರ್ಮನ್ನರವರಿಗೂ ದೂರು ಕೊಟ್ಟೆ. ಈ ರೀತಿ ಎಷ್ಟೋ ಜನ ಸೂಪರ್‌ವೈಸರುಗಳು ಹಾಗೂ ಇಲ್ಲಿರತಕ್ಕ ಇನ್ನಿತರ ಅಧಿಕಾರಿಗಳು ಬೇಕಾದಷ್ಟು ಸಾಮಾನುಗಳನ್ನು ದುರುಪಯೋಗ ಮಾಡಿ ಸರಕಾರಕ್ಕೆ ನಷ್ಟವುಂಟು ಮಾಡುತ್ತಿದ್ದಾರೆ ಮತ್ತು ಲಕ್ಷಾಂತರ ರೂಪಾಯಿಗಳಷ್ಟು ಸರಕಾರಕ್ಕೆ ನಷ್ಟವಾಗುತ್ತಿದೆ. ಇದರ ಬಗ್ಗೆ ಮಂಡಲಿಯವರು ಸರಿಯಾದ ಅಂಕೆ ಅಂಶಗಳನ್ನು ಕೊಡುತ್ತಿಲ್ಲ. ನಾನು ಯಾವ ಒಂದು ವ್ಯಕ್ತಿ ಬಗ್ಗೆ ಹೇಳುತ್ತಿಲ್ಲ. ಇವೊತ್ತು ರೈತರಮೇಲೆ ಹೆಚ್ಚು ಹೊರೆ ಹಾಕಲು ಹೋಗುವುದು ಸರಿಯಲ್ಲ. ರೈತರು ಪಂಪು ಸೆಟ್ಟುಗಳ ಮೇಲೆ ತೆರಿಗೆ ಕೊಡಬೇಕೆಂದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ಬದಲು ಆಡಳಿತದಲ್ಲಿ ಬಿಗಿ ಇಟ್ಟು ಕೆಲಸ ಮಾಡಿದರೆ ಎಷ್ಟೋ ಹಣ ದುರುಪಯೋಗವಾಗುವುದು ತಪ್ಪಿ ಸರಕಾರಕ್ಕೆ ಹೆಚ್ಚು ಲಾಭವೂ ಆಗುತ್ತದೆ. ಎಷ್ಟೋ ಕಡೆಗಳಲ್ಲಿ ಅಧಿಕಾರಿಗಳೇ ಮೀಟರುಗಳನ್ನು ಟ್ಯಾಂಪರ್ ಮಾಡುತ್ತಿರುವುದು ಕಂಡುಬರುತ್ತಿದೆ. ದೊಡ್ಡ ದೊಡ್ಡ ಕೈಗಾರಿಕೆಗಳಲ್ಲಿ ಇವು ನಡೆಯುತ್ತವೆ. ಇವನ್ನು ಸರಿಯಾಗಿ ಪತ್ತೆ ಮಾಡಲು ವಿಜಿಲೆನ್ಸ್ ಸ್ಕ್ವಾಡ್ ನೋಡಬೇಕೆಂದು ನಾವು ದೂರು ಕೊಟ್ಟರೂ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಬೆಂಗಳೂರಿನ ಸುತ್ತಮುತ್ತ ಅನೇಕ ಇಂಡಸ್ಟ್ರೀಗಳಿವೆ. ಇಲ್ಲಿ ಮೀಟರುಗಳನ್ನು ಕೆಲಸ ಮಾಡದಂತೆ ಇಡುವ ಒಂದು ಕೆಲ ಅಭ್ಯಾಸ ಮಾಡಿ ಬೋರ್ಡಿಗೆ ನಷ್ಟ ಮಾಡುತ್ತಿದ್ದಾರೆ, ಬಳಕೆದಾರರುಗಳಿಗೆ ರೇಟುಗಳನ್ನು ಹೆಚ್ಚು ಮಾಡಬಾರದು. ಇಲ್ಲಿರುವ ಸೂಪರ್‌ವೈಸರುಗಳು ಹಾಗೂ ಮೀಟರು ರೀಡರುಗಳು ಇನ್ನು ಇತರ ಲೈನು ಅಧಿಕಾರಿಗಳು ಎಲ್ಲರೂ ಸೇರಿಕೊಂಡು ಮಂಡಲಿಗೆ ಬಹಳ ನಷ್ಟ ಮಾಡುತ್ತಿದ್ದರೂ ಇದನ್ನು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ಮೀಟರಿನಲ್ಲಿ 700 ಎಂದು ರೀಡಿಂಗು ಇದ್ದರೆ ಇದನ್ನು ಬೇಕಾದರೆ 70 ಮಾಡಬಹುದು ಇಲ್ಲವೇ 00)7 ಎಂದು ಬೇಕಾದರೂ ಮಾಡಬಹುದು. ಹೀಗೆ ಬಹಳ ನಷ್ಟ ಮಾಡುತ್ತಿದ್ದಾರೆ.

3-00 P.M.

ಮನೆಗೆ ಮೀಟರ್ ರೀಡಿಂಗ್ ಇನ್‌ಸ್ಪೆಕ್ಟರ್ಸ್ ಬರುತ್ತಾರೆ, ಅವರು ಮೀಟರ್ ರೀಡಿಂಗ್ ತೆಗೆದುಕೊಳ್ಳದೆ ಮನೆ ಬೀಗ ಹಾಕಿದೆಯೆಂದು ಬರೆದುಕೊಂಡು ಹೋಗಿಬಿಡುತ್ತಾರೆ. ಆ ಬಿಲ್ಲಿನಲ್ಲಿರುವ ನ್ಯೂನತೆಗಳನ್ನೂ ಕಂಡುಹಿಡಿಯುವುದಿಲ್ಲ. ಅವರಿಗೆ ಸರಿಯಾದ ಅನುಭವವೇ ಇರುವುದಿಲ್ಲ. ಅಂತಹ ಮೀಟರ್ ರೀಡರ್ಸ್‌ನ್ನು ಅಪಾಯಿಂಟ್ ಮಾಡುತ್ತಿದ್ದಾರೆ. ಅವರಿಗೆ ಓವರ್‌ಟೈಂ ಬೇರೆ ಕೊಡುತ್ತಾರೆ, ಅವರಿಗೆ ಏನು ಇನ್‌ಸೆಂಟೀವ್ ಕೊಟ್ಟರೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಒಬ್ಬ ರೈತರಿಗೆ ಒಂದು ಪಂಪುಸೆಟ್ಟಿಗೆ ಸರ್ವಿಸ್ ಕೊಡಬೇಕಾದರೆ ಅಲ್ಲಿ ಎಂಪ್ಲಾಯೀಸ್ ಬೆಳಗ್ಗೆ 7½ ಗಂಟೆಗೆ

ಆಫೀಸಿಗೆ ಬಂದರೂ ಕೂಡ $10\frac{1}{2}$ ಗಂಟೆ ಮೇಲೆ ಒಂದು ಗಾಡಿ ಮೇಲೆ ಪೋಲು ಇಟ್ಟುಕೊಂಡು 20 ಜನ ತಳ್ಳಿಕೊಂಡು ಹೋಗುತ್ತಾ ಇರುವುದನ್ನು ನೋಡುತ್ತಾ ಇದ್ದೇವೆ. ನಾವು ಇದನ್ನು ಯಾವತ್ತಾದರೂ ನೋಡಬಹುದು. ಇದು ಎಲ್ಲರ ಅನುಭವದಲ್ಲಿಯೂ ಇದೆ. ಈ ರೀತಿಯಾದಂಥ ಕೆಲಸಗಳನ್ನು ಎಲೆಕ್ಟ್ರಿಸಿಟಿ ಬೋರ್ಡ್ ಅಧಿಕಾರಿಗಳು ಮಾಡುತ್ತಿದ್ದಾರೆ. ಇದರಿಂದ ಎಷ್ಟು ಲೀಕೇಜ್ ಮತ್ತು ಟ್ಯಾಂಪರಿಂಗ್ ಜಾಸ್ತಿ ಆಗುತ್ತಾ ಇದೆ. ಇದನ್ನೆಲ್ಲಾ ಸರ್ಕಾರದವರು ಗಮನ ತೆಗೆದುಕೊಂಡು ಇದರಿಂದಾಗುವ ಲೀಕೇಜ್ ಮತ್ತು ಟ್ಯಾಂಪರಿಂಗನ್ನು ನಿಲ್ಲಿಸಿದರೆ ನಾವು ಯಾರಿಂದಲೂ ಸಾಲ ಪಡೆಯಬೇಕಾಗಿಲ್ಲ. ಇದನ್ನು ನಿಲ್ಲಿಸುವುದಕ್ಕೆ ಸಾಧ್ಯ ಇದೆ. ಇದನ್ನು ಮುಂದುವರಿಸುವುದಾದರೆ ಅವರಿಗೆ ನಾವು ಕೊಡತಕ್ಕ ಸಬ್ಸಿಡಿಯನ್ನು ಕೊಡುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳಬಹುದು.

ಇನ್ನೊಂದು ವಿಷಯ ಏನೆಂದರೆ ವಿದ್ಯುಚ್ಛಕ್ತಿ ಮಂಡಲಿಯಲ್ಲಿರತಕ್ಕ ಅಧಿಕಾರಿಗಳನ್ನು ಸಾರ್ವಜನಿಕರೇ ಆಗಲಿ, ವಿಧಾನಸಭಾ ಸದಸ್ಯರೇ ಆಗಲಿ ಹೋಗಿ ನೋಡಬೇಕಾದರೆ ಅವರು ಛೇಂಬರಿನಲ್ಲಿ ಸಿಕ್ಕುವುದೇ ಕಷ್ಟ. ಅವರು ಇದಕ್ಕೆಲ್ಲಾ ನಾವು ಜವಾಬ್ದಾರರಲ್ಲ ಎನ್ನುವ ದುರಹಂಕಾರದಿಂದ ನಡೆಯುತ್ತಾರೆ. ಈ ಸಭೆಯಲ್ಲಿ ಹಿಂದೆ ಮಾನ್ಯ ಉಪಮಂತ್ರಿಗಳನ್ನು ಕೇಳಿದ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಬೋರ್ಡ್ ಛೇರ್ಮನ್‌ಗೆ 2,500 ರೂಪಾಯಿ ಸಂಬಳ ಕೊಡುತ್ತಿದ್ದೇವೆ ಎಂದು ಹೇಳಿದರು. ಹಿಂದಿದ್ದ ಛೇರ್ಮನ್‌ಗೆ 900 ರೂಪಾಯಿ ಸಂಬಳ ಕೊಡುತ್ತಿದ್ದರೂ ಕೂಡ ಈವಾಗಿನಷ್ಟು ಗೊಂದಲ ಇರಲಿಲ್ಲ. ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ 35 ಸಾವಿರ ಜನ ಕೆಲಸಗಾರರು ಇದ್ದಾರೆ. ನಾನು ಒಂದು ಮೀಟಿಂಗಿಗೆ ಹೋಗಿ ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರನ್ನು ಒಂದು ಪ್ರಶ್ನೆ ಕೇಳಿದಾಗ ಅವರು No man on this earth can change legislation ಎಂದು ಉತ್ತರ ಕೊಟ್ಟರು. ಆದುದರಿಂದ ಈ ಮಂಡಲಿಯನ್ನು ರದ್ದುಮಾಡಿ ಹಿಂದೆ ಇದ್ದ ಹಾಗೆ ಸರ್ಕಾರದ ವತಿಯಿಂದ ನಡೆಸಬೇಕು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಮಂಡಲಿಯವರು ಸರ್ಕಾರದವರ ಕಡೆ ತೋರಿಸಿ ಅವರು ಏನೂ ಸಹಾಯ ಮಾಡಲಿಲ್ಲ ಎನ್ನುವುದು, ಬ್ಯಾಂಕ್‌ನಲ್ಲಿ ಸಾಲ ಎತ್ತುವುದು ಈರೀತಿ ಮಾಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಇದು ಸಾರ್ವಜನಿಕರ ದುಡ್ಡು ಎನ್ನುವ ಮನೋಭಾವನೆಯನ್ನು ತಿಳಿದುಕೊಳ್ಳಬೇಕು. ನಾನು ವೈಯಕ್ತಿಕವಾಗಿ ಈ ಆಪಾದನೆ ಮಾಡುತ್ತಾ ಇಲ್ಲ. ಇದರ ಬಗ್ಗೆ ವಿಚಾರಣೆ ನಡೆಸಬೇಕು. ಒಂದು ಉದಾಹರಣೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಸಾಯಿಬಾಬ ಮಂದಿರ ಇದೆ. ಅಲ್ಲಿಗೆ ಇವರು ವ್ಯಾನ್ ತೆಗೆದುಕೊಂಡು ವಾರಕ್ಕೆ 5 ಸಲ ಸಾಯಿಬಾಬನನ್ನು ನೋಡಲಿಕ್ಕೆ ಬರುತ್ತಾರೆ. ಅವರಿಗೆ ವ್ಯಾನ್ ಕೊಟ್ಟಿರುವುದು ಇದೇ ಕೆಲಸಕ್ಕಾಗಿಯೇ ಎಂದು ಕೇಳಬೇಕಾಗಿದೆ. ಬೇಕಾದರೆ ವಿಚಾರಣೆ ಮಾಡಿ. ಇನ್ನು ಏನೇನು ವ್ಯವಹಾರ ನಡೆಯುತ್ತಿದೆಯೋ ? ಎಲೆಕ್ಟ್ರಿಸಿಟಿ ಬೋರ್ಡ್ ವ್ಯಾನನ್ನು ತಮ್ಮ ಸ್ವಂತ ಕಾರಿನ ಹಾಗೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ರೀತಿ ವೈಟ್ ಫೀಲ್ಡ್‌ಗೆ ಓಡಾಡುತ್ತಾ ಇರುವುದನ್ನು ಹೇಳುವುದಕ್ಕೆ ಹೋದರೆ ನಮಗೆಲ್ಲಾ ಗೊತ್ತಿದೆ ಎಂದು ಹೇಳುತ್ತಾರೆ. ಅವರು ಏನು ತಿಳಿದುಕೊಂಡಿದ್ದಾರೋ ಗೊತ್ತಿಲ್ಲ. ನಾನು ಮುಖ್ಯಮಂತ್ರಿಗಳಿಗೆ ಇದನ್ನು ಸರಿಯಾಗಿ ವಿಚಾರಣೆಮಾಡಬೇಕು ಎಂದು ಕೇಳುತ್ತೇನೆ. ಬೇರೆ ವಿಚಾರದಲ್ಲೂ ಕೆಲವು ಆಪಾದನೆ ಮಾಡಿದ್ದೇನೆ, ಅವರು ಮಾಡುವಂಥ ಕೆಲಸಗಳನ್ನು ನೋಡಿದ್ದೇನೆ. ಈ ವಿದ್ಯುಚ್ಛಕ್ತಿ ಮಂಡಲಿಯವರು ಅವರದೇ ಆದ ಒಂದು ಚೀಫ್ ಅಕೌಂಟ್ಸ್ ಆಫೀಸ್‌ರನ್ನು ಇಟ್ಟುಕೊಂಡಿದ್ದಾರೆ. ಆದುದರಿಂದ ಈ ಆಡಳಿತವನ್ನು ಸ್ಟೇಟ್ಸ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ನವರು ಹತೋಟಿಯಲ್ಲಿ ಇಡುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ಇಂದು ವಿದ್ಯುಚ್ಛಕ್ತಿ ಬೋರ್ಡ್ ಇದೆ, ಅದರಮೇಲೆ ಲೆಕ್ಕ ತನಿಖೆ ಇಲಾಖೆಯ ಹತೋಟಿ ಇದೆ, ಈ ಬೋರ್ಡಿನಲ್ಲಿ ಒಬ್ಬರು ವಿಶೇಷ ಅಕೌಂಟ್ಸ್ ಆಫೀಸರಿದ್ದಾರೆ. ರಿಟೈರ್ ಆದವರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡಿದ್ದಾರೆ, ಅವರಮೇಲೆ ಬೇಕಾದಷ್ಟು ಆಪಾದನೆಗಳಿವೆ. ಬೋರ್ಡ್ ಡಿಬೆಂಚರ್ ಫ್ಲೋಟ್ ಮಾಡುವುದು, ಬ್ಯಾಂಕುಗಳಿಂದ ಸಾಲ ಪಡೆಯುವುದು ಇದೆಲ್ಲಾ ನಡೆಯುತ್ತಿದೆ. ಬ್ಯಾಂಕುಗಳಿಂದ ಸಾಲ ಪಡೆಯುವುದು, ಆ ಹಣವನ್ನು ಡ್ರಾ ಮಾಡದೆ ಬ್ಯಾಂಕುಗಳಲ್ಲೇ ಬಿಟ್ಟು ಬಡ್ಡಿ ಹಂಚಿಕೊಳ್ಳುತ್ತಿದ್ದಾರೆ, ಇದನ್ನು ತೀವ್ರವಾಗಿ ಪರಿಶೀಲಿಸಬೇಕು. ಛೇರ್ಮನ್ನರಮೇಲೆ ಹಿಂದೆ ಎನ್‌ಕ್ವೈರಿ ಇತ್ತು, ಒಬ್ಬರು ಸ್ಟೇಟ್ ಸಿ. ಐ. ಡಿ. ಅವರಮೇಲೆ ನಿಗಾ ಇಟ್ಟಿದ್ದರು, ಅವರಮೇಲೆ ಇರುವ ಆಪಾದನೆಗಳ ಪರಿಶೀಲನೆಯಾಗಿಲ್ಲ. ಹಾಗಿರುವಾಗ ಅವರನ್ನೇ ಛೇರ್ಮನ್ನಾಗಿ ನೇಮಿಸಿದ್ದಾರೆ. ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಜವಾಬು ಕೊಡಬೇಕು.

ಇಂದು ಸರಕಾರದ ಧೋರಣೆ ಪ್ರಕಾರ ಅಟಾನಮಸ್ ಬಾಡಿಗಳಲ್ಲಿ ರೈತರ ಕಷ್ಟಸುಖ ಹಿತ ಏನಿವೆ, ಅವರ ಸಮಸ್ಯೆ ಏನಿದೆ ಅದನ್ನು ತಿಳಿಯಲು ಅನುಭವವಿರುವವರನ್ನು ಛೇರ್ಮನ್ ಮಾಡುತ್ತೀರಿ. ಈಗಿರುವ ಕಾರ್ಪೊರೇಷನ್ನುಗಳಿಗೆ ಮಂತ್ರಿಗಳು ಅಥವ ಉಪಮಂತ್ರಿಗಳು ಛೇರ್ಮನ್ ಆಗಿರುವರು. ಹಾಗಿರುವಾಗ ವಿದ್ಯುಚ್ಛಕ್ತಿ ಬೋರ್ಡಿಗೂ ಕೂಡ ಮಂತ್ರಿಗಳೇ ಏಕೆ

(ಶ್ರೀ ಎನ್. ಚಿಕ್ಕೇಗೌಡ)

ಛೇರ್ಮನ್ ಆಗಿರಬಾರದು ? ಸಂಬಂಧಪಟ್ಟ ಮಂತ್ರಿಗಳನ್ನು ಛೇರ್ಮನ್ ಮಾಡಬಹುದು. ರಿಟೈರ್ಡ್ ಸಿವಿಲ್ ಸರ್ವಿಸ್ ಆಫೀಸರಿಗೆ ಜನರ ಕಷ್ಟಸುಖ ಗೊತ್ತಾಗುವುದಿಲ್ಲ, ಜನರ ನೋವನ್ನು ತಿಳಿಯಲು ಅವರಿಗೆ ತಾಳ್ಮೆ ಇರುವುದಿಲ್ಲ. ಯಾವುದಾದರೂ ಚರ್ಚೆಯಾಗುತ್ತಿದ್ದರೆ ಮಧ್ಯೆ ಎದ್ದು ಹೋಗುವರು.

[SRI D. M. SIDDAIAH in the Chair]

ಅವರಿಗೆ ಬೇರೆ ಸಭೆಗಳಿಗೆ ಹೋಗಬೇಕಾದ ಕೆಲಸವಿರಬಹುದು. ದೆಹಲಿಯ ಲೆವಲ್ಲಿನಲ್ಲೂ ಅವರಿಗೆ ಕೆಲಸವಿರಬಹುದು. ಮಂಡಲಿಯಲ್ಲಿ ದುರಾಡಳಿತವಿದೆ, ಹಣ ಪೋಲಾಗುತ್ತಿದೆ ಎಂದು ಇಂದು ಎಲ್ಲಾ ಸದಸ್ಯರೂ ಹೇಳುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ರೈತರು ಗಾಡಿ ತಂದು ಪೋಲು ಗಳನ್ನು ತೆಗೆದುಕೊಂಡುಹೋಗಿ ಬೇರಾದ ಕಡೆಗೆ ಹಾಕುತ್ತಿದ್ದಾರೆ. ಪಂಪ್‌ಹೌಸಿನ ಹತ್ತಿರಕ್ಕೆ ರೈತರು ಪೋಲನ್ನು ಸಾಗಿಸುವರು. ಅದರೂ ಕೂಡ ಜಾಗ್ರತೆ ಸರ್ವಿಸ್ ಕೊಡುವುದಿಲ್ಲ. ರೋಡ್ ಹೆಚ್ಚಾಗಿ ಕೆಲವು ಕಡೆ ಮೋಟಾರುಗಳು ಸುಟ್ಟುಹೋಗುತ್ತಿವೆ. ಸರಕಾರದಲ್ಲಿ ಬಾವಿಗೆ ಸಾಲ, ಪಂಪಿಗೆ ಸಾಲ ಹೀಗೆ ನಾನಾ ರೀತಿಯಲ್ಲಿ ತೆಗೆದುಕೊಂಡು ರೈತರು ಸಾಲಗಾರರ ಮಕ್ಕಳಾಗು ತ್ತಿದ್ದಾರೆ.

ಇನ್ನೊಂದು ಅಂಶ. ವಿದ್ಯುಚ್ಛಕ್ತಿ ಬೋರ್ಡಿಗೂ ವಿದ್ಯುತ್ತನ್ನು ಉತ್ಪತ್ತಿಮಾಡುವ ಹೈಡ್ರೋ ಎಲೆಕ್ಟ್ರಿಕ್ ಇಲಾಖೆಗೂ ಹೊಂದಾಣಿಕೆಯಿಲ್ಲ. ನಮ್ಮ ದೇಶದಲ್ಲಿ ಬಹಳ ಕನಿಷ್ಠ ದರದಲ್ಲಿ ವಿದ್ಯುತ್ ಉತ್ಪತ್ತಿಯಾಗುತ್ತಿದೆ. ಇಡೀ ಭಾರತದಲ್ಲಿ ನಮ್ಮಲ್ಲಿ ಬಹಳ ಕಡಮೆ ಖರ್ಚಿನಲ್ಲಿ ವಿದ್ಯುತ್ತನ್ನು ಉತ್ಪತ್ತಿಮಾಡುತ್ತಿದ್ದಾರೆ, ಕಾರಣ ನೀರಿನ ಸಹಾಯದಿಂದ ಉತ್ಪತ್ತಿಮಾಡುವರು. ಒಂದು ಯೂನಿಟ್ಟಿಗೆ 2·8 ಪೈಸೆ ಬೀಳುವುದು, ಅದನ್ನು ಮಂಡಲಿ 4·8 ಪೈಸೆಯಂತೆ ಮಾರುತ್ತಿದೆ, ಜೊತೆಗೆ ಡ್ಯೂಟಿ ಬೇರೆ ಹಾಕುತ್ತಿದ್ದಾರೆ. ಸರಕಾರ ಇದರಿಂದ ಲಾಭ ಪಡೆಯುತ್ತಿದೆ. ಬೋರ್ಡ್ ಮಿತವ್ಯಯಮಾಡಬಹುದು, ಹಣ ಪೋಲಾಗುತ್ತಿದೆ. ಸಾಮಾನುಗಳನ್ನು ಕದ್ದು ಮಾರುತ್ತಿದ್ದಾರೆ, ಲೆಕ್ಕ ಸರಿಯಾಗಿಲ್ಲ. ಪೆಟ್ರೋಲನ್ನು ಲಾರಿಗಳಿಗೆ ಹಾಕಿಸುವಾಗ ಬಂಕುಗಳಲ್ಲಿ ಹತ್ತು ಲೀಟರನ್ನು ಕಡಮೆ ಹಾಕಿಸಿಕೊಂಡು ತಪ್ಪು ಲೆಕ್ಕ ಕೊಟ್ಟು ಅದನ್ನು ಮಾರಿಕೊಂಡುಬಿಡುತ್ತಾರೆ ಎಂದು ಒಬ್ಬ ಸದಸ್ಯರು ಹೇಳುತ್ತಿದ್ದಾರೆ. ಇದಕ್ಕೆಲ್ಲಾ ಅವಕಾಶ ಕೊಡಬಾರದು. ಇದನ್ನು ಪರಿಶೀಲನೆ ಮಾಡಿ ಸರಿಪಡಿಸಿದರೆ ಇದರಲ್ಲಿ ಆಗತಕ್ಕ ನಷ್ಟವನ್ನು ಕಡಿಮೆ ಮಾಡಿ ಕೊಳ್ಳುವುದಕ್ಕೆ ಅವಕಾಶವಿದೆ. ನಮ್ಮಲ್ಲಿ ನೀರಾವರಿ ಇರುವುದು ಕೇವಲ 7–8 ಪರ್ಸೆಂಟು. ಬಾವಿಯ ಮೂಲಕ ನೀರನ್ನು ಉಪಯೋಗ ಮಾಡಿಕೊಳ್ಳಲು ಅವಕಾಶ ಇರುವುದು ಕೇವಲ ಒಂದೆರಡು ಪರ್ಸೆಂಟ್ ಮಾತ್ರ ಆಗಿದೆ. ಟ್ಯಾರಿಫ್ ಬೋರ್ಡಿನವರು ಮಿನಿಮಂ ಚಾರ್ಜಸ್ ಜಾರಿ ಮಾಡಬಾರದು ಎಂದು ಹೇಳಿದ್ದರೂ ಕೂಡ ಕಾನೂನು ತಿಳಿಯದೆ, ಕೋರ್ಟಿಗೆ ಹೋಗಲು ಶಕ್ತಿ ಇಲ್ಲದ ರೈತರಮೇಲೆ ಹೆಚ್ಚಿನ ಹೊರೆಯನ್ನು ಹಾಕಿರುವುದನ್ನು ತೀವ್ರವಾಗಿ ವಿರೋಧಿಸಬೇಕಾಗಿದೆ. ಅನೇಕ ವೇಳೆ ಬಾವಿ ಯಲ್ಲಿ ನೀರು ಇಲ್ಲದೇ ಪಂಪನ್ನು ಉಪಯೋಗಿಸುವುದಕ್ಕೆ ಆಗುವುದಿಲ್ಲ ಮತ್ತು ಕೆಲವು ವೇಳೆ ಪಂಪು ಸೆಟ್ಟುಗಳು ಕೆಟ್ಟುಹೋಗಿ ಕೆಲಸ ಮಾಡುವ ಸ್ಥಿತಿಯಲ್ಲಿರುವುದಿಲ್ಲ. ಇವನ್ನೆಲ್ಲಾ ಗಮನದಲ್ಲಿಟ್ಟು ಕೊಂಡು ಒಂದು ತೀರ್ಮಾನವನ್ನು ಮಾಡಬೇಕಾಗಿತ್ತು. 35 ಸಾವಿರ ಕೆಲಸಗಾರರನ್ನು ಇಟ್ಟು ಕೊಂಡು ಅಧಿಕಾರಿಗಳಿಂದ ಹಿಡಿದು ಚೇರ್ಮನ್‌ವರೆಗೂ ಸಾವಿರಾರು ರೂಪಾಯಿಗಳ ಸಂಬಳ ಕೊಟ್ಟು, ರೈತನ ಮೇಲೆ ಇಂತಹ ಹೊರೆಯನ್ನು ಹೇರುವುದು ಸರ್ವಥಾ ನ್ಯಾಯವಲ್ಲ. ಇದರ ಚೇರ್ಮನ್‌ರಿಗೆ 2,200 ರೂಪಾಯಿ ಸಂಬಳ, ಎರಡು ಕಾರು. ಅದಕ್ಕಿಂತ ಹೆಚ್ಚಾಗಿ ರಿಟೈರ್ಡ್ ಸಿವಿಲ್ ಸರ್ವಿಸ್ ಅಧಿಕಾರಿಯನ್ನು ಮತ್ತೆ ನೇಮಕ ಮಾಡಿರುವುದು ಬಹಳ ದುಃಖಕರವಾದ ಸಂಗತಿ. ಯಾರು ಹೋದರೂ ಅವರು ಇಂಟರ್‌ವ್ಯೂ ಕೊಡುವುದಿಲ್ಲ ಎಂದು ಹೇಳುತ್ತಾರೆ. ಸಿನಿಮಾಗಳಿಗೆ 21 ಪೈಸೆ, ಹೊಟೇಲುಗಳಿಗೆ 10 ಪೈಸೆ, ಐ.ಪಿ. ಸೆಟ್ಟುಗಳಿಗೆ 11 ಪೈಸೆ ಒಂದು ಯುನಿಟ್ಟಿಗೆ ಈ ರೀತಿ ನಿಗದಿ ಮಾಡಿರುವುದು ಅಷ್ಟು ಸರಿಯಾಗಿ ಕಾಣುತ್ತಿಲ್ಲ. ನಮ್ಮ ದೇಶದ ಆಹಾರ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಹಸಿರು ಕ್ರಾಂತಿಯಾಗಬೇಕೆಂದು ಹೇಳುವಾಗ ಈ ರೀತಿ ಹೆಚ್ಚಿನ ದರವನ್ನು ನಿಗದಿ ಮಾಡಿದ್ದೇ ಆದರೆ ಯಾವ ರೀತಿ ಹಸಿರು ಕ್ರಾಂತಿಯಾದೀತು ಎಂಬುದನ್ನು ತಾವು ಯೋಚನೆ ಮಾಡಬೇಕು. ನಾನು ಪಾಶ್ಚಿಮಾತ್ಯ ದೇಶಗಳಲ್ಲಿ ನೋಡಿದ್ದೇನೆ, ಅಮೇರಿಕಾದಲ್ಲಿ ರೂರಲ್ ಎಲೆಕ್ಟ್ರಿ ಫಿಕೇಷನ್‌ಗೆ ಮತ್ತು ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಕೊಡಬೇಕಾದರೆ ವಾರ್ ಫುಟಿಂಗನಂತೆ ಅದಕ್ಕೆ ಒಂದು ಪ್ರತ್ಯೇಕವಾದ ಡಿಪಾರ್ಟ್‌ಮೆಂಟನ್ನೇ ಇಟ್ಟು ಅದಕ್ಕೆ ಬೇಕಾದ ಎಲ್ಲಾ ಸೌಕರ್ಯ ಗಳನ್ನೂ ಮಾಡಿಕೊಡುತ್ತಾರೆ. ಅದೇ ರೀತಿ ರಾಜಾಸ್ಥಾನ್ ಮತ್ತು ಮಧ್ಯಪ್ರದೇಶದಲ್ಲೂ ಸಹ

ಒಂದು ಪ್ರತ್ಯೇಕವಾದ ಇಲಾಖೆಯನ್ನು ಇಟ್ಟು ಅದಕ್ಕೆ ರೂರಲ್ ಎಲೆಕ್ಟ್ರಿಫಿಕೇಷನ್ ಕೆಲಸವನ್ನು ವಹಿಸಿದ್ದಾರೆ. ಆ ರೀತಿ ನಮ್ಮ ಮೈಸೂರು ಸಂಸ್ಥಾನದಲ್ಲೂ ಒಂದು ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಭೆಯ ಮೂಲಕ ಪ್ರಾರ್ಥನೆ ಮಾಡುತ್ತೇನೆ. ನಾನಾಗಲೇ ಆ ಸಿಬ್ಬಂದಿ ವರ್ಗದವರ ಬಗ್ಗೆ ಮತ್ತು ಪವರ್‌ಇಂಟರಪ್ಷನ್ ವಿಚಾರಗಳನ್ನೆಲ್ಲಾ ಹೇಳಿದ್ದೇನೆ. ಸರ್ಕಾರದವರು ಈ ದಿವಸ ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕೆಂಬ ಉದ್ದೇಶದಿಂದ ಯಾರು ಕೈಗಾರಿಕೆಗಳನ್ನು ನಡೆಸುವುದಕ್ಕೆ ಮುಂದೆ ಬರುತ್ತಾರೋ ಅಂಥವರಿಗೆ ಉಚಿತವಾಗಿ ಭೂಮಿಯನ್ನೂ ಮತ್ತು ರಿಯಾಯಿತಿಯ ದರದಲ್ಲಿ ವಿದ್ಯುಚ್ಛಕ್ತಿಯನ್ನೂ ಮತ್ತು ಕನ್‌ವರ್‌ಷನ್ ಛಾರ್ಜ್‌ಗಳನ್ನೂ ಒದಗಿಸುವುದಾಗಿ ಹೇಳಲಾಗುತ್ತಿದೆ. ದೇಶದಲ್ಲಿ ಹೆಚ್ಚು ಆಹಾರ ಉತ್ಪಾದನೆ ಮಾಡತಕ್ಕ ರೈತನ ವಿಚಾರದಲ್ಲಿ ಇದೇ ರಿಯಾಯಿತಿಗಳನ್ನು ಏಕೆ ಕೊಡುತ್ತಿಲ್ಲಾ ! ಇಂಥ ಅನುಕೂಲಗಳನ್ನು ರೈತರಿಗೂ ಒದಗಿಸಬೇಕೆಂದು ನಾವು ಒತ್ತಾಯ ಮಾಡುತ್ತಿದ್ದರೂ ಕಳೆದ 10 ವರ್ಷಗಳಿಂದಲೂ ಆ ವಿದ್ಯುಚ್ಛಕ್ತಿ ಮಂಡಳಿಯವರು ಮನಸ್ಸು ಮಾಡಿಲ್ಲ; ಅವರಲ್ಲಿ ಸ್ವಲ್ಪವೂ ಕರುಣೆಯಿಲ್ಲ. ಅವರು ಯಾವತ್ತೂ ಸುಪತ್ತಿಗೆಯ ಮೇಲೆ ಕುಳಿತಿರತಕ್ಕವರು. ಅವರಿಗೆ ರೈತನ ಕಷ್ಟಗಳು ಹೇಗೆ ಗೊತ್ತಾಗಬೇಕು ? ಇಲ್ಲಿಯವರೆಗೂ ಅವರು ಆ ಬೋರ್ಡಿನಲ್ಲಾಗತಕ್ಕ ಲೀಕೇಜನ್ನು ತಡೆಗಟ್ಟುವುದಕ್ಕಾಗಿಲ್ಲ. ಸ್ಟೋರಿನಲ್ಲಿ ನಡೆಯುತಕ್ಕ ಕಳುವನ್ನು ನಿಲ್ಲಿಸುವುದಕ್ಕಾಗಿಲ್ಲ. ಅವರಿಗೆ ರೈತನ ಕಷ್ಟ ಗೊತ್ತಾಗುವುದಿಲ್ಲ. ಈ ಬೋರ್ಡಿನಿಂದ ದೇಶಕ್ಕೇನೂ ಪ್ರಯೋಜನವಿಲ್ಲ. ಸರ್ಕಾರದವರು ಈ ಬೋರ್ಡನ್ನು ಉಳಿಸಿಕೊಳ್ಳಲೇಬೇಕು ಎನ್ನುವುದಾದರೆ ಅವರು ರೈತರಿಗೆ ಒದಗಿಸತಕ್ಕ ವಿದ್ಯುತ್ತಿನ ಬಗ್ಗೆ ಅದನ್ನು ಸಬ್‌ಸಿಡೈಜ್ಡ್ ದರದಲ್ಲಿ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿಯವರೆಗೂ ಇದ್ದ ಆ 2 ರೂಪಾಯಿಗಳ ಮಿನಿಮಂ ಛಾರ್ಜನ್ನು ಈಗ 4 ರೂಪಾಯಿಗಳಿಗೇರಿಸಿದ್ದಾರೆ. ಅದನ್ನು ತಪ್ಪಿಸಿ ಮತ್ತೆ ಅದನ್ನು 2 ರೂಪಾಯಿಗಳಿಗೇ ಇಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಒಂದು ವಿಷಯ ಎಂದರೆ ಈ ಎಲೆಕ್ಟ್ರಿಕಲ್ ಛಾರ್ಜನ್ನು ವರ್ಷಕ್ಕೊಂದು ಸಾರಿ ವಸೂಲ್ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಆ ಟ್ಯಾರೀಫ್ ಚಾರ್ಜುಗಳಲ್ಲಿ ಕೈಗಾರಿಕೆಗಳವರಿಗೆ ಸೇರಿದಂತೆ ಅನೇಕ ವಿಷಯಗಳನ್ನು ಹೇಳಿದ್ದಾರೆ. ಅದಕೆಲ್ಲಾ ಕಾರಣ ಆ ಟ್ಯಾರಿಫ್ ಬೋರ್ಡಿನಲ್ಲಿ ಸಾಕಷ್ಟು ಮಂದಿ ಕೈಗಾರಿಕಾ ಕ್ಷೇತ್ರದಲ್ಲಿರತಕ್ಕ ಜನರ ಪ್ರಾತಿನಿಧ್ಯವಿದೆ. ಅದರಲ್ಲಿ ಒಬ್ಬ ರೈತಪ್ರತಿನಿಧಿಗೆ ಅವಕಾಶ ಮಾಡಿಕೊಟ್ಟರುವಂತೆ ನನಗೆ ತಿಳಿದು ಬಂದಿದೆ. Since majority of the representatives are from Electricity Board and from industrial and other sectors, it is not possible for one member to represent the grievances of the agriculturists. Therefore I suggest to the Government that there should be more number of representatives from the farmers and agriculturists in the Tariff Board. ಈ ಅನ್ಯಾಯಗಳನ್ನೆಲ್ಲಾ ಸರಿಪಡಿಸಿದರೆ ಆಗ ನಾವು ಈ ಆನ್ಯುಯಲ್ ಫೈನಾನ್‌ಷಿಯಲ್ ಸ್ಟೇಟ್‌ಮೆಂಟಿಗೆ ನಮ್ಮ ಅನುಮೋದನೆಯನ್ನು ನೀಡಬಹುದು. ನಾನು ಇಲ್ಲಿಯವರೆಗೂ ಹೇಳಿರತಕ್ಕ ಅನ್ಯಾಯಗಳನ್ನು ಸರ್ಕಾರದವರು ಕೂಡಲೆ ತಡಗಟ್ಟಬೇಕು. ಆ ವಿದ್ಯುಚ್ಛಕ್ತಿಯ ಮಂಡಳಿಯಲ್ಲಿ ನಡೆಯುತ್ತಿರುವ ಅವ್ಯವಸ್ಥೆಗಳ ಬಗ್ಗೆ ಕೂಡಲೇ ಪರಿಶೀಲನೆಗಳನ್ನು ನಡೆಸಿ ಸೂಕ್ತಕ್ರಮಗಳನ್ನು ಕೈಗೊಳ್ಳಬೇಕು. ಈ ಸರ್ಕಾರದ ಬಗ್ಗೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರಿಗೆ ಒಂದು ಒಳ್ಳೆಯ ಭಾವನೆ ಉಂಟಾಗಬೇಕಾಗಿದ್ದರೆ ನಮ್ಮ ರಾಜ್ಯ ಸರ್ಕಾರದವರು ಸುಗಮವಾಗಿ ಅವರ ಆಡಳಿತವನ್ನು ನಡೆಸಿಕೊಂಡು ಹೋಗಬೇಕೆಂಬ ಅಭಿಲಾಷೆ ಅವರಿಗಿದ್ದರೆ ಅವರು ದೇಶದಲ್ಲಿ ರೈತರು ಆಂದೋಳನ ಮಾಡುವುದಕ್ಕೆ ಅವಕಾಶವನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ರೈತರು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆದು ಅವರು ದೇಶವನ್ನು ಸಾಕಬೇಕೆಂಬ ಅಭಿಲಾಷೆ ಇದ್ದರೆ ಆ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಹಣ ಪೋಲಾಗುವುದನ್ನು ಕೂಡಲೆ ತಡಗಟ್ಟಬೇಕು. ಸರ್ಕಾರದವರು ಕೈಗಾರಿಕೆಗಳಿಗೆ ಉತ್ತೇಜನವನ್ನು ಕೊಡುತ್ತಿರುವ ಹಾಗೆ ರೈತರಿಗೂ ಉತ್ತೇಜನ ನೀಡಿ ಅವರಿಗೆ ಹಾಲಿ ಹೆಚ್ಚುಮಾಡಿರತಕ್ಕ ವಿದ್ಯುತ್ ದರವನ್ನು ತಗ್ಗಿಸಿ ಸಾಧ್ಯವಾದರೆ ಸರ್ಕಾರದವರು ಅದಕ್ಕೆ ಸಾಕಷ್ಟು ಸಬ್‌ಸಿಡೈಜ್ ಮಾಡಿ ದೇಶದಲ್ಲಿ ಹೆಚ್ಚು ಆಹಾರ ಉತ್ಪಾದನೆಗೆ ಅವಕಾಶಮಾಡಿಕೊಡಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ನಾಗಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ನಾನು ಪ್ರಥಮವಾಗಿ ಶ್ರೀಮಾನ್ ಚಿಕ್ಕೇಗೌಡರಿಗೆ ಅಭಿನಂದಿಸುತ್ತೇನೆ. ಏಕೆಂದರೆ ಅವರು ಸಾಕಷ್ಟು ಪ್ರಯತ್ನಮಾಡಿ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ನಡೆದಿರತಕ್ಕ ಅನ್ಯಾಯಗಳನ್ನು ಪರಿಶೀಲನೆಮಾಡಿ ಸ್ವಲ್ಪ ಅದರ ವಿವರ

(ಶ್ರೀ ಎಂ. ನಾಗಪ್ಪ)

ಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ಈ ಕೆಲಸವನ್ನು ಸರ್ಕಾರ ಮಾಡಬೇಕಾಗಿತ್ತು. ಅದನ್ನು ಸರ್ಕಾರ ಮಾಡಲಿಲ್ಲವೆಂದು ನಾನು ಮೊದಲನೆಯ ದೋಷವನ್ನು ಸರ್ಕಾರಕ್ಕೆ ಕೊಡುತ್ತೇನೆ. ನಾನು 1967ರಲ್ಲಿ ಈ ಮನೆಯ ಸದಸ್ಯನಾದೆ. 1967-68 ಮತ್ತು 1968-69ರಲ್ಲಿ ಇಂತಹ ಆನ್ಯುಯಲ್ ಫೈನಾನ್ಸಿಯಲ್ ಸ್ಟೇಟ್‌ಮೆಂಟ್‌ಗಳನ್ನು ಈ ಸಭೆಯ ಮುಂದೆ ಇಟ್ಟರೂ ಇಂತಹ ಒಂದು ಚರ್ಚೆಯ ಅವಕಾಶವನ್ನು ಸರ್ಕಾರ ಪ್ರತಿವರ್ಷ ಕೊಟ್ಟಿದ್ದರೆ ಇವತ್ತು ಇರತಕ್ಕ ನ್ಯೂನತೆಗಳು ಕಾಣುತ್ತಿರಲಿಲ್ಲ. ಈ ಮಂಡಲಿಯ ಮೇಲೆ ಯಾವ ತರಹ ಅಧಿಕಾರವನ್ನು ಈ ಸಭೆಯಾಗಲೀ ಅಥವಾ ಸರ್ಕಾರವಾಗಲೀ ಇಟ್ಟುಕೊಳ್ಳುವುದರಲ್ಲಿ ವಿಫಲಗೊಂಡಿದ್ದಾರೆ. ಸರಿಯಾದ ರೀತಿಯಲ್ಲಿ ಅದರ ಮೇಲೆ ಹತೋಟಿಯನ್ನು ಇಡಬೇಕಾಗಿತ್ತು. ಆವರೆ ಇವತ್ತು ವಿರೋಧಪಕ್ಷದ ಸದಸ್ಯರ ಒತ್ತಾಯದಿಂದ ಇದನ್ನು ಪರಿಶೀಲನೆಮಾಡಲು ತೆಗೆದುಕೊಂಡಿದ್ದಾರೆ. ಏನೇ ಆಗಲಿ ಇವತ್ತು ಒಂದು ಶುಭಕಾರ್ಯವನ್ನು ಮಾಡುತ್ತಿದ್ದೇವೆಂದು ಹೇಳಿ ನಾನು ಇದರ ಬಗ್ಗೆ ಕೆಲವು ವಿಚಾರಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಮೊಟ್ಟ ಮೊದಲನೆಯದಾಗಿ ಹೇಳಬೇಕೆಂದರೆ ಸರ್ಕಾರ ಯಾವ ಅಧಿಕಾರವನ್ನು ಮಂಡಲಿಯ ಮೇಲೆ ಇಟ್ಟುಕೊಳ್ಳಬೇಕಾಗಿತ್ತೋ ಅದನ್ನು ಸರ್ಕಾರದವರು ಇಟ್ಟುಕೊಂಡಿಲ್ಲ. ಇವತ್ತು ಫೆಬ್ರುವರಿ ತಿಂಗಳಲ್ಲಿ ಅವರು ಆನ್ಯುಯಲ್ ಫೈನಾನ್ಸಿಯಲ್ ಸ್ಟೇಟ್‌ಮೆಂಟನ್ನು ಕೊಡುತ್ತಾರೆ. ಸರ್ಕಾರ ಅದನ್ನು ಮೇನಲ್ಲ ಪರಿಶೀಲಿಸುತ್ತದೆ. ಆಮೇಲೆ ಅವರಿಗೆ everything is o. k. ಎಂದು ಗ್ರೀನ್ ಸಿಗ್ನಲ್ ಕೊಡುತ್ತಾರೆ. ಇದರಲ್ಲಿ ಸರ್ಕಾರ ಯಾವುದನ್ನೂ ವಿಮರ್ಶೆ ಮಾಡುತ್ತಾ ಇಲ್ಲ. ಖಚಿತವಾಗಿ ಕೆಲವು ವಿಷಯಗಳನ್ನು ಈ ಸಭೆಯ ಎದುರಿಗೆ ತರುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರು ಸೆಕ್ಷನ್ 61—ಎಲೆಕ್ಟ್ರಿಕ್ ಸಪ್ಲೈ ಆಕ್ಟ್ 1948ನ್ನು ನೋಡಬೇಕು. ಅದರಲ್ಲಿ ಈ ರೀತಿ ಹೇಳಿದ್ದಾರೆ :

"61. (1) In February of each year the Board shall submit to the State Government a statement in the prescribed form of the estimated capital and revenue receipts and expenditure for the ensuing year. (2) The said statement shall include a statement of the salaries of members, Officers and servants of the Board and of such other particulars as may be prescribed. (3) The State Government shall, as soon as may be after the receipt of the said statement, cause it to be laid on the Table of the (House) or as the case may be (Houses) of the State Legislature, and the said statement shall be open to discussion therein, but shall not be subject to vote. (4) The Board shall take into consideration any comments made on the said statement in the State Legislature. (5) The Board may, at any time during the year in respect of which a statement under Sub-Section (1) has been submitted, submit to the State Government a supplementary statement, and all the provisions of this section shall apply to such statement as they apply to the statement under the said sub-section."

ಅಂದರೆ, ಈ ತರಹ ಅಂದಾಜು ಪತ್ರಿಕ ಪ್ರತಿವರ್ಷವೂ ಮಂಡಲಿ ತಯಾರು ಮಾಡುವಂಥಾದ್ದು ಈ ಸಭೆಯ ಗಮನಕ್ಕೆ ತರಬೇಕು. ಈ ಸಭೆ ಅದನ್ನು ಚರ್ಚಿಸಬೇಕೆಂದು ಇದರಲ್ಲಿದೆ. ಅದರ ಸೆಕ್ಷನ್ 65ರಲ್ಲಿ ಈ ರೀತಿ ಹೇಳಿದೆ :

"65. (1) The Board may from time to time, with the previous sanction of the State Government and subject to the the provisions of this Act and to such conditions as may be prescribed in this behalf, borrow any sum required for the

purposes of this Act. (2) Rules made by the State Government for the purposes of this section may empower the Board to borrow by the issue of bonds or stock or otherwise and to make arrangements with bankers, and may apply to the Board with such modifications as may be necessary to be consistent with this Act the provisions of the Local Authorities Loans Act, 1914 and the rules made thereunder as if the Board were a local authority. (3) The maximum amount which the Board may at any time have on loan under Sub-Section (1) shall be ten crores of rupees, unless the State Government, with the approval of the State Legislative Assembly, fixes a higher maximum amount. (4) Stock issued by the Board under this Section shall be issued, transferred, dealt with and redeemed in such manner as may be prescribed."

ಆದ್ದರಿಂದ ಸೆಕ್ಷನ್ 65, ಸಬ್ ಸೆಕ್ಷನ್ (3)ರ ಪ್ರಕಾರ ಸರ್ಕಾರದ ಹತೋಟಿ ಮಂಡಲಿಯುವರ ಮೇಲೆ ಇಲ್ಲವೆಂದು ನಾನು ಹೇಳುತ್ತೇನೆ. ಇವಕ್ಕೆ ಸ್ಪಷ್ಟವಾಗಿ ಅನ್ಯುಯಲ್ ಫಿನಾನ್ಷಿಯಲ್ ಸ್ಟೇಟ್‌ಮೆಂಟ್ ಅಂಡ್ ಬಜೆಟ್ ಎಸ್ಟಿಮೇಟ್ 69-70, ವಾಲ್ಯೂಂ ನಂ. 1ರಲ್ಲಿ, ಕಾಲಂ ನಾಲ್ಕನ್ನು ದಯಪಟ್ಟು ತಾವು ನೋಡಬೇಕು. ಅದರಲ್ಲಿ ಬ್ಯಾಲೆನ್ಸ್ ಔಟ್‌ಸ್ಟ್ಯಾಂಡಿಗ್ ಆಟ್ ದಿ ಎಂಡ್ ಆಫ್ ಮಾರ್ಚ್ 69—17 ಕೋಟಿ 27 ಲಕ್ಷದ 24 ಸಾವಿರ ರೂಪಾಯಿ, ಎಂದು ಇದೆ. ರೀತಿ ಪುಟ 2ರಲ್ಲಿ ಕಾಲಂ 5ರಲ್ಲಿ, ಇಲ್ಲಿ ಕೊಟ್ಟಿದ್ದು 28 ಕೋಟಿ 63 ಲಕ್ಷದ 26 ಸಾವಿರದ 300 ರೂಪಾಯಿ. ಇದನ್ನು ಟೋಟಲ್ ಮಾಡಿದರೆ 45 ಕೋಟಿಯ 90 ಲಕ್ಷದ 50 ಸಾವಿರದ 300 ರೂಪಾಯಿಯಾಗುತ್ತದೆ. ಇದರಲ್ಲಿ ನನಗೆ ಗೊತ್ತಿರುವ ಪ್ರಕಾರ ಈ ಮಾನ್ಯ ಸಭೆಯಲ್ಲಿ ಮಂಡಲಿಗೆ ಕೊಟ್ಟಂತಹ ಅಧಿಕಾರ ಒಂದು ರೆಸೊಲ್ಯೂಷನ್ ಮೂಲಕ ಇದೆ. ಆರೆಸೊಲ್ಯೂಷನ್ ಪಾಸ್ ಮಾಡಿದಂತದ್ದು 21ನೇ ಡಿಸೆಂಬರ್ 1967ರಲ್ಲಿ. ಆ ರೆಸೊಲ್ಯೂಷನ್ ಹೀಗಿದೆ :

It reads as follows :

"Whereas under Sub-section (3) of Section 65 of the Electricity Supply Act, 1948 (Central Act 54 of 1948) approval of the State Legislative Assembly is required for fixing higher maximum amount than rupees ten crores which the Mysore State Electricity Board may, at any time, have on loan under Sub-section (1) of the said section ;

Whereas a resolution was passed by the Mysore Legislative Assembly on the 3rd July, 1964, to enhance the said limit of rupees ten crores to rupees twenty crores ; and

Whereas the Government of Mysore proposes to fix the maximum amount which the Mysore State Electricity Board may, at any time, have on loan under Sub-section (1) of the said Section 65 at rupees thirty crores ;

Now, therefore, the Mysore Legislative Assembly hereby accords approval to the proposal of the State Government to fix, under Sub-section (3) of Section 65 of the said Act, rupees thirty crores as the maximum amount which the Board may at any time, have on loan under Sub-section (1) of Section 65 of the Electricity Supply Act, 1948 (Central Act 54 of 1948)."

ಅಂದರೆ 20 ಕೋಟಿಯಿಂದ 30 ಕೋಟಿಯವರೆಗೆ ಸಾಲ ಮಾಡತಕ್ಕ ಅಧಿಕಾರ ಈ ಅಸೆಂಬ್ಲಿ ಕೊಟ್ಟಿದೆ. ಅವರು ಕೊಟ್ಟಂತಹ ಫಿನಾನ್ಷಿಯಲ್ ಸ್ಟೇಟ್‌ಮೆಂಟ್ ನೋಡಿದರೆ ಅವರು 46 ಕೋಟಿ

(ಶ್ರೀ ಎಂ. ನಾಗಪ್ಪ)

ನಮೂದಿಸದಷ್ಟು ಈಗಾಗಲೇ ಸಾಲ ಮಾಡಿದ್ದಾರೆ. ಅದಲ್ಲದೇ, ಅದೇ ಐಟಂನ ಕೆಳಗೆ ಈ ರೀತಿ ಹೇಳುತ್ತಿದ್ದಾರೆ.

> "It is proposed to raise a loan of Rs. 150 lakhs during 1969-70 in the open market, Rs. 100 lakhs from L. I. C. and Rs. 200 lakhs from the Government to meet expenditure on developmental schemes during 1969-70."

ಇದರ ಒಟ್ಟು ಮೊತ್ತ ಸಾಧಾರಣ ನಾಲ್ಕು ಕೋಟಿ 50 ಸಾವಿರವಾಗುತ್ತದೆ. ಅಂದರೆ 50 ಕೋಟಿ 40 ಲಕ್ಷದ 50 ಸಾವಿರದ 300 ರೂಪಾಯಿ ಲೋನ್ ಆಗುತ್ತದೆ. ಇಂಥ ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ಸರ್ಕಾರಕ್ಕೆ ಫೆಬ್ರವರಿ ತಿಂಗಳಲ್ಲಿ ಕೊಟ್ಟರೂ, ಈ ಬೋರ್ಡು ತನ್ನ ಋಣಕಾಸಿನ ಪರಿಮಿತಿಯಲ್ಲಿ ಲೋನ್ ತೆಗೆದುಕೊಂಡಿದೆಯೋ ಎಂಬುದನ್ನು ಸರ್ಕಾರ ಪರಿಶೀಲಿಸಿಲ್ಲ. ಇದರಿಂದ ಸರ್ಕಾರದ ಕಂಟ್ರೋಲ್ ಈ ಬೋರ್ಡಿನ ಮೇಲೆ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಇವರು ಸ್ವಜನ ಪಕ್ಷಪಾತದಿಂದ ತಮಗೆ ಬೇಕಾದ ಹಳ್ಳಿಯನ್ನು ಎಲೆಕ್ಟ್ರಿಫೈ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಯವರು ರೂರಲ್ ಎಲೆಕ್ಟ್ರಿಫಿಕೇಶನ್ ಮಾಡಿ ಮಂಡಲಿಯವರು ಸಾಕಷ್ಟು ಹಾನಿಯನ್ನು ಅನುಭವಿಸುತ್ತಿದ್ದಾರೆಂದು ಹೇಳಿದ್ದಾರೆ.

3-30 P.M.

ಇವೊತ್ತು ಯಾವ ಹಳ್ಳಿಯೊಳಗೆ ಎಲೆಕ್ಟ್ರಿಫೈ ಮಾಡಬೇಕಾಗಿದೆ ಅಂಥವುಗಳನ್ನು ರಾಜಕೀಯ ದೃಷ್ಟಿಯಿಂದ ನಿರ್ಣಯ ಮಾಡುತ್ತಾರೆ. ಇಂತಿಂಥಾ ಹಳ್ಳಿಗಳಲ್ಲಿ ಎಲೆಕ್ಟ್ರಿಫೈ ಮಾಡಬೇಕು, ಪಂಪು ಸೆಟ್ಟುಗಳನ್ನು ಹಾಕಬೇಕು ಅವುಗಳಿಗೆ ವಿದ್ಯುಚ್ಛಕ್ತಿಯನ್ನು ಒಯ್ಯಬೇಕು ಎಂದು ಎಲೆಕ್ಟ್ರಿಸಿಟಿ ಬೋರ್ಡಿನವರಾಗಲೀ, ಸರ್ಕಾರದವರಾಗಲೀ, ಯೋಜನೆಯನ್ನು ಮಾಡಿ ಕಳುಹಿಸಿದರೆ ಅದನ್ನು ವ್ಯವಸ್ಥಿತ ರೀತಿಯಲ್ಲಿ ಕಾರ್ಯಗತ ಮಾಡತಕ್ಕಂಥ ಒಂದು ನಿಯಮ ಸರ್ಕಾರದಲ್ಲಿ ಇಲ್ಲ. ಎಲ್ಲೆಲ್ಲಿಗೆ ಅವಶ್ಯಕವಾಗಿ ಪಂಪುಸೆಟ್ಟುಗಳನ್ನು ಕೊಡಬೇಕೋ ಅಂಥಾ ಕಡೆ ನೆಗ್ಲೆಕ್ಟ್ ಮಾಡುತ್ತಾರೆ. ನನ್ನ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡತಕ್ಕ ಹಳ್ಳಿಗಳು 4 ಹಳ್ಳಿಗಳು ಎಂದು ಲಿಸ್ಟಿನಲ್ಲಿ ಕೊಟ್ಟಿದ್ದಾರೆ. ಆದರೆ ಮಾನ್ಯ ಉಪಮಂತ್ರಿಗಳ ಕ್ಷೇತ್ರದಲ್ಲಿ 8 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆಂದು ಆ ಲಿಸ್ಟಿನಲ್ಲಿ ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನು ? ಅದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿವೆ ಎಂದು ಹೇಳುತ್ತಾರೆ. ಒಂದು ಲಕ್ಷ ರೂಪಾಯಿಗಳನ್ನು ಯಾವುದಕ್ಕೋ ಖರ್ಚು ಮಾಡಿ 8 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಇಷ್ಟು ಹಣ ಖರ್ಚಾಯಿತು ಎಂದು ಈ ಸಭೆಯ ಮುಂದೆ ಇಟ್ಟರೆ ಅದು ಗೊತ್ತಾಗುತ್ತದೆಯೋ ? ಬಾಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದರೆ ಸರ್ಕಾರಕ್ಕೆ, ಬೋರ್ಡಿಗೆ ನಷ್ಟವಾಗುತ್ತದೆ ಎಂದು ಹೇಳುತ್ತಾರೆ. ಆದರೆ ಇದರಲ್ಲಿ ಒಂದು ನೀತಿಯಿಲ್ಲ, ನಿಯಮವಿಲ್ಲ. ರಾಜಕೀಯ ಒತ್ತಡಕ್ಕಾಗಿ ತಮಗೆ ಬೇಕಾದಂತಹ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡತಕ್ಕದ್ದು ಯೋಗ್ಯವೇ ?

ಶ್ರೀಮತಿ ಬಸವರಾಜೇಶ್ವರಿ.—ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಎಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಲಿಸ್ಟಿನಲ್ಲಿ ನಮೂದು ಮಾಡಿದ್ದಾರೆ, ಎಷ್ಟು ಗ್ರಾಮಗಳಿಗೆ ಈಗ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ ಎಂಬುದನ್ನು ಸರಿಯಾಗಿ ತಿಳಿದುಕೊಂಡು ಮಾನ್ಯ ಸದಸ್ಯರು ಮಾತನಾಡಿದರೆ ಒಳ್ಳೆಯದು.

ಶ್ರೀ ಎಂ. ನಾಗಪ್ಪ.—ನಾನು ಮಾನ್ಯ ಮಂತ್ರಿಗಳ ಚೇಂಬರಿಗೆ ಹೋಗಿದ್ದೆ. ಲಿಸ್ಟನ್ನು ನೋಡಿಕೊಂಡು ಬಂದಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಕೋಪಮಾಡಿಕೊಳ್ಳುವುದು ಸರಿಯಲ್ಲ. ನಮ್ಮ ತಾಲ್ಲೂಕಿನಲ್ಲಿ ಸ್ವಜನ ಪಕ್ಷಪಾತ ನಡೆಯುತ್ತಿದೆ. ಇದರಿಂದಾಗಿ ಅಲ್ಲಿ ಸರಿಯಾಗಿ ಕೆಲಸಕಾರ್ಯಗಳು ನಡೆಯುತ್ತಿಲ್ಲ. ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಿದರೆ ಅದರಿಂದ ನಷ್ಟವಾಗುತ್ತದೆ ಎಂದು ಹೇಳಿ ನಮ್ಮ ರಾಯಚೂರು ತಾಲ್ಲೂಕಿನಲ್ಲಿ 1966-67ನೇ ಸಾಲಿನಲ್ಲಿ ಎರಡು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. 1966ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಆ ಎರಡು ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಿ ಅದರ ಓಪನಿಂಗ್ ಸೆರಮೊನಿಯನ್ನು ಮಾನ್ಯ ಮುಖ್ಯ ಮಂತ್ರಿಗಳೇ ಮಾಡಿದ್ದಾರೆ. ಆಗ ಜನರಲ್ ಎಲೆಕ್ಷನ್ ಇನ್ನು ಒಂದೂವರೆ ತಿಂಗಳು ಇತ್ತು. ಸ್ವಜನ ಪಕ್ಷಪಾತಕ್ಕಾಗಿ ತಮಗೆ ಬೇಕಾದಂತಹ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಾದರೆ

ಸರ್ಕಾರ ವಿದ್ಯುಚ್ಛಕ್ತಿ ಮಂಡಲಿಯಷ್ಟೆ ಅಪಾದನೆಗೆ ಭಾಗಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಮಂತ್ರಿಗಳು ಯಾವ ಯಾವ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಲಿಸ್ಟನ್ನು ಕೊಡುತ್ತಾರೆಯೋ ಆ ಪ್ರಕಾರ ಬೋರ್ಡಿನವರು ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ಇದರಿಂದಾಗಿ ಎಲೆಕ್ಟ್ರಿಸಿಟಿ ಬೋರ್ಡಿನವರು ತಮ್ಮ ಕೆಲಸಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ಮಾಡಿಲ್ಲ. ಇದುವರೆಗೆ ಮಾನ್ಯ ಸದಸ್ಯರು ಈ ವಿದ್ಯುಚ್ಛಕ್ತಿ ಮಂಡಲಿಯಮೇಲೆ ಏನು ಅಪಾದನೆಯನ್ನು ಮಾಡಿದ್ದಾರೆಯೋ ಅದೇರೀತಿ ಸರ್ಕಾರದಮೇಲೂ ಅಪಾದನೆಯನ್ನು ಮಾಡಿದ್ದರೆ ಸಂತೋಷವಾಗುತ್ತಿತ್ತು. ಸರ್ಕಾರದ ಹತೋಟಿ ಮಂಡಲಿಯಮೇಲೆ ಇರಲಿಲ್ಲ. ಆದ್ದರಿಂದ ಮಂಡಲಿಯು ಸ್ವೇಚ್ಛೆಯಾಗಿ ಕೆಲಸ ಮಾಡಿತು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಇದರಲ್ಲಿ ಮುಖ್ಯವಾಗಿ ನಾವು ನೋಡಬೇಕಾದ್ದು, ಈ ವಿದ್ಯುಚ್ಛಕ್ತಿ ಮಂಡಲಿಯವರು 1969ನೇ ಇಸವಿ ಏಪ್ರಿಲ್ ತಿಂಗಳಿನಲ್ಲಿ ವಿದ್ಯುಚ್ಛಕ್ತಿದರವನ್ನು ಏರಿಸಿದೆ. ಇದರಿಂದ ನಮ್ಮ ರೈತರಿಗೆ ಯಾವ ತರಹ ಪರಿಣಾಮ ಉಂಟಾಗುತ್ತದೆ ಎಂಬುದನ್ನು ನಾವು ನೋಡಬೇಕಾಗಿದೆ. ಈ ದೃಷ್ಟಿಯಿಂದ ನಾನು ಒಂದೆರಡು ವಿಷಯಗಳನ್ನು ಈ ಸಭೆಯಮುಂದೆ ನಾನು ಹೇಳಬಯಸುತ್ತೇನೆ. ಮೊದಲನೆಯದಾಗಿ ಈಗಾಗಲೇ ನಮ್ಮ ಮಾನ್ಯ ಮಿತ್ರರು ಹೇಳಿದಹಾಗೆ ಈ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಅನೇಕ ಕಡೆ ಎಲೆಕ್ಟ್ರಿಕ್ ಪೋಲುಗಳು ಮುಂತಾದ ಸಾಮಾನುಗಳನ್ನು ತೆಗೆದುಕೊಂಡು ಅಲ್ಲಲ್ಲೇ ಹಾಕುತ್ತಾರೆ, ಅವು ಹಾಳಾಗಿ ಹೋಗುತ್ತವೆ. ಅವುಗಳ ಬಗ್ಗೆ ಸರಿಯಾದಂತಹ ಲೆಕ್ಕಪತ್ರಗಳಿಲ್ಲ. ಮತ್ತೆ ಎಲೆಕ್ಟ್ರಿಕ್ಕಿಗೆ ಸಂಬಂಧಪಟ್ಟ ವೈರು ಮುಂತಾದ ಕೆಲವು ಸಾಮಾನುಗಳನ್ನು ಅಲ್ಲಿರತಕ್ಕ ಎಂಪ್ಲಾಯೀಸ್ ಮಾರಾಟ ಮಾಡಿ ಸಾಕಷ್ಟು ಹಣವನ್ನು ಗಳಿಸುತ್ತಿದ್ದಾರೆ. ಇದು ಸರ್ಕಾರಕ್ಕೆ ಗೊತ್ತಿಲ್ಲ. ಸಾವಿರಾರು ರೂಪಾಯಿಗಳ ವೈರನ್ನು ಅಲ್ಲಿರತಕ್ಕ ಎಂಪ್ಲಾಯಿಗಳು ಮಾರಾಟ ಮಾಡಿದ್ದಾರೆ. ಎಷ್ಟೋ ಸಾರಿ ಇಂಥ ವಿಚಾರಗಳು ಪತ್ರಿಕೆಯಲ್ಲಿ ಕೂಡ ಬರುತ್ತಿದೆ. ಇದರಿಂದಾಗಿ ಸರ್ಕಾರಕ್ಕೆ ನಾನಾ ರೀತಿಯಲ್ಲಿ ಹಾನಿಯಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಸರಿಯಾದಂತಹ ಒಂದು ಕಂಟ್ರೋಲ್ ಇಲ್ಲ. ಸರಿಯಾದಂತಹ ವ್ಯವಸ್ಥೆ ಇಲ್ಲ. ಈ ಬಗ್ಗೆ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ, ಮಾನ್ಯ ಮಂತ್ರಿಗಳು ಏಪ್ರಿಲ್ 8ನೇ ತಾರೀಕು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಸ್ಪಷ್ಟವಾಗಿದೆ. ವಿದ್ಯುಚ್ಛಕ್ತಿಯನ್ನು ಮಾರಾಟ ಮಾಡುವ ವಿಷಯದಲ್ಲಿ ಮದ್ರಾಸು, ಆಂಧ್ರ ಮತ್ತು ಮಹಾರಾಷ್ಟ್ರ ಈ ಮೂರು ರಾಜ್ಯಗಳಿಗೆ ಸಂಬಂಧಪಟ್ಟಹಾಗೆ ಒಂದು ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಅದರಲ್ಲಿರತಕ್ಕ ಅಂಕಿಅಂಶಗಳನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಈಗ ಮದ್ರಾಸ್ ಸರ್ಕಾರದವರು ಇರಿಗೇಷನ್ ಪಂಪುಸೆಟ್ಟಿಗೆ ಅಲ್ಲಿ ಒಂದು ಯೂನಿಟ್ಟಿಗೆ 8·25 ಪೈಸಾ ಚಾರ್ಜ್ ಮಾಡುತ್ತಾರೆ, ಆಂಧ್ರದಲ್ಲಿ 12 ಪೈಸಾ ಚಾರ್ಜ್ ಮಾಡುತ್ತಾರೆ. ಕೇರಳದಲ್ಲಿ 8 ಪೈಸಾ ಒಂದು ಯೂನಿಟ್ಟಿಗೆ ಚಾರ್ಜ್ ಮಾಡುತ್ತಾರೆ. ಆದರೆ ನಮ್ಮ ಮೈಸೂರಿನಲ್ಲಿ ಇರಿಗೇಷನ್ ಪಂಪುಸೆಟ್ಟಿಗೆ ಒಂದು ಯೂನಿಟ್ಟಿಗೆ 11 ಪೈಸಾ ಚಾರ್ಜ್ ಮಾಡುತ್ತಾರೆ. ಅವರು ನಮ್ಮ ರಾಜ್ಯದಲ್ಲಿ ಒಂದು ಯೂನಿಟ್ಟಿಗೆ 4, 5 ಪೈಸಾಗಳಂತೆ ವಿದ್ಯುಚ್ಛಕ್ತಿಯನ್ನು ಕೊಂಡುಕೊಂಡು ಹೆಚ್ಚಿನ ಆದಾಯ ಮಾಡಿಕೊಳ್ಳುತ್ತಾರೆ. ನಮ್ಮ ದೇಶದಲ್ಲಿ ಉತ್ಪತ್ತಿಯಾದಂತಹ ವಿದ್ಯುಚ್ಛಕ್ತಿಯನ್ನು ಕಡಿಮೆ ದರದಲ್ಲಿ ಬೇರೆ ಸ್ಟೇಟಿನವರಿಗೆ ಮಾರಿ ಅವರಿಗೆ ಅನುಕೂಲ ಮಾಡುವಾಗ ನಮ್ಮ ದೇಶದ ರೈತರಿಗೆ ಹೆಚ್ಚಿನ ದರವನ್ನು ವಿದ್ಯುಚ್ಛಕ್ತಿಗೆ ವಿಧಿಸುವುದು ಸರಿಯಾದಂತಹ ನೀತಿಯಲ್ಲ, ಅದನ್ನು ನಾನು ಖಂಡಿಸುತ್ತೇನೆ. ರೈತರ ಹಿತಸಾಧನೆಗೋಸ್ಕರ ಕೆಲಸಮಾಡತಕ್ಕ ಪ್ರಜಾ ಸರ್ಕಾರ 100ಕ್ಕೆ 80ರಷ್ಟು ರೈತರು ಇರತಕ್ಕ ದೇಶದಲ್ಲಿ ಅವರ ಏಳಿಗೆಗಾಗಿ ಎಷ್ಟರಮಟ್ಟಿನ ಕೆಲಸ ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಕೋಟಿ ಕೋಟಿಗಟ್ಟಲೇ ಹಣವನ್ನು ನಾನಾ ರೀತಿಯಲ್ಲಿ ಖರ್ಚು ಮಾಡತಕ್ಕ ಈ ಸರ್ಕಾರ ರೈತರ ಬೆನ್ನು ಮೂಳೆಯನ್ನು ಮುರಿಯುವ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಸಿನಿಮಾ ಮತ್ತು ಕಾರ್ಖಾನೆಗಳಿಗೆ ಮತ್ತು ಹೋಟಲ್‌ಗಳಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದೀರಿ. ಅನ್ನದ ಪರಿಸ್ಥಿತಿ ದೊಡ್ಡದಾಗಿರುವ ಇವತ್ತಿನ ಪರಿಸ್ಥಿತಿಯಲ್ಲಿ ರೈತರಿಗೆ ಹೆಚ್ಚಿನ ದರವನ್ನು ವಿಧಿಸುತ್ತಿದ್ದೀರಿ. ಅದೇ ಪ್ಲಾಸ್ಟಿಕ್ ಕಂಪನಿಯೊಂದಕ್ಕೆ 10-15 ವರ್ಷದವರೆಗೆ ಅಗ್ರಿಮೆಂಟ್ ಮಾಡಿಕೊಂಡು ಯೂನಿಟ್‌ಗೆ 3 ಪೈಸೆಯಂತೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದೀರಿ. ಅದೇ ರೈತರ ಪಂಪ್‌ಸೆಟ್ಟುಗಳಿಗೆ ಒಂದು ಯೂನಿಟ್‌ಗೆ 11 ಪೈಸೆಯಂತೆ ಚಾರ್ಜು ಮಾಡುತ್ತಿದ್ದೀರಿ. ಮಿನಿಮಮ್ ಚಾರ್ಜು 24 ರೂಪಾಯಿಗಳು ಇದ್ದುದನ್ನು 48 ರೂಪಾಯಿಗಳಿಗೆ ಹೆಚ್ಚಿಸಿದ್ದೀರಿ. ಅದೇ ಹೆಚ್ಚಿನ ಆದಾಯ ಗಳಿಸುತ್ತಿರುವ ಸಿನಿಮಾ, ಹೋಟೆಲ್‌ಗಳಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಒದಗಿಸುತ್ತಿದ್ದೀರಿ. ಇನ್ನಿತರ ಲಗ್ಷುರಿ ವಸ್ತುಗಳಿಗೆ ಉಪಯೋಗಿಸುವ ವಿದ್ಯುಚ್ಛಕ್ತಿಗೆ ಮ್ಯಾಗ್ಸಿಮಮ್‌ದರವನ್ನು 10 ಪರ್ಸೆಂಟ್ ಎಂದು ಮಾಡಿದ್ದೀರಿ. ಅದೇ ಬಡರೈತರ ಮೇಲೆ 100ಕ್ಕೆ 100 ರಷ್ಟು ಸರ್‌ಚಾರ್ಜನ್ನು ಹಾಕುವುದು ಮೂಲಕ ಹೆಚ್ಚು ಮಾಡಿದ್ದೀರಿ. ಇದು ಅನ್ಯಾಯ.

(ಶ್ರೀ ಎಂ. ನಾಗಪ್ಪ)

ರೈತರಿಗೆ ದ್ರೋಹ ಬಗೆಯುತ್ತಿದ್ದೀರಿ ಎಂದು ಹೇಳಬೇಕಾಗಿದೆ. ಬೋರ್ಡಿಗೆ ಈಗ ನಷ್ಟವಾಗುತ್ತಿದೆ ಎಂದು ಹೇಳಿ ದರವನ್ನು ಹೆಚ್ಚು ಮಾಡಿದ್ದಾರೆ. ಆ ರೀತಿ ನಷ್ಟವಾಗುವುದಕ್ಕೆ ಅವಕಾಶವೇ ಇಲ್ಲ. ನಷ್ಟವಾಗುವುದಕ್ಕೆ ಕೆಲವು ಕಾರಣಗಳು ಇವೆ. 1965ಕ್ಕೆ ಮುಂಚೆ ಬೋರ್ಡಿನಲ್ಲಿದ್ದ ನೌಕರರಿಗೆ ವಿದ್ಯುಚ್ಛಕ್ತಿಯನ್ನು ಫ್ರೀ ಆಗಿ ಒದಗಿಸುತ್ತಿದ್ದಾರೆ. 1965ರ ನಂತರ ಬೋರ್ಡಿಗೆ ಸೇರಿದ ನೌಕರರಿಗೆ ಚಾರ್ಜು ಮಾಡುತ್ತಿದ್ದಾರೆ. ಈಗ 3 ಜನ ಚೀಫ್ ಇಂಜಿನಿಯರ್ ಇದ್ದಾರೆ. ಅಷ್ಟೊಂದು ಜನ ಏತಕ್ಕೆ ಬೇಕು ? ಇಷ್ಟೊಂದು ಜನ ಅನಾವಶ್ಯಕವೆಂದು ಹೇಳುತ್ತೇನೆ. ಫೀಲ್ಡ್ ವರ್ಕರ್ಸ್ ಕಡಿಮೆ ಇದ್ದಾರೆ. ಸಮಯಕ್ಕೆ ಬೇಕಾದರೆ ಒಬ್ಬರೂ ಸಿಗುವುದಿಲ್ಲ. ಇವರ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಈಗ ಚೇರ್‌ಮನ್‌ಗೆ ಕೊಡುತ್ತಿರುವ ಸಂಬಳದ ಬಗ್ಗೆ ಕೆಲವು ಸದಸ್ಯರು ಹೇಳಿದರು. ಈಗ ಚೇರ್‌ಮನ್ ತೆಗೆದುಕೊಳ್ಳುತ್ತಿರುವ ಸಂಬಳ ಜಾಸ್ತಿ ಇವೆ ಎಂದು ಕೆಲವರು ಹೇಳಿದರು. ಪೆನ್‌ಷನ್ ಹಣ ಮತ್ತು ಚೇರ್‌ಮನ್ ಪೋಸ್ಟ್‌ಗೆ ಇರುವ ಸಂಬಳ ಇವೆರಡಕ್ಕಿಂತ ಹೆಚ್ಚು ತೆಗೆದುಕೊಳ್ಳಬಾರದು ಎಂದು ನಿಯಮವಿದೆ. ಈ ನಿಯಮಕ್ಕೆ ವಿರುದ್ಧವಾಗಿ ಈಗಿರುವ ಚೇರ್‌ಮನ್ ಅವರು 2,700 ರೂಪಾಯಿಗಳ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ರೈತರ ಹೊಟ್ಟೆಯಮೇಲೆ ಹೊಡೆದು ಇವರಿಗೆ ಇಷ್ಟೊಂದು ಸಂಬಳ ಕೊಡುವುದು ಸರಿಯೇ ಎಂಬುವನ್ನು ಸರ್ಕಾರದವರು ಯೋಚನೆಮಾಡಬೇಕು. ಸಮಯಾವಕಾಶ ಇಲ್ಲದಿರುವುದರಿಂದ ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

[MR. CHAIRMAN (SRI G. RAME GOWDA) in the Chair].

† ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಚಿಕ್ಕೇಗೌಡರು ಎಲ್ಲಾ ವಿಷಯವನ್ನು ಸಹ ವಿಶದವಾಗಿ ಹೇಳಿದ್ದಾರೆ. ಮತ್ತೆ ಉಳಿದುಳಿದವು ಇದ್ದರೆ ಅಂದರೆ ಆ ಬೋರ್ಡಿನಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಮತ್ತು ಕುಂದುಕೊರತೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಮೈಸೂರು ವಿದ್ಯುಚ್ಛಕ್ತಿ ಬೋರ್ಡಿನ ಆಡಳಿತ ಬುದ್ಧಿಇಲ್ಲದವರ ಮೇಲ್ವಿಚಾರಣೆಯಲ್ಲಿ ಹದ್ದು ಮೀರಿ ನಡೆಯುತ್ತಿದೆ ಎಂದು ಹೇಳಲು ನಾನು ಹಿಂಜರಿಯಲಾರೆ. ನಾಡಿನ ಸಂಪದಭಿವೃದ್ಧಿಗೆ ಕಾರಣವಾದ ಜನಜೀವನದ ನಿತ್ಯದ ವ್ಯವಹಾರಕ್ಕೆ ಆವಶ್ಯಕವಾದ ಈ ಇಲಾಖೆ ಲಂಗು-ಲಗಾಮಿಲ್ಲದ ಕುದುರೆಯಂತೆ ಓಡುತ್ತಿದ್ದರೆ ತುಂಬಾ ಅಪಾಯವೆಂದು ಹೇಳಬೇಕಾಗಿಯೇ ಇಲ್ಲ. ಕೋಟಿ-ಕೋಟಿ ವ್ಯವಹಾರದ ಈ ಇಲಾಖೆಯಲ್ಲಿ ಸ್ವಲ್ಪವೇ ಅಕ್ರಮ ಅನ್ಯಾಯ ನಡೆದರೆ ಅದರಿಂದ ಜನತೆಯಮೇಲೆ ತುಂಬಾ ದುಷ್ಪರಿಣಾಮವಾಗುತ್ತದೆ. ವಿದ್ಯುಚ್ಛಕ್ತಿಯ ಉಪಯೋಗ ಪಡೆಯುವ ಪ್ರತಿಯೊಬ್ಬ ವ್ಯಕ್ತಿಯೂ ತಾನು ಸಂದಾಯ ಮಾಡಬೇಕಾದ ಹಣವನ್ನು ಕ್ಲುಪ್ತಕಾಲಕ್ಕೆ ಚಾಚೂ ತಪ್ಪದೇ ಕೊಡುತ್ತಾನೆ. ಬಿಲ್ಲುಗಳ ಹಣವನ್ನು ಪಠಾಣರಂತೆ ವಸೂಲ್ಮಾಡುವ ಇಲಾಖೆ ಎಂದರೆ ಇದೊಂದೇ ಎಂದು ಹೇಳಬಹುದು. ಜನಜೀವನದಲ್ಲಿ ಹಾಸುಹೊಕ್ಕಾಗಿ ಹೊಂದಿಕೊಂಡಿರುವ ಹೊಂದಿಕೊಳ್ಳುತ್ತಿರುವ ಈ ಇಲಾಖೆ ಜನತೆಯ ಬಾಳಿನ ಜೀವನಾಡಿಯಾಗಿದೆ. ಇಂತಹ ಜೀವನಾಡಿ ಇಲಾಖೆಯು ಸ್ವಾರ್ಥಿಗಳ ಅಹಂಕಾರಿಗಳ ಮೇಲ್ವಿಚಾರಣೆಗೆ ಒಳಪಟ್ಟರೆ ಗತಿ ಏನು ! ಅಂಧಕಾರ ದರ್ಬಾರಿನಿಂದ ಆಗುವ ಅಪಾರ ನಷ್ಟಕ್ಕೆ ಹೊಣೆಯಾರು ಎಂದು ಸಹಜವಾಗಿಯೇ ಪ್ರಶ್ನಿಸಬೇಕಾಗಿದೆ. ವಿದ್ಯುಚ್ಛಕ್ತಿ ಬೋರ್ಡಿನ ಸದ್ಯದ ಆಡಳಿತದಲ್ಲಿ ತುಂಬಾ ಅಕ್ರಮಗಳು ನಡೆಯುತ್ತಿವೆ, ಎಂಬುದು ಜನಜನಿತವಾಗಿದೆ. ಈ ಬೋರ್ಡಿನ ಅಧ್ಯಕ್ಷರು ನಿರ್ಲಕ್ಷದಿಂದ ಅಧಿಕಾರಮದದಿಂದ ಕೂಡಿದ್ದಾರೆಂಬುದಕ್ಕೆ ನಿದರ್ಶನಗಳುಂಟು. ಪಾಪ, ಇದು ಅಧ್ಯಕ್ಷರ ತಪ್ಪಲ್ಲ, ನಿವೃತ್ತಿ ಹೊಂದಿದ್ದ ಅಹಂಭಾವದ ಇಂತಹವರನ್ನು ಈ ಮಹಾಸಂಸ್ಥೆಯ ಅಧ್ಯಕ್ಷರನ್ನಾಗಿ ಮಾಡಿದವರ ತಪ್ಪು. ಸಂಸ್ಥೆ ಹಾಳಾದರೇನು ? ಊರ್ಜಿತವಾದರೇನು ! ತಿಂಗಳಿಗೆ 2,600 ರೂಪಾಯಿಗಳ ತಲಬು, ಐಷಾರಾಮುಗಳಿಗೆ ಹಣ, ಓಡಾಟಕ್ಕೆ ಕಾರು, ಜೊತೆಗೆ ಟಿ.ಎ., ಡಿ.ಎ. ಸಾಕಾದಷ್ಟು ಬೇಕಾದಷ್ಟು ಬರುತ್ತಿರುವಾಗ ಮತ್ತು ಕೋಟ್ಯಾಂತರ ರೂಪಾಯಿಗಳ ವ್ಯವಹಾರದ ಅಧ್ಯಕ್ಷರಾಗಿರುವಾಗ ಯಾರ ಹಂಗೇನು ಎಂಬ ಅಹಂಭಾವ ಬರುವುದು ಸ್ವಾಭಾವಿಕ. ಹಾಗೆ ಈ ಬೋರ್ಡಿನ ಅಧ್ಯಕ್ಷರಿಗೆ ಬಂದುಬಿಟ್ಟಿದೆ. ಈ ಕಾರಣಗಳಿಂದ ಅವರನ್ನು ಆ ಸ್ಥಾನದಲ್ಲಿ ಮುಂದುವರೆಸಿದರೆ ಸಂಸ್ಥೆಗೂ ನಷ್ಟ, ದೇಶಕ್ಕೂ ನಷ್ಟ. ಸರ್ಕಾರಕ್ಕೆ ಎಷ್ಟೇ ನಿಷ್ಠೂರ ಬರಲಿ, ಈ ಸಂಸ್ಥೆಗೆ ಕೈಶುದ್ಧಿ ಬಾಯಿಶುದ್ಧಿ ಇರುವವರನ್ನು ಆದಷ್ಟು ಜಾಗ್ರತೆ ಅಧ್ಯಕ್ಷರನ್ನಾಗಿ ಮಾಡಿರೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಬೇಕಾದರೆ ಪಿ.ಡಬ್ಲ್ಯು.ಡಿ. ಇಲಾಖೆ ಸೆಕ್ರೆಟರಿಯವರನ್ನು ಚೇರ್‌ಮನ್ ಆಗಿ ಮಾಡಿದರೂ ಚಿಂತೆ ಇಲ್ಲ, ನಿವೃತ್ತರಾದಂಥವರನ್ನು ನೇಮಕ ಮಾಡುವ ವ್ಯವಸ್ಥೆ ಬೇಡವೆಂದು ಹೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ಮಂಡಳಿಯ ವಿಜಿಲೆನ್ಸ್ ಅಂದರೆ ಜಾಗೃತ ದಳದವರು ಇದುವರೆಗೆ ಸಾಧಿಸಿರುವ ಕಾರ್ಯವೇನು? ಎಷ್ಟರಮಟ್ಟಿಗೆ ಅವರು ಅನ್ಯಾಯ ಅಕ್ರಮಗಳನ್ನು ಪತ್ತೆ ಹಚ್ಚಿದ್ದಾರೆ? ಜಾಗೃತ ದಳಕ್ಕಾಗಿ ಖರ್ಚು ಮಾಡುತ್ತಿರುವ ಹಣದ ಮೊತ್ತಕ್ಕೆ ಸಮಾನವಾದಷ್ಟು ಅನ್ಯಾಯಗಳನ್ನು ಪತ್ತೆ ಹಚ್ಚಿದ್ದಾರೆಯೇ ಎಂದು ಕೇಳುತ್ತೇನೆ. ಬೆಂಗಳೂರು ನಗರದಲ್ಲಿಯೇ ಅನೇಕ ಕೈಗಾರಿಕೋದ್ಯಮಿಗಳು ವಿದ್ಯುಚ್ಛಕ್ತಿ ಮಂಡಲಿಗೆ ಗಣನೀಯ ಪ್ರಮಾಣದಲ್ಲಿ ಮೋಸ ಮಾಡುತ್ತಿದ್ದಾರೆ. ಇವರಲ್ಲಿ ಎರಡು ಬಗೆ, ಮೀಟರ್‌ಗಳನ್ನು ಇಟ್ಟುಕೊಂಡು ಅವು ಸರಿಯಾಗಿ ಕೆಲಸ ಮಾಡಿ ಉಪಯೋಗಿಸಿದ ವಿದ್ಯುಚ್ಛಕ್ತಿಯನ್ನು ತೋರಿಸಿದರೂ ಮಂಡಳಿಯ ಸಂಬಂಧಪಟ್ಟ ಅಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಂಡು ಕಡಿಮೆ ಹಣ ಕಟ್ಟುತ್ತಿರುವವರು ಒಂದು ರೀತಿಯಾದರೆ, ಮೀಟರು ನಡೆಯದಂತೆ ಮಾಡಿ ಮೋಸ ಮಾಡುವವರು ಇನ್ನೊಂದು ಬಗೆ. ಈ ಮಂಡಲಿಯ ಉಗ್ರಾಣಗಳು ಅವುಗಳ ಲೆಕ್ಕ ಬಹುಶಃ ಯಾರಿಗೂ ಗೊತ್ತಿಲ್ಲ. ಸೂಪರ್‌ವೈಸರ್, ಸ್ಟೋರು ಕೀಪರುಗಳು ಕೆಲವರು ಮೇಲಿನ ಅಧಿಕಾರಿಗಳೊಂದಿಗೆ ಸೇರಿ ಅಪಾರ ಹಣ ಮೋಚುತ್ತಿದ್ದಾರೆ. ವಿದ್ಯುಚ್ಛಕ್ತಿಯ ಮಂಡಳಿಯ ಕಾರುಗಳು, ವಾಹನಗಳು, ವಿದ್ಯುಚ್ಛಕ್ತಿ ಮಂಡಲಿಯ ಅತಿಥಿ ಗೃಹಗಳು ಕೆಲವು ಉನ್ನತಾಧಿಕಾರಿಗಳ ಮೋಜು ಆಡಂಬರದ ಪ್ರದರ್ಶನಕ್ಕಾಗಿ ಇವೆ. ಇದರ ಬಗ್ಗೆ ಸರಕಾರದವರು ತನಿಖೆ ನಡೆಸಿದರೆ ಅವರಿಗೆ ಎಲ್ಲ ವಿಚಾರಗಳೂ ಗೊತ್ತಾಗುತ್ತದೆ. ನೆರೆಯ ಮದ್ರಾಸು ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆ ಇದ್ದರೂ ನೆರೆಯ ರಾಜ್ಯದಿಂದ ವಿದ್ಯುತ್ ಪಡೆದು ಹಳ್ಳಿಗಳ ವಿದ್ಯುದೀಕರಣ (ರೂರಲ್ ಎಲೆಕ್ಟ್ರಿಫಿಕೇಷನ್)ದಲ್ಲಿ ಬಹಳ ಪ್ರಗತಿ ಸಾಧಿಸಿದ್ದಾರೆ. ನಮ್ಮಲ್ಲಿ ಇರುವ ವಿದ್ಯುಚ್ಛಕ್ತಿಯನ್ನು ವ್ಯರ್ಥ ಮಾಡುವುದರ ಬದಲು ರಾಷ್ಟ್ರೀಕೃತವಾದ ಭಾರಿ ಬ್ಯಾಂಕುಗಳಿಂದ ಇನ್ನೂ ಹೆಚ್ಚಿನ ಹಣ ಪಡೆದು ಪ್ರತಿ ಹಳ್ಳಿಗೂ ವಿದ್ಯುಚ್ಛಕ್ತಿಯನ್ನು ನೀಡಲು ಪ್ರಯತ್ನಿಸಬೇಕು. ಈಗಾಗಲೇ ವಿದ್ಯುಚ್ಛಕ್ತಿಯ ದರ ಸಾಮಾನ್ಯ ಬಳಕೆದಾರರಿಗೆ ಸಣ್ಣ ಕೈಗಾರಿಕೋದ್ಯಮಿಗಳಿಗೆ ನೀರಾವರಿ ಬಳಕೆಗೆ ಎಲ್ಲರಿಗೂ ಭಾರಿ ಹೊರೆಯಾಗಿದೆ. ಇನ್ನೂ ಇದರ ಏರಿಕೆ ಸರ್ವಥಾ ಒಪ್ಪದಂತಹ ಅಂಶ. ವಿದ್ಯುಚ್ಛಕ್ತಿ ಮಂಡಳಿಯ ಕೆಲವು ವರ್ಗದ ನೌಕರರುಗಳಿಗೆ ನೀಡುತ್ತಿರುವ ಉಚಿತ ವಿದ್ಯುಚ್ಛಕ್ತಿಯನ್ನು ಕೊಡಕೂಡದು. ನೌಕರರಲ್ಲಿಯೇ ಎರಡು ಬಣ ಸೃಷ್ಟಿಸುವುದು ಸಲ್ಲದು; ಕೊಟ್ಟರೆ ಎಲ್ಲ ನೌಕರರುಗಳಿಗೂ ಕೊಡಿ. ಜನತೆಗೆ ತೃಪ್ತಿಕರವಾಗುವಂತೆ ಕುಂದುಕೊರತೆಗಳನ್ನು ನಿವಾರಿಸಿ ಅನಂತರ ಈ ದರದ ಬಗ್ಗೆ ಯೋಚಿಸಿರೆಂದು ಹೇಳಬಯಸುತ್ತೇನೆ. ಬಹುಶಃ ಈ ಮಂಡಳಿಯ ಮೇಲಿರುವ ದೂರು ಹಾಗೂ ಅವ್ಯವಹಾರ ಮತ್ತು ಅಸಮರ್ಪಕ ವ್ಯವಸ್ಥೆಯ ಬಗ್ಗೆ ಒಂದು ತನಿಖಾ ಮಂಡಳಿಯನ್ನು ಸರಕಾರ ನೇಮಿಸುವುದು ಅಗತ್ಯ. ಇದನ್ನು ಸರಕಾರದವರು ಕೂಡಲೇ ಮಾಡಿ ತನಿಖೆ ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ರೈತರ ಬಗ್ಗೆ ಬಹಳವಾದ ಕಳವಳ ವನ್ನು ವ್ಯಕ್ತಮಾಡಿದರು. ನಾನೂ ಕೂಡ ರೈತರ ಹೊಟ್ಟೆಯಲ್ಲಿಯೇ ಹುಟ್ಟಿದವಳು. ನಮಗೂ ಕೂಡ ರೈತರ ಬಗ್ಗೆ ತಮಗೆ ಎಷ್ಟು ಕಳವಳವಿದೆಯೋ ಅದಕ್ಕೆ ಎರಡರಷ್ಟು ಇದೆ. ನಾವೂ ಕೂಡ ಪ್ರಯತ್ನ ಮಾಡುತ್ತಿದ್ದೇವೆ ಮತ್ತು ಸರಕಾರಕ್ಕೆ ಒತ್ತಾಯ ಮಾಡುತ್ತಲೂ ಇದ್ದೇವೆ. ರೈತರ ಮೇಲೆ ಹೆಚ್ಚು ಕರ ಹೇರುವುದನ್ನು ಸ್ವಲ್ಪ ಪರಿಶೀಲನೆ ಮಾಡಬೇಕು ಎಂದೂ ಹೇಳುತ್ತಿದ್ದೇವೆ. ಮತ್ತು ಇಲ್ಲಿರುವ ಬೋರ್ಡಿಗೆ ಚೇರ್ಮನರಾಗಿ ರಿಟೈರಾದ ಅಧಿಕಾರಿಗಳನ್ನು ನೇಮಕ ಮಾಡ ಬಾರದು ಮತ್ತು ನನ್ನ ಅಭಿಪ್ರಾಯದಲ್ಲಿ ಇಲ್ಲಿಗೆ ಚೇರ್ಮನ್ನರಾಗಿರುವವರು ಪಿ.ಡಬ್ಲ್ಯು.ಡಿ. ಸೆಕ್ರೆಟರಿಗಳಾಗಿರುವವರೇ ಇದ್ದರೆ ಉತ್ತಮ. ಮತ್ತು ಇದರಲ್ಲಿರುವ ಲೋಪಗಳನ್ನು ತನಿಖೆ ಮಾಡಲು ಸರಿಯಾದ ಒಂದು ಕಮಿಟಿಯನ್ನು ಮಾಡಬೇಕೆಂದು ಸರಕಾರಕ್ಕೆ ಸಲಹೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಸ್ವಾಮೀ, ಎಲೆಕ್ಟ್ರಿಸಿಟಿ ಬೋರ್ಡಿನ 1969–70ನೇ ಸಾಲಿನ ವಾರ್ಷಿಕ ಸ್ಟೇಟುಮೆಂಟು ಮತ್ತು ಅಕೌಂಟುಗಳನ್ನು ವಿರೋಧಿಸುತ್ತಾ ಒಂದೆರಡು ಸಲಹೆಗಳನ್ನು ಸರಕಾರಕ್ಕೆ ಹೇಳಬಯಸುತ್ತೇನೆ.

ನನ್ನ ಮಿತ್ರರು ಅನೇಕರು ಈಗಾಗಲೇ ಎಲೆಕ್ಟ್ರಿಸಿಟಿ ಬೋರ್ಡಿನ ಅವ್ಯವಹಾರಗಳ ಬಗ್ಗೆ ಹಾಗೂ ಲೆಕ್ಕಾಚಾರಗಳ ಬಗ್ಗೆ ಉತ್ತಮವಾದ ಸಲಹೆಗಳನ್ನು ಸಭೆಯಮುಂದೆ ಇಟ್ಟಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡಿನವರು ಸಾಲ ಪಡೆದು ಅದಕ್ಕೆ ಕೊಡುವ ಬಡ್ಡಿಯೇ ಸುಮಾರು ಹತ್ತು ಕೋಟಿಯಷ್ಟು ಆಗುತ್ತಿದೆ. ಇದರ ಲೆಕ್ಕಾಚಾರವನ್ನು ಇನ್ನೂ ಕೂಲಂಕಷವಾಗಿ ಪರಿಶೀಲಿಸಿದರೆ ಈ ಎಲೆಕ್ಟ್ರಿಸಿಟಿ ಬೋರ್ಡು ಇನ್ನು ಹೆಚ್ಚು ಕಾಲ ಬದುಕಿಕೊಳ್ಳಲಾರದು ಎನ್ನುವ ಭಾವನೆ ಜನರಲ್ಲಿ ಬರುತ್ತದೆ. ಎಲೆಕ್ಟ್ರಿಸಿಟಿ ಬೋರ್ಡಿನ ವ್ಯವಹಾರವನ್ನು ನೋಡುವಾಗ ಸರಕಾರದವರಿಂದ ಹಣ ಪಡೆದು ವಿದ್ಯುಚ್ಛಕ್ತಿ ಉತ್ಪಾದನೆ ಎಷ್ಟು ಆಗುತ್ತಿದೆ ಎನ್ನುವುದನ್ನು ಇದರಲ್ಲಿರುವ ಲೆಕ್ಕದಿಂದ ನೋಡಿದರೆ ಗೊತ್ತಾ ಗುತ್ತದೆ.

(ಶ್ರೀ ಬಿ. ಭಾಸ್ಕರ ಶೆಟ್ಟಿ)

4–00 P.M.

ವಿದ್ಯುಚ್ಛಕ್ತಿ ಮಂಡಲಿ ವಿದ್ಯುಚ್ಛಕ್ತಿಯನ್ನು 4.03 ಮಾರುವಾಗ ಪೈಸೆಯಂತೆ ಮಾರುತ್ತಾರೆ. ಅನಂತರ ಅದಕ್ಕೆ ಡ್ಯೂಟಿ ಬೇರೆ ಹಾಕುತ್ತಾರೆ. ಅಲ್ಲದೆ ಅವರಿಗೆ ಬೇಕಾದವರಿಗೆ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಅಗ್ಗದ ದರದಲ್ಲಿ ಕೊಡುತ್ತಾರೆ. 10–15 ವರ್ಷದವರೆಗೆ ಕಾಂಟ್ರಾಕ್ಟ್ ಮಾಡಿಕೊಂಡಿದ್ದಾರೆ. ಉದಾಹರಣೆಗೆ ಇಂಡಿಯನ್ ಅಲ್ಯೂಮಿನಿಯಮ್ ಕಾರ್ಖಾನೆ. ಇದಕ್ಕೆ 1.76 ಪೈಸೆಯಂತೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು 15 ವರ್ಷದವರೆಗೆ ಕರಾರನ್ನು ಸರ್ಕಾರದವರು ಮಾಡಿಕೊಂಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಳ್ಳಿಯಲ್ಲಿ ದುಡಿಮೆ ಮಾಡುವ ರೈತನಿಗೆ 100ಕ್ಕೆ 10ರಷ್ಟು ದರವನ್ನು ಹೆಚ್ಚು ಮಾಡಿದ್ದೀರಿ. ಬೆಳಗಾದರೆ ನಮ್ಮ ಮಂತ್ರಿಗಳು ರೇಡಿಯೋದಲ್ಲಿ ಸುಸ್ವರವಾದ ಭಾಷಣವನ್ನು ಮಾಡುತ್ತಾರೆ ವ್ಯವಸಾಯೋತ್ಪನ್ನ ಹೆಚ್ಚು ಮಾಡಬೇಕು, ರೈತನ ಏಳಿಗೆಯಾಗಬೇಕು, ಅದಕ್ಕಾಗಿಯೇ ಹೆಚ್ಚು ಹೆಚ್ಚು ಹಣ ಮೀಸಲಾಗಿಟ್ಟಿದ್ದೇವೆ ಎಂದು ಹೇಳುತ್ತಾರೆ. ಮತ್ತು ಪಂಚಾಯತ ರಾಜ್ಯದಲ್ಲೂ ಸಹ ಈ ಒಂದು ಹೇಳಿಕೆಯ ಸೋಗನ್ನು ಹಾಕಿದ್ದಾರೆ. ಇನ್ನೊಂದು ಕಡೆ ಅಪ್ರತ್ಯಕ್ಷವಾಗಿ ರೈತನ ಶೋಷಣೆ ಮಾಡುತ್ತಿದ್ದಾರೆ. ಹೆಲ್ತ್ ಸೆಸ್, ಎಜುಕೇಷನ್ ಸೆಸ್ ಇನ್ನೂ ಅನೇಕ ತರಹ ಸೆಸ್‌ಗಳನ್ನು ಹಾಕಿ, ತೆರಿಗೆಗಳನ್ನು ಹಾಕಿ ವಸೂಲ್ಮಾಡುತ್ತಿದ್ದಾರೆ. ಈವೊತ್ತಿನ ದಿವಸ ಸರ್ಕಾರಕ್ಕೆ 120 ಕೋಟಿ ರೂಪಾಯಿ ವರಮಾನ ಸೇಲ್ಸ್‌ಟ್ಯಾಕ್ಸ್‌ನಿಂದ ಇದೆ. ಅದೂ ಕೂಡ ರೈತರಮೇಲೆ ಬೀಳುತ್ತದೆ ಎಂದು ಹೇಳಬಹುದು. ನನ್ನ ಲೆಕ್ಕಾಚಾರದ ಪ್ರಕಾರ ರೈತರು ಉಪಯೋಗಿಸುವ ಬತ್ತನೆಗೆ 25 ಪಾಲು ಖರ್ಚಾಗುತ್ತದೆ, 50 ಪಾಲು ವ್ಯವಸಾಯ ಮಾಡುವುದಕ್ಕಾಗಿ ಖರ್ಚಾಗುತ್ತದೆ, ಉಳಿದ 25 ಪಾಲಿನಲ್ಲಿ ತೆರಿಗೆ ಕೊಡಬೇಕಾದರೆ ಇನ್ನು ಅವರಿಗೆ ಇದರಿಂದ ಲಾಭ ಏನು ಸಿಕ್ಕುತ್ತದೆ? ಅವರಿಗೆ ಏನೂ ಸಿಕ್ಕುವುದಿಲ್ಲ. ಇದನ್ನು ಯೋಚನೆ ಮಾಡಬೇಕು. ಇನ್ನು ರೈತರನ್ನು ಉದ್ಧಾರ ಮಾಡುವ ಬಗೆ ಹೇಗೆ? ಕೇಂದ್ರ ಸರ್ಕಾರದ ಲೆಕ್ಕಾಚಾರದ ಪ್ರಕಾರವೇ ಅತಿ ದೊಡ್ಡ ಕೈಗಾರಿಕೆ ವ್ಯವಸಾಯ. ಆದುದರಿಂದ ಇದರ ಉತ್ಪಾದನೆಗೆ 14,500 ಕೋಟಿ ರೂಪಾಯಿಯನ್ನು ಖರ್ಚು ಮಾಡಬೇಕೆಂದು ಒಂದು ಅಂದಾಜು ಮಾಡಿದ್ದಾರೆ. ಆದರೆ ಕೈಗಾರಿಕೆಯಲ್ಲಿ 3,000 ಕೋಟಿ ರೂಪಾಯಿ ಉತ್ಪಾದನೆ ಇದೆ ಎಂದು ತಿಳಿದುಕೊಂಡರೂ ಕೂಡ ಅದಕ್ಕೆ ಬಂಡವಾಳ ಎಷ್ಟು ಕೊಡುತ್ತೀರಿ? ಈವೊತ್ತಿನ ದಿವಸ ರೈತರಿಗೆ ಎಷ್ಟು ಬಂಡವಾಳ ಕೊಡುತ್ತೀರಿ! ಅವರಿಗೆ ಏನೂ ಕೊಡುವುದಿಲ್ಲ. ಆದರೆ ಅತಿ ದೊಡ್ಡ ಕೈಗಾರಿಕೆ ಅಂದರೆ ವ್ಯವಸಾಯ. 14,500 ಕೋಟಿ ರೂಪಾಯಿಯ ಉತ್ಪತ್ತಿ ತರುವಂಥ ಈ ವ್ಯವಸಾಯಕ್ಕೆ 100ಕ್ಕೆ 100ರಷ್ಟು ಕನಿಷ್ಠ ದರವನ್ನು ವಿಧಿಸಿದ್ದೀರಿ ಇದರ ಬಗ್ಗೆ ನಿಮಗೆ ಎಷ್ಟುಮಟ್ಟಿಗೆ ಕನಿಕರ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಖಚಿತವಾಗಿ ಹೇಳಬೇಕಾಗುತ್ತದೆ. ಮುಖ್ಯ ಮಂತ್ರಿಗಳು ಪಂಪುಸೆಟ್ಟಿನ ಬಗ್ಗೆ ಒಂದು ಲೆಕ್ಕಾಚಾರವನ್ನು ಹೇಳಿದರು ; ಒಂದು ಪಂಪುಸೆಟ್ಟನ್ನು ಸರ್ವಿಸ್ ಮಾಡಲು 3,000 ರೂಪಾಯಿ ಖರ್ಚಾಗುತ್ತದೆ ಮತ್ತು ಪ್ರತಿ ಪಂಪುಸೆಟ್ಟಿನಿಂದ 540 ರೂಪಾಯಿ ಆದಾಯ ಬಂದರೆ ಲಾಭವೂ, ನಷ್ಟವೂ ಇಲ್ಲದಂತೆ ಕೆಲಸಮಾಡಲು ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಮದ್ರಾಸ್‌ನಲ್ಲಿ 55 ರೂಪಾಯಿಯಿಂದ 60 ರೂಪಾಯಿಯವರೆಗೆ ಇದೆ. ಇನ್ನೊಂದು ಲೆಕ್ಕಾಚಾರ ಏನೆಂದರೆ ಈ ವಿದ್ಯುಚ್ಛಕ್ತಿಯಿಂದ ಮದ್ರಾಸ್‌ನವರು 10 ಪರ್ಸೆಂಟು, ಆಂಧ್ರದವರು 12 ಪರ್ಸೆಂಟು ಉತ್ಪತ್ತಿ ಬರಬೇಕೆಂದು ಒಂದು ಲೆಕ್ಕಾಚಾರ ಇಟ್ಟುಕೊಂಡಿದ್ದಾರೆ. ಮೈಸೂರಿನವರ ಲೆಕ್ಕಾಚಾರ ನೋಡಿದರೆ ನಮಗೆ 18 ಪರ್ಸೆಂಟು ಲಾಭವಾದರೂ ಬರಬೇಕು ಎನ್ನುವ ಲೆಕ್ಕ ಕೊಟ್ಟಿದ್ದಾರೆ. ಈ 18 ಪರ್ಸೆಂಟು ಮಾರ್ವಾಡಿ ಬಡ್ಡಿಗಿಂತಲೂ ದೊಡ್ಡ ಮಾರ್ವಾಡಿ ಬಡ್ಡಿ ಆದ ಹಾಗಾಯಿತು. ಇಷ್ಟಾದರೂ ಕೂಡ ಸರಿಯಾದ ಪಂಪುಸೆಟ್ಟಿನ ವ್ಯವಸ್ಥೆ ಇಲ್ಲ. ಅತಿ ದೊಡ್ಡ ಹೆಚ್ಚಿನ ಮೊತ್ತವನ್ನು ವ್ಯವಸಾಯದ ಬಾಬಿಗೆ ಹಾಕಿ, ರೈತರಿಗೆ ಆದಷ್ಟುಮಟ್ಟಿಗೆ ಹೊರೆಯನ್ನು ಕಡಿಮೆ ಮಾಡಿಕೊಡಬೇಕು ಎನ್ನುವ ಭಾವನೆ ಇರಬೇಕೇ ವಿನಃ ಅದಲ್ಲದೆ ಒಂದು ಪಂಪುಸೆಟ್ಟಿನ ಸೌಲಭ್ಯ ದೊರಕಿಸಿಕೊಡಬೇಕಾದರೆ ನಮಗೆ 3,000 ರೂಪಾಯಿ ಖರ್ಚಾಗುತ್ತದೆ ಎಂದು ಹೆಚ್ಚಿಸುವಂಥಾದ್ದು ಸರಿಯಲ್ಲ. ಮತ್ತು ಆದಷ್ಟು ಸಾಮಾನಿನ ಬೆಲೆಗಳೂ ಕೂಡ ಕಡಿಮೆಯಾಗಬೇಕು. ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಪಂಪುಸೆಟ್ಟುಗಳು ಎಷ್ಟು ಇವೆ ಎನ್ನುವ ವಿಷಯ ಹೇಳಿದ್ದರು. ಈ ಲೆಕ್ಕಾಚಾರವನ್ನು ಯಾವ ಆಧಾರದಮೇಲೆ ಕೊಟ್ಟಿದ್ದಾರೆ ಎಂದು ಹೇಳುವುದಕ್ಕೆ ಬರುವುದಿಲ್ಲ. ವಿದ್ಯುಚ್ಛಕ್ತಿ ಮಂಡಲಿಯ ಲೇಟೆಸ್ಟ್ ಲೆಕ್ಕಾಚಾರದ ಪ್ರಕಾರ ಜುಲೈ ತಿಂಗಳಿನಿಂದ ಇಂದಿನವರೆಗೆ ಪಂಪುಸೆಟ್ಟು ವಿತರಣೆ ಮಾಡಿರುವುದು 95,902. ಇದರಲ್ಲಿ ಕೋಲಾರ 14,272 ಬೆಂಗಳೂರು 23,923 ತುಮಕೂರು 11,232, ಸೌತ್ ಕೆನರಾ 10,214, ಇನ್ನು ನಾಲ್ಕು ಜಿಲ್ಲೆಗಳಲ್ಲಿ ಸರ್ಕಾರದವರಿಂದ 50 ಪರ್ಸೆಂಟು

ಪಂಪುಸೆಟ್ಟುಗಳನ್ನು ಹೊಂದಿರುತ್ತಾರೆ. ಈ ಲೆಕ್ಕಾಚಾರವನ್ನು ತೆಗೆದುನೋಡಿದರೆ ಸರಾಸರಿ ಇವರ ಪಂಪುಸೆಟ್ಟಿನ ಅಶ್ವಶಕ್ತಿ 4 ಹೆಚ್.ಪಿ. ಇರುತ್ತದೆ, ಅಂದರೆ 96 ಸಾವಿರ ಪಂಪುಸೆಟ್ಟಿಗೆ 3 ಲಕ್ಷ 84 ಸಾವಿರ ಹಾರ್ಸ್‌ಪವರ್ ಆಗುತ್ತದೆ. ಅವರು ಏರಿಸಿರುವ ಕನಿಷ್ಠ ದರ 24 ರೂಪಾಯಿ. ವರ್ಷ ವರ್ಷಕ್ಕೂ ಹೆಚ್ಚು ಮಾಡುತ್ತಿದ್ದಾರೆ. ಈ ಲೆಕ್ಕಾಚಾರದ ಪ್ರಕಾರ 92 ಲಕ್ಷ 16 ಸಾವಿರ ರೂಪಾಯಿ ಅಷ್ಟನ್ನು ರೈತರಿಗೆ ಹೆಚ್ಚಿಗೆ ಏರಿಸಿದಂತಾಯಿತು. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಯಾವ ರೀತಿಯಿಂದ ಇಲ್ಲಿ ಲೆಕ್ಕಾಚಾರ ಕೊಟ್ಟಿದ್ದಾರೋ ಗೊತ್ತಿಲ್ಲ.

ಇನ್ನು ಈ ಸಂದರ್ಭದಲ್ಲಿ ಕೈಗಾರಿಕೆ ವಿಷಯ ಹೇಳಬೇಕಾಗಿದೆ. ಈ ವಿದ್ಯುಚ್ಛಕ್ತಿಗೆ ಎಲ್ಲಾ ಖರ್ಚನ್ನೂ ನಾವೇ ವಹಿಸಿಕೊಂಡು ಮದ್ರಾಸ್‌ಗೆ 5 ಪೈಸೇಯಂತೆಯೂ, ಆಂಧ್ರದವರಿಗೆ 7 ಪೈಸೇ ಯಂತೆಯೂ, ಕೇರಳದವರಿಗೆ 8-9 ಪೈಸೇಯಂತೆಯೂ ಮಾರಿದ್ದಾರೆ. ಆದರೆ ನಮ್ಮವರೇ ಆದ ರೈತರಿಗೆ ಈ ವಿಷಯದಲ್ಲಿ ನಿಷ್ಕರುಣೆ ತೋರಿಸಿರುವುದು ಇದರ ಅರ್ಥ ಏನು ಎನ್ನುವುದು ನನಗೆ ಗೊತ್ತಾಗುವುದಿಲ್ಲ. ನಾನು ಈ ಸಂದರ್ಭದಲ್ಲಿ ಖಂಡಿತವಾಗಿಯೂ ಹೇಳುತ್ತೇನೆ. ಈವೊತ್ತು ನಮ್ಮ ದೇಶದಲ್ಲಿ ಸುಧಾರಣೆ ಆಗಬೇಕಾದರೆ 75 ಪರ್ಸೆಂಟು ರೈತರಮೇಲೆಯೇ ಹೊಣೆ ಇದೆ. ಅವರೇ ಉತ್ಪತ್ತಿ ಮಾಡಿಕೊಡಬೇಕು. ಹೀಗಿರುವಾಗ ಅವರಮೇಲೆ ಈ ರೀತಿ ಧೋರಣೆ ಅನುಸರಿಸುವುದು ಸರಿಯಾದುದಲ್ಲ. ಈ ರೀತಿ ಮಾಡಿದರೆ ಅದು ಶಾಪವಾಗುತ್ತದೆ. ಮತ್ತು ಅದರಿಂದ ಉತ್ಪತ್ತಿಯೂ ಕೂಡ ಬಹಳಷ್ಟು ಕಡಿಮೆಯಾಗುತ್ತದೆ ಎಂದು ಸರ್ಕಾರದ ಗಮನಕ್ಕೆ ತಿಳಿಸಬಯಸುತ್ತೇನೆ.

ಇನ್ನು ನೀರಾವರಿ ಲೆಕ್ಕಾಚಾರ ತೆಗೆದುಕೊಂಡರೆ ಇಡೀ ರಾಜ್ಯದಲ್ಲಿ 8.73ರಷ್ಟು ನೀರಾವರಿ ಯನ್ನು ಹೊಂದಿದ್ದೇವೆ. ಅದರಲ್ಲೂ ಕೂಡ 5.5 ಪರ್ಸೆಂಟು ಸ್ಮಾಲ್ ನೀರಾವರಿ ಯೋಜನೆಗಳನ್ನು ಪಡೆದಿದ್ದೇವೆ. ಈ ರೀತಿ ನಮ್ಮ ಎಲ್ಲಾ ನದಿಗಳ ನೀರನ್ನು ಉಪಯೋಗಿಸಿಕೊಂಡು ನೀರಾವರಿ ಯೋಜನೆಗಳನ್ನು ಕೈಗೊಂಡರೂ ಕೂಡ ನಾವು ಆಲ್ ಇಂಡಿಯಾ ಲೆವಲ್‌ಗೆ ಬರುವುದಕ್ಕೆ ಸಾಧ್ಯವಾಗು ವುದಿಲ್ಲ. ಆಲ್ ಇಂಡಿಯಾ ಲೆವಲ್ ನೀರಾವರಿ ಯೋಜನೆ 25 ಪರ್ಸೆಂಟು ಇದೆ. ಅದೇ ರೀತಿಯಾಗಿ ನಮ್ಮ ಮೈಸೂರು ರಾಜ್ಯದಲ್ಲಿಯೂ ಮಾಡಬೇಕು. ಅವರ ಮಟ್ಟಕ್ಕೆ ಬರಬೇಕಾದರೆ ಇರಿಗೇಷನ್‌ಗೆ ಹೆಚ್ಚು ಪಂಪುಸೆಟ್ಟುಗಳನ್ನು ಉಪಯೋಗಿಸಿ ಹೆಚ್ಚು ಬೆಳೆಯನ್ನು ಬೆಳೆಸಬೇಕು. ಬರೀ ಪ್ರಾಜೆಕ್ಟಿನಿಂದ ಮಾತ್ರವೇ ಸಾಧ್ಯವಾಗುವುದಿಲ್ಲ. ಈ ರೀತಿ ಹೆಚ್ಚು ಬೆಳೆ ಬೆಳೆಸಬೇಕಾದರೂ ಕೂಡ ವಿದ್ಯುಚ್ಛಕ್ತಿ ಮಂಡಲಿ ಅಧ್ಯಕ್ಷರು ಒಂದು ಲೆಕ್ಕಾಚಾರ ಕೊಟ್ಟು ಮದ್ರಾಸ್ ಮತ್ತು ಆಂಧ್ರಪ್ರದೇಶದಲ್ಲಿ ಹೇಗೆ ಮಾಡುತ್ತಿದ್ದಾರೆ ಎನ್ನುವುದನ್ನು ತಿಳಿಸಬೇಕು. ನಮ್ಮ ರಾಜ್ಯದಲ್ಲಿ ವ್ಯವಸಾಯದಲ್ಲಿ ಹೆಚ್ಚು ಉತ್ಪತ್ತಿ ಬರುವ ಭಾಗ ಮಂಡ್ಯ. ಅಲ್ಲಿ ವ್ಯವಸಾಯ ಕೆಲಸ ಮಾಡಬೇಕಾದರೆ ಒಂದು ದಿವಸಕ್ಕೆ ಅರ್ಧಗಂಟೆ, ಒಂದು ಗಂಟೆಯೂ ಕೂಡ ಪಂಪುಸೆಟ್ಟಿನಿಂದ ನೀರು ಸಿಕ್ಕುವುದಿಲ್ಲ. ಆದರೆ ಮದ್ರಾಸ್ ಮತ್ತು ಆಂಧ್ರ ಪ್ರದೇಶ ನೋಡಿದರೆ, ಮದ್ರಾಸ್ ರಾಜ್ಯದ ತಂಜಾವೂರಿನಲ್ಲಿ ಒಂದು ದಿವಸಕ್ಕೆ 6 ಗಂಟೆ ಕಾಲ ನೀರು ಸಿಕ್ಕುತ್ತದೆ ಮತ್ತು ಆಂದ್ರದಲ್ಲಿ ದಿವಸಕ್ಕೆ 7 ಗಂಟೆ ಪಂಪುಸೆಟ್ ಉಪಯೋಗಮಾಡುತ್ತಿ ದ್ದಾರೆ, ಇಲ್ಲಿ ಅರ್ಧ ಅಥವ ಒಂದು ಗಂಟೆ ನೀರು ಸಿಕ್ಕುವುದೇ ಕಷ್ಟವಾಗಿದೆ. ಹೀಗಿರುವಾಗ ಲೆಕ್ಕಾಚಾರ ನೋಡಬಾರದು. ಇನ್ನೊಂದು ಒಂದು ಎಚ್. ಪಿ. ಗೆ 4 ರೂಪಾಯಿನಂತೆ ಏರಿಸಿ ದ್ದಾರೆ. ಅದರ ಪ್ರಕಾರ 3 ಎಚ್.ಪಿ. ಪಂಪು ಇರುವವರಿಗೆ ವರ್ಷಕ್ಕೆ 144 ರೂಪಾಯಿ ಬೀಳುವುದು. ದಾವಾಷಾ ಪ್ರಕಾರ 1,440 ಯೂನಿಟ್ ವಿದ್ಯುಚ್ಛಕ್ತಿ ಉಪಯೋಗಮಾಡಬಹುದು. ಬೇರೆ ಕಡೆ ಹಾಗೆ ಮಾಡುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಷಕ್ಕೆ 400-500 ಯೂನಿಟ್ಟು ಗಳಿಗಿಂತ ಹೆಚ್ಚು ಖರ್ಚುಮಾಡುವುದಿಲ್ಲ, ಅದು ವಿಶಿಷ್ಟ ಜಿಲ್ಲೆ, ನಮ್ಮ ಜಿಲ್ಲೆಯಲ್ಲಿ ವರ್ಷಕ್ಕೆ 6-7 ತಿಂಗಳು ಮಳೆ ಬರುವುದು, 4-5 ತಿಂಗಳು ಪಂಪುಸೆಟ್ಟು ಉಪಯೋಗಮಾಡಿದರೆ ಹೆಚ್ಚು. ಏರಿಸಿರುವ ಕನಿಷ್ಠ ದರದ ಪ್ರಕಾರ ನಾವು 7-8 ತಿಂಗಳು ಈ ದರವನ್ನು ಪುಕ್ಕಟ್ಟೆ ತುಂಬಬೇಕು. ಇನ್ನು 4 ತಿಂಗಳು ಕನಿಷ್ಠ ಮಿತಿ ಮೀರಿ ಉಪಯೋಗಮಾಡಿರುವುದಿಲ್ಲ. ನಮ್ಮಲ್ಲಿ ಭೂಗರ್ಭದಲ್ಲಿ ನೀರು ಹೊಳೆಗೆ ಹರಿದು ಹೋಗುವುದು. ಇದರಿಂದಾಗಿ ಕೆಲವರು ಪಂಪ್‌ಸೆಟ್ ಇರುವವರು ಅದನ್ನು ತೆಗೆದುಹಾಕಬೇಕಾಗಿದೆ, ಬೇರೆ ಮಾರ್ಗವಿಲ್ಲ. ಈಗಾಗಲೆ ಹತ್ತು ಹಣ್ಣು ಗಿಡಗಳಿರುವವರು ಮತ್ತು ಒಂದೆರಡು ಎಕರೆ ಇರುವವರು ಪಂಪುಸೆಟ್ಟನ್ನು ಪಡೆದಿದ್ದಾರೆ. ಅವರಿಗಿರುವುದು ಪಂಪು ಸೆಟ್ಟನ್ನು ಕಿತ್ತುಹಾಕುವುದೊಂದೇ ದಾರಿ. ಬೇರೆ ಮಾರ್ಗವಿಲ್ಲ. ಆದುದರಿಂದ ಈ ವಿಚಾರವನ್ನು ತೀವ್ರವಾಗಿ ಆಲೋಚನೆಮಾಡಬೇಕು.

ಇನ್ನೊಂದು ವಿಚಾರ. ವಿದ್ಯುಚ್ಛಕ್ತಿ ದರ ಏರಿಸುವುದಕ್ಕೆ ಯಾವ ಮಟ್ಟದಲ್ಲಿ ಏರಿಸಬೇಕು, ಹೇಗೆ ಏರಿಸಿದರೆ ಲೆಕ್ಕಾಚಾರ ಸರಿದೂಗಿಸಬಹುದು ಎಂದು ಲೆಕ್ಕಾಚಾರ ಮಾಡಲು ಒಂದು ಟ್ಯಾರಿಫ್ ಕಮಿಟಿ ನೇಮಕವಾಗಿದೆ. ಆದರೆ ಆ ಸಮಿತಿಯು ತನ್ನ ವರದಿಯನ್ನು ಕೊಡುವುದಕ್ಕೆ ಮುಂಚೆಯೇ ಈ ದರವನ್ನು ಏರಿಸುವ ಔಚಿತ್ಯವಾದರೂ ಏನು ! ಖುಷಿ ಬಂದಾಗ ಏರಿಸುವುದು, ಖುಷಿ ಬಂದ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಹಾಗೆ ರೈತರಮೇಲೆ ದಬ್ಬಾಳಿಕೆ ನಡೆಸುವುದು ಮುಂದುವರೆದರೆ ಖಂಡಿತ ಒಳ್ಳೆಯದಾಗುವುದಿಲ್ಲ. ನೀವು ಖಂಡಿತ ಬದುಕುವುದಿಲ್ಲ. ನೂರಕ್ಕೆ 75 ಮಂದಿ ರೈತರಿರುವ ಈ ದೇಶದಲ್ಲಿ ರೈತರ ಹೊಟ್ಟೆ ಉರಿಸಿದರೆ ತೊಂದರೆಯಾಗುವುದು. ದಿನಬೆಳಗಾದರೆ ರೈತರನ್ನು ಉದ್ಧಾರಮಾಡುವುದಾಗಿ ಹೇಳುವ ನೀವು ಹೀಗೆ ಅವರಿಗೆ ತೊಂದರೆ ಮಾಡುವುದು ಯೋಗ್ಯವಲ್ಲ. ಲಾಲ್‌ಬಹದ್ದೂರು ಶಾಸ್ತ್ರಿಯವರು ಜೈ ಜವಾನ್ ಜೈ ಕಿಸಾನ್ ಎಂದು ಹೇಳಿದರು. ಈಗ ಆ ಜವಾನ ಎಲ್ಲಿದ್ದಾನೆ ಎಂದು ಯೋಚನೆ ಮಾಡಬೇಕಾದ ಪರಿಸ್ಥಿತಿ ಇದೆ. ನಮ್ಮ ಜಿಲ್ಲೆಯ ವಿಷಯ ಹೇಳುವುದಾದರೆ ನಾನು ಈ ಸಭೆಗೆ ಬಂದನಂತರ ಐನೂರಕ್ಕೂ ಹೆಚ್ಚು ಪತ್ರಗಳು ಬಂದಿವೆ, ಮಂತ್ರಿಗಳಿಗೆ ಕಳಿಸುತ್ತೇನೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ದೊಡ್ಡ ಗೊಂದಲವಾಗಿದೆ. ಮಲೆನಾಡು ಜಿಲ್ಲೆಯನ್ನು ತಗೆದುಕೊಂಡರೆ ಶಿವಮೊಗ್ಗ ಜಿಲ್ಲೆಯಲ್ಲಿ ಕೂಡ ರೈತರು 3-4 ತಿಂಗಳಿಗಿಂತ ಹೆಚ್ಚು ಕಾಲ ಪಂಪುಸೆಟ್ಟನ್ನು ಉಪಯೋಗ ಮಾಡುವುದಿಲ್ಲ, ಅವರಿಗೆ ದರ ಏರಿಸಿರುವುದು ದೊಡ್ಡ ಕಿರುಕುಳವಾಗಿದೆ. ಪಂಪು ಸೆಟ್ಟನ್ನು ಕಿತ್ತು ಹಾಕಿ ಏಕೆ ಭೂಮಿ ಬಿಟ್ಟು ಹೋಗಬಾರದು ಎಂಬ ಭಾವನೆ ಅವರಲ್ಲಿ ಮೂಡಿದೆ. ಅವರಿಗೆ ಈಗ ಉಳುಮೆ ಮಾಡುವ ಆಸೆಯಿಲ್ಲ. ಅದುದರಿಂದ ಎಚ್ಚರಿಕೆ ಕೊಡುತ್ತೇನೆ. ಒಂದುವೇಳೆ ಕನಿಷ್ಠಮಿತಿ ಹಿಂದಿನಂತೆ ಬದಲಾವಣೆಯಾಗದಿದ್ದರೆ ದೇಶದಾದ್ಯಂತ ರೈತರ ಚಳವಳಿ ನಡೆದು ಸರಕಾರವನ್ನು ಉರುಳಿಸುವುದಕ್ಕೆ ತಯಾರಾಗಬಹುದು.

ಹಿಂದಿನ ಭಾರತ ಮತ್ತು ರಾಮಾಯಣದ ಕಾಲದಿಂದ ರೈತರ ಉದ್ಧಾರ ಸಾಕಷ್ಟಾಗಿಲ್ಲ. ಭಾರತದಲ್ಲಿ ಒಂದು ಪದ್ಯ ಓದಿದ್ದೆ. ಅದರಲ್ಲೂ ಕೂಡ ರೈತರನ್ನು ರಕ್ಷಿಸಬೇಕು, ಉಳುಮೆ ದೇಶಾಭಿವೃದ್ಧಿಗೆ ಸಹಾಯಕವಾದದು, ದೇಶಾಭಿವೃದ್ಧಿಯಾಗಬೇಕಾದರೆ ಉಳುವವರಿಗೆ ಸಕಲ ಸೌಲಭ್ಯಗಳೂ ಸಿಕ್ಕಬೇಕು ಎಂದು ಹೇಳಿದ್ದಾರೆ. ಆ ವಿಷಯವನ್ನು ಮಂತ್ರಿಗಳ ಗಮನಕ್ಕೆ ತಂದು ಆ ಪದ್ಯದ ಸಾರಾಂಶವನ್ನು ಈ ಸಂದರ್ಭದಲ್ಲಿ ಓದಿಹೇಳುತ್ತೇನೆ. ಈ ಪದ್ಯವನ್ನು ಭಾರತ ಯುದ್ಧ ಮುಗಿದಮೇಲೆ ಧರ್ಮರಾಯ ನಾರದರನ್ನು ರಾಜ್ಯಧರ್ಮ ಮತ್ತು ಪ್ರಜಾಹಿತದ ವಿಷಯ ಕೇಳಿದಾಗ ನಾರದರು ಧರ್ಮರಾಯನಿಗೆ ಹೇಳಿದರು, ಸಭಾಪರ್ವದಲ್ಲಿ ಇದು ನಮೂದಾಗಿದೆ.

"ಕೃಷಿಮೊದಲು ಸರ್ವಕ್ಕೆ ಕೃಷಿಯಿಂ,
ಪರಿಸುವುದಾ ಕೃಷಿಯನುದ್ಯೋ
ಗಿಸುವ ಜನವನು ಪಾಲಿಸುವುದಾ ಜನಪದದ, ಜನದೀ,
ವಸು ತೆರಳುವುದು ವಸುವಿಂ ಸಾಧಿಸುವುದಶಾಧ್ಯವದು
ಕೃಷಿ ವಿಹೀನನ ದೇಶವದು ದುರ್ದೇಶ ಕೇಳೆಂದಾ.

ಅತಿ ಪ್ರಾಮುಖ್ಯವಾದ ಮಹಾಭಾರತದಲ್ಲಿ ನಾರದರು ರಾಜನೀತಿಯನ್ನು ಕುರಿತು ಧರ್ಮರಾಯನಿಗೆ ಇದನ್ನು ಹೇಳಿದರು. ಇದರ ಅರ್ಥ ದೇಶೋದ್ಧಾರಕ್ಕೆ ಕೃಷಿಯೇ ಮುಖ್ಯ. ಕೃಷಿಯ ಅಭಿವೃದ್ಧಿಯಿಂದ ಜನರ ಉದ್ಧಾರ. ಕೃಷಿ ಉದ್ಯೋಗದ ಜನರನ್ನು ರಾಜನು ಸರ್ವವಿಧದ ಸಹಕಾರ ನೀಡಿ ರಸಬೇಕು. ಕೃಷಿವಿಹೀನವಾದ ದೇಶ ನಿಷ್ಫಲ. ಕೃಷಿಕರನ್ನು ಉದ್ಧರಿಸದದ ದೇಶವೇ ದುರ್ದೇಶ (ಕೆಟ್ಟದೇಶ). ಈ ಪದ್ಯ ಅರ್ಥಗರ್ಭಿತವಾಗಿದೆ. ಸರ್ವಂ ಭಕ್ಷಯಾಮಿ, ಸಾಗರಂ ಭಕ್ಷಯಾಮಿ ಎಂದು ಮಾಡಬಾರದು. ಸಾಗರಕ್ಕೂ ಈಗ ಕೈ ಹಾಕಿದ್ದಾರೆ, ಅದರಿಂದ ತೊಂದರೆಯಾಗುತ್ತದೆ ಎಂದು ಪುನಃ ಎಚ್ಚರಿಕೆ ಕೊಡುತ್ತೇನೆ.

ತಮ್ಮ ಲೆಕ್ಕಾಚಾರವನ್ನು ತಿಳಿಸುವಾಗ ವಿದ್ಯುತ್ ಮಂಡಲಿಯ ಅಧ್ಯಕ್ಷರು 6 ಕೋಟಿ ರೂಪಾಯಿಗಳ ವೆಚ್ಚದಲ್ಲಿ 20 ಸಾವಿರ ಪಂಪುಸೆಟ್ಟುಗಳನ್ನು ಮುಂದಿನ 5 ವರ್ಷಗಳಲ್ಲಿ ಹಂಚಬೇಕೆಂದಿರುವುದಾಗಿ ಹೇಳಿದ್ದಾರೆ. ಮುಂದಿನ ಈ ಯೋಜನೆಯನ್ನು ಕಾರ್ಯಗತ ಮಾಡದೆ ಕೈಬಿಡುವುದು ಒಳ್ಳೆಯದು. ಏಪ್ರಿಲ್‌ನಿಂದ ದರವನ್ನು ಎರಡರಷ್ಟು ಮಾಡಿದ್ದಾರೆ. ಆಮೇಲೆ ಎಷ್ಟು ಪಂಪುಸೆಟ್ಟುಗಳಿಗೆ ಅರ್ಜಿ ಬಂದಿದೆಯೆಂದು ನೋಡಿದರೆ ಗೊತ್ತಾಗುವುದು, ಹೆಚ್ಚಾಗಿ ಯಾರೂ ಅರ್ಜಿ ಹಾಕಿಲ್ಲ. ಒಂದುವೇಳೆ ಹಾಕಿದ್ದರೂ ಏರಿರುವ ದರ ಗೊತ್ತಿಲ್ಲದೆ ಹಾಕಿರಬಹುದೇ ಹೊರತು ಗೊತ್ತಿರುವವರು ಯಾರೂ ಖಂಡಿತ ಅರ್ಜಿ ಹಾಕುವುದಿಲ್ಲ. ನಿಮ್ಮ ಯೋಜನೆ ಖಂಡಿತ ಕಾರ್ಯಗತವಾಗುವುದಿಲ್ಲ. ಒಂದು ವಿಷಯ ಹೇಳುತ್ತೇನೆ, ತಾವು ವಿದ್ಯುತ್ ಮಂಡಲಿಯನ್ನು ದೂರಿದರೆ ಪ್ರಯೋಜನವಿಲ್ಲ, ವಿದ್ಯುತ್ ಉತ್ಪತ್ತಿಯ ಕೇಂದ್ರ ನಿಮ್ಮ ಕೈಲಿದೆ, ಈಗ ವಿದ್ಯುತ್ತನ್ನು ಮಾರುತ್ತಿದ್ದೀರಿ. ಆದರೂ ಡ್ಯೂಟಿ ಹಾಕುತ್ತಿದ್ದೀರಿ. 4.8 ಪೈಸೆಗಳಂತೆ ವಿದ್ಯುತ್ತನ್ನು ಮಾರುತ್ತಿದ್ದೀರಿ, 2 ಪೈಸೆ ಲಾಭವಿದೆ, ಮತ್ತು ಡ್ಯೂಟಿ ಇದೆ. ಹೀಗಿರುವಾಗ ಲಾಭ ಬಂದರೂ

ಸಹಾಯಧನ ಕೊಡಬೇಕು, ಮತ್ತು ಸಾಲಮಾಡಿರುವುದಕ್ಕೆ ಶೇಕಡ ಒಂಬತ್ತೂವರೆಯಷ್ಟು ಬಡ್ಡಿ ಹೊರಬೇಕು. ಸಹಾಯ ಧನ, ಸಬ್ಸಿಡಿ ಕೊಟ್ಟು ಕಡಮೆ ಬಡ್ಡಿಯಲ್ಲಿ ಹಣ ಕೊಟ್ಟು ಕೆಲವು ಸ್ಕೀಂ ಮಾಡಿ ಈಗ ಶೇಕಡ 50 ರಿಂದ 75ರವರೆಗೆ ಸಹಾಯಧನ ಕೊಡುವ ಪದ್ಧತಿಯಿದೆ.

ಪ್ರಯೋಜನಕ್ಕೆ ಬರಬಹುದಾದ ಕೆಲಸಗಳಿಗೆ, ರೈತರ ನೀರಾವರಿ ಅಭಿವೃದ್ಧಿ ಕಾರ್ಯಗಳಿಗೆ ವಿದ್ಯುಚ್ಛಕ್ತಿ ಮಂಡಲಿಯವರು ಏಕೆ ವಿದ್ಯುತ್ತನ್ನು ಕೊಡಬಾರದು ಎಂದು ಕೇಳುತ್ತೇನೆ. ವಿದ್ಯುತ್ ಮಂಡಲಿಯವರಿಗೆ ಕಮ್ಮಿ ಬಡ್ಡಿಯ ದರದಲ್ಲಿ ಹಣ ಸಿಕ್ಕುವಂತಹ ಏರ್ಪಾಡು ಮಾಡಬೇಕು, ತಮ್ಮ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಅವರಿಗೆ ಬಿಟ್ಟು ಕೊಡಬೇಕು, ಅದು ಸಾಧ್ಯವಿಲ್ಲದೇ ಇದ್ದರೆ ಅವರ ಎಲ್ಲಾ ಆಡಳಿತವನ್ನೂ ಸರ್ಕಾರದವರೇ ವಹಿಸಿಕೊಳ್ಳಬೇಕು, ಈ ಮೂರರಲ್ಲಿ ಒಂದು ಕ್ರಮವನ್ನು ತುರ್ತಾಗಿ ಮಾಡಬೇಕು, ಇಲ್ಲದೇ ಇದ್ದರೆ ಈ ಅವ್ಯವಹಾರಗಳು ಇಷ್ಟಕ್ಕೇ ನಿಲ್ಲುವುದಿಲ್ಲ. ಮೇನ್ ಲೈನ್‌ನಲ್ಲಿ ವಿದ್ಯುತ್‌ನ್ನು ಟ್ಯಾಪ್ ಮಾಡುತ್ತಾರೆ ಅದರಲ್ಲಿ ಎಷ್ಟು ನಷ್ಟವಾಗುತ್ತದೆ ಎಂಬ ಲೆಕ್ಕಾಚಾರ ತೆಗೆಯಬೇಕು. ವಿದ್ಯುಚ್ಛಕ್ತಿಯ ಮೀಟರ್ಸ್ ಕೆಲವು ಕಡೆ ರೆಕಾರ್ಡೇ ಮಾಡುವುದಿಲ್ಲ. ರೆಕಾರ್ಡ್ ಮಾಡಿದರೂ ಕೂಡ ಬೇರೆ ರೀತಿಯ ಲೆಕ್ಕಾಚಾರ ತೋರಿಸುವಂತಹದಾಗಿರುತ್ತದೆ. ಒಂದು ದೊಡ್ಡ ಫ್ಯಾಕ್ಟರಿಯಲ್ಲಿ ತಿಂಗಳಿಗೆ 5 ಸಾವಿರ ರೂಪಾಯಿನಷ್ಟು ಎಲೆಕ್ಟ್ರಿಸಿಟಿ ಖರ್ಚಾಗುವುದಿದ್ದರೆ 500-600 ರೂಪಾಯಿನಷ್ಟು ಲೆಕ್ಕಾಚಾರವನ್ನು ತೋರಿಸುವಷ್ಟು ಮಟ್ಟಿಗೆ ಈ ಮೀಟರುಗಳನ್ನು ಬದಲಾವಣೆ ಮಾಡಿರುತ್ತಾರೆ. ತಮ್ಮ ಮೀಟರುಗಳಲ್ಲೂ ಕೂಡ ದೋಷ ಇದೆ. ವೈರ್ಸ್, ಕಟ್‌ಔಟ್ಸ್, ತಂತಿ, ಕಂಬಗಳು ಅವುಗಳೆಲ್ಲದರ ವಿಷಯದಲ್ಲೂ ಸಹ ಬಹಳಷ್ಟು ಜಾಗ್ರತೆಯನ್ನು ವಹಿಸಬೇಕು. ಕಾಪರ್‌ವೈರ್ ಮತ್ತು ಕಂಬಗಳ ವಿಷಯವಾಗಿ ವಿದ್ಯುಚ್ಛಕ್ತಿ ಮಂಡಲಿಗೆ ಬೇಕಾದಷ್ಟು ಸಲ ಬರೆದಿದ್ದೇನೆ. ಇನ್ನೊಂದು ವಿಷಯ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು, ಕಳೆದ ಐದು ವರ್ಷಗಳಲ್ಲಿ ಹಿಂದೆ ಇದ್ದ 2 ಜನ ಸೂಪರ್‌ವೈಸರುಗಳು ಸಾಧಾರಣ 400ರಿಂದ 500 ಪಂಪ್ ಸೆಟ್ಟುಗಳನ್ನು ಸರ್ವಿಸ್ ಮಾಡದೇ ಹಾಗೆಯೇ ಬಿಟ್ಟಿದ್ದಾರೆ, ಇದರ ಅರ್ಥ ಏನಾಗುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳು ನೋಡಬೇಕು; 500 ಪಂಪ್ ಸೆಟ್ಟುಗಳಿಗೆ ಕಮ್ಮಿ ಎಂದರೆ 2 ಲಕ್ಷ ರೂಪಾಯಿಗಳವರೆಗೂ ನಷ್ಟವಾಗಿದೆ. ವೈರ್, ಕಂಬಗಳು ಮತ್ತು ಇನ್ನಿತರ ಕಟ್‌ಔಟ್ ಮುಂತಾದ ಸಲಕರಣೆಗಳಲ್ಲಿ ಅವ್ಯವಹಾರ ಯಾವ ರೀತಿ ನಡೆಯುತ್ತಿದೆ ಎಂಬುವನ್ನು ತಾವು ನೋಡಬೇಕು. ಬುಡದಿಂದ ತಲೆಯವರೆಗೂ ಈ ಅವ್ಯವಹಾರದಲ್ಲಿ ಲಿಂಕ್ ಇದೆ ಎಂದು ಹೇಳಿ ನನಗೆ ಅನಿಸುತ್ತದೆ. ಈ ರೀತಿ ಅವ್ಯವಹಾರ ನಡೆದರೆ ಎಷ್ಟು ದಿವಸ ಈ ಎಲೆಕ್ಟ್ರಿಸಿಟಿ ಬೋರ್ಡು ಬದುಕಬಹುದು, ಎಷ್ಟು ದಿವಸ ರೈತರಮೇಲೆ ತೆರಿಗೆ ಹೇರಿ ತಾವು ರಾಜ್ಯಭಾರ ಮಾಡಿಕೊಂಡು ಹೋಗುತ್ತೀರಿ ಎಂದು ಕೇಳುತ್ತೇನೆ. ಕಡೆಯದಾಗಿ ತಮಗೆ ಎಚ್ಚರಿಕೆ ಕೊಡಬಯಸುತ್ತೇನೆ, ಈ ಅವ್ಯವಹಾರಗಳೇನಿವೆ ಇದನ್ನು ಕೂಡಲೇ ತಡೆಗಟ್ಟದಿದ್ದರೆ ನಮ್ಮ ಈ ಖಾತೆ ಏನಿದೆ ಇದು ಖಂಡಿತವಾಗಿಯೂ ಉಳಿಯುವಂತಿಲ್ಲ ಎಂದು ಹೇಳಿ ಅಧ್ಯಕ್ಷರು ಇಷ್ಟು ಅವಧಿ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಂಚೇಗೌಡ (ಮದ್ದೂರು).—ಮಾನ್ಯ ಸಭಾಪತಿಗಳೇ, ಇಲ್ಲಿಯವರೆಗೂ ಅನೇಕ ಸ್ನೇಹಿತರು ಎರಡು ಕಡೆಯಿಂದಲೂ ಕೂಡ ವಿದ್ಯುಚ್ಛಕ್ತಿ ಮಂಡಲಿಯಿಂದ ಎಷ್ಟುಮಟ್ಟಿನ ಅನ್ಯಾಯವಾಗುತ್ತಾ ಇದೆ ಎಂಬ ವಿಷಯವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಎಲ್ಲ ಮಾನ್ಯ ಸದಸ್ಯರೂ ಕೂಡ ಏಕ ಕಂಠದಿಂದ ಅನ್ಯಾಯ ಅತಿಯಾಯಿತು, ಜನತೆಗಾಗಲಿ, ಜನತೆಯಿಂದ ಚುನಾಯಿತರಾಗಿ ಬಂದಿರತಕ್ಕ ನಮಗಾಗಲಿ ಇದರಿಂದ ಬಹಳ ಚಿಂತೆಯಾಗಿದೆ, ಇದು ಬಹಳ ಹದಗೆಡತಕ್ಕ ಸ್ಥಿತಿಗೆಬಂದಿದೆ ಎಂದು ಹೇಳಿದರು, ಈ ರೀತಿ ಆಡಳಿತ ಕೆಡುತ್ತಾ ಇರುವುದಕ್ಕೆ ಚೇರ್ಮನ್ನರೇ ಜವಾಬ್ದಾರರು ಎಂದು ನಮ್ಮ ಅನೇಕ ಸ್ನೇಹಿತರು ಹೇಳಿದ್ದಾರೆ. ಮಂಡಲಿಗೆ ಸೇರಿದಂತಹ ಅಧಿಕಾರಿಗಳನ್ನು ಕಂಟ್ರೋಲ್ ಮಾಡತಕ್ಕ ಅಧಿಕಾರ ಆಡಳಿತವನ್ನು ಸರಿಯಾಗಿ ವ್ಯವಸ್ಥೆ ಮಾಡತಕ್ಕದ್ದು ಮಂಡಲಿಗೆ ವಹಿಸಿದಂತಹ ಒಂದು ಕಾರ್ಯ, ಇದರ ಮಹತ್ವ ಏನೆಂಬುದನ್ನು ಯೋಚನೆ ಮಾಡತಕ್ಕದ್ದೂ ಕೂಡ ಅನಿವಾರ್ಯ ಎಂದು ಕಾಣುತ್ತದೆ. ಯಾವಾಗ ಚೇರ್ಮನರ ಜವಾಬ್ದಾರಿ ಎಂದು ಹೇಳುತ್ತೇವೆ, ಆ ಚೇರ್ಮನರ ಜವಾಬ್ದಾರಿಗಿಂತ ಅವರನ್ನು ನೇಮಕ ಮಾಡತಕ್ಕ ಸರ್ಕಾರಕ್ಕೆ ಬುದ್ಧಿ ಇಲ್ಲವೇನೋ ಎಂಬ ಮಾತನ್ನು ಹೇಳಿದರೆ ಬಹುಶಃ ತಪ್ಪಾಗುವುದಿಲ್ಲ ಎಂದು ಕಾಣುತ್ತದೆ. ನಾವು ಜನತೆಯಿಂದ ಮತ ತೆಗೆದುಕೊಂಡು ಬಂದು ಜನತೆಗೆ ಅನ್ಯಾಯವಾಗುತ್ತಾ ಇದೆ, ಇಂಥವರು ಮಾಡಿದರು ಎಂದು ಹೇಳಿದರೂ ಕೂಡ ಕಿವುಡರಂತೆ ನಟನೆ ಮಾಡಿ ನೇಮಕ ಮಾಡತಕ್ಕದ್ದು ಸರಿಯಾದ್ದಲ್ಲ ಎಂದು ಕಾಣುತ್ತದೆ. ಈ ಸಾರಿ ಬಜೆಟ್ ಸೆಷನ್‌ನಲ್ಲಿ, ಕಳೆದ ಸಾರಿ ಬಜೆಟ್ ಸೆಷನ್‌ನಲ್ಲಿ ಅನೇಕ ಸ್ನೇಹಿತರು ಯಾವುದೇ ಖಾಸಗಿ ಸಂಸ್ಥೆಗಾಗಲಿ ಮಂಡಲಿಗಾಗಲಿ ಖಾಸಗಿ ಮನುಷ್ಯರನ್ನಲ್ಲದೆ ಅಧಿಕಾರಿಗಳನ್ನು ಅವರಲ್ಲೂ ನಿವೃತ್ತ

(ಶ್ರೀ ಎಂ. ಮಂಚೇಗೌಡ)

ಅಧಿಕಾರಿಗಳನ್ನು ನೇಮಕ ಮಾಡಕೂಡದು ಎಂಬುದಾಗಿ ಒಂದು ಕಂಠದಿಂದ ಹೇಳಿದ್ದರೂ ಕೂಡ ಈ ರೀತಿ ಅವರನ್ನು ನೇಮಕ ಮಾಡಿರುವುದು ಸರಿಯಲ್ಲ. ನಾನು ಕೂಡ ಕಳೆದ ಬಜೆಟ್ ಅಧಿವೇಶನದಲ್ಲಿ ಈ ಮಂಡಲಿಯ ಚೇರ್ಮನ್‌ರ ಕಾರ್ಯಕಲಾಪಗಳ ಬಗ್ಗೆ ಸರ್ಕಾರದವರ ಗಮನವನ್ನು ಸೆಳೆದಾಗ ಸಭಾನಾಯಕರು ಇಂತಹ ಅನ್ಯಾಯ ಆಗದಂತೆ ನೋಡಿಕೊಳ್ಳುತ್ತೇನೆ ಎಂದು ಉತ್ತರ ಕೊಟ್ಟರು. ಆದರೂ ಕೂಡ ಮತ್ತೆ ಮತ್ತೆ ಅದೇ ತಪ್ಪು ಮಾಡುತ್ತಾ ಇದ್ದಾರೆ. ನಿಮ್ಮ ಮನಸ್ಸು ಹಿಡಿತದಲ್ಲಿಲ್ಲವೇನೋ ಅಂತ ಹೇಳಿದರೆ ತಪ್ಪಾಗುವುದಿಲ್ಲ ಎಂದು ಕಾಣುತ್ತದೆ. ಸ್ವಾಮಿ, ಮೈಸೂರು ರಾಜ್ಯದಲ್ಲಿ 100ಕ್ಕೆ 80 ಭಾಗ ರೈತರು ಇದ್ದಾರೆ ಈಗ ವಿದ್ಯುಚ್ಛಕ್ತಿಗೆ ಏನೊಂದು ಹಣ ಖರ್ಚಾಗಿದೆ ಅದರಲ್ಲಿ ಬಹುತೇಕ ಮೊಬಲಗು ರೈತರಿಂದ ಬಂದದ್ದು ಎಂದು ಹೇಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಸ್ವಾಮಿ, ಇದಕ್ಕೆ ಸಂಬಂಧಪಟ್ಟ ಮಿನಿಸ್ಟರು ಸಭೆಯಲ್ಲಿ ಇಲ್ಲ, ತಾವು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಅಧ್ಯಕ್ಷರೇ ನಮ್ಮ ಮಂತ್ರಿಮಂಡಲದಲ್ಲಿ ಸುಮಾರು 31 ಜನ ಮಂತ್ರಿಗಳಿದ್ದಾರೆ. ಸಭೆಯಲ್ಲಿ ಎರಡೂವರೆ ಕೋಟಿ ಪ್ರಜೆಗಳ ಆಗು ಹೋಗುಗಳನ್ನು ಹಾಗೂ ಭವಿಷ್ಯವನ್ನು ನಿರ್ಧರಿಸತಕ್ಕ ಕಾಲದಲ್ಲಿ ಇಲ್ಲಿ ಚರ್ಚೆಯಾಗುತ್ತಿರುವ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿರುವುದು ನಾಚಿಕೆಗೇಡಿನ ಪ್ರಸಂಗ ಈ ಸರ್ಕಾರಕ್ಕೆ ಇಷ್ಟಾದರೂ ಬುದ್ಧಿ ಇರಬೇಡವೇ ?

4-30 P. M.

ಶ್ರೀ ಎಂ. ಮಂಚೇಗೌಡ.—ಮಾನ್ಯ ಸದಸ್ಯರು ಬುದ್ಧಿಯಿಲ್ಲದ ಸರ್ಕಾರ ಎಂದು ಹೇಳಿದರು. ಇದು ಬುದ್ಧಿಯಿಲ್ಲದ ಸರ್ಕಾರವೋ ಅಥವಾ ಬುದ್ಧಿಗೆಟ್ಟ ಸರ್ಕಾರವೋ ಎಂಬುದನ್ನು ಅವರು ವಿಮರ್ಶೆ ಮಾಡಿ ಹೇಳಿದ್ದರೆ ಚೆನ್ನಾಗಿತ್ತು. ಈ ವಿಷಯ ಹಾಗಿರಲಿ.

ಸ್ವಾಮಿ, ಅಧ್ಯಕ್ಷರೇ, ಅಲ್ಲಿ ಇಂಥ ಅನ್ಯಾಯಗಳನ್ನು ನಡೆಯದಂತೆ ಆಡಳಿತ ನಡೆಸತಕ್ಕ ದಕ್ಷರನ್ನು ನೇಮಕಮಾಡದೆ, ಸರ್ಕಾರದವರು ಹಿಂದೂಮುಂದೂ ಏನೂ ಆಲೋಚನೆಯನ್ನೇ ಮಾಡದೆ ಯಾರನ್ನೋ ಒಬ್ಬರನ್ನು ಅಲ್ಲಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ಅಲ್ಲಿ ಒಬ್ಬ ಖಾಸಗೀ ಅಧ್ಯಕ್ಷರನ್ನು ನೇಮಕಮಾಡಿದ್ದರೆ ಈದಿವಸ ನಡೆಯುತ್ತಿರುವಷ್ಟು ಅನ್ಯಾಯಗಳು ನಡೆಯುತ್ತಿರಲಿಲ್ಲಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ನೂರಕ್ಕೆ ಸುಮಾರು 80-85 ಜನರು ರೈತರಿದ್ದಾರೆ. ಈ ವಿದ್ಯುಚ್ಛಕ್ತಿಯ ಉತ್ಪಾದನೆಗಾಗಿ ಮಾಡಿರತಕ್ಕ ಹಣದಬಗ್ಗೆ ಬಡ್ಡಿಯನ್ನು ತೆರತಕ್ಕವರು ರಾಜ್ಯದಲ್ಲಿರತಕ್ಕ ರೈತರು. ಆ ಸಾಲದ ಹೊರೆಯನ್ನು ಹೊತ್ತಿರತಕ್ಕವರು ರಾಜ್ಯದಲ್ಲಿರತಕ್ಕ ರೈತರು. ಅಷ್ಟಾದರೂ ಆ ರೈತರಿಗೆ ಅನುಕೂಲಗಳಿಲ್ಲ. ಇನ್ನು ಆ ಟ್ಯಾರೀಫ್ ಬೋರ್ಡಿನಲ್ಲೂ ಅನೇಕ ಅನ್ಯಾಯಗಳು ನಡೆಯುವುಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಆ ವಿದ್ಯುಚ್ಛಕ್ತಿ ಮಂಡಲಿಯವರು ಈ ಉದ್ಯಮವನ್ನು ಲಾಭ – ನಷ್ಟಗಳು ಬಾರದಂತೆ ನಡೆಸಬೇಕೆಂಬ ತತ್ವದಮೇಲೆ ಹೋಗಬೇಕೆಂದು ಹೇಳುತ್ತಿರುವುದರಿಂದ ಈ ದರಗಳನ್ನು ಏರಿಸಲೇ ಬೇಕೆಂದು ಅವರು ಹೇಳುತ್ತಿದ್ದಾರೆ. ಕಳೆದ 10-15 ವರ್ಷಗಳಿಂದ ನಮ್ಮ ಕೈಗಾರಿಕೆಗಳಲ್ಲಿ ಲಕ್ಷಾಂತರ ರೂಪಾಯಿಗಳ ನಷ್ಟವಾಗುತ್ತಿದೆ. ಆ ನಷ್ಟವನ್ನು ಕಟ್ಟಿಕೊಡತಕ್ಕವರು ಯಾರು ! ಆ ನಷ್ಟವನ್ನೂ ಕೂಡ ಈ ರೈತರಮೇಲೆ ಹಾಕಲಾಗುತ್ತಿದೆ. ಕೈಗಾರಿಕೆಗಳಲ್ಲಿ ಕೆಲಸಮಾಡತಕ್ಕ ಜನರೇನಿದ್ದಾರೆ ಅವರಲ್ಲಿ ಅನೇಕ ಸಂಘ ಸಂಸ್ಥೆಗಳಿವೆ. ಛೇಂಬರ್ ಆಫ್ ಕಾಮರ್ಸ್ ಮತ್ತು ಇಂಡಿಯನ್ ಛೇಂಬರ್ ಆಫ್ ಕಾಮರ್ಸ್ ಎಂದು ಅನೇಕ ಸಂಸ್ಥೆಗಳಿವೆ. ಅವರಲ್ಲಿ ಸಂಘಟನೆ ಚೆನ್ನಾಗಿದೆ. ಆದರೆ ಅಂಥ ಒಂದು ಸಂಘಟನೆ ರೈತವರ್ಗದಲ್ಲಿಲ್ಲ. ಆದರೆ ಅವರೇನೂ ಈ ವಿಚಾರದಲ್ಲಿ ಸಾಮೂಹಿಕ ಮುಷ್ಕರವನ್ನು ಹೂಡಬೇಕಾಗಿಲ್ಲ. ಅವರಿಂದ ಓಟುಗಳನ್ನು ಪಡೆದು ಬಂದಿರತಕ್ಕ ಜನರೇನಿದ್ದಾರೆ ಅವರೇ ಈ ಬಗ್ಗೆ ಚಳುವಳಿಯನ್ನು ಹೂಡತಕ್ಕ ಕಾಲ ಸಮೀಪಿಸುತ್ತಿದೆ. ನಾವು ಇಲ್ಲಿಯವರೆಗೂ ಎಷ್ಟೆಷ್ಟೋ ಹೇಳಿದ್ದಾಯಿತು. ಆದಾಗ್ಯೂ ಆ ಬೋರ್ಡಿನವರಿಗೆ ಕಿವಿ ಕೇಳಿಸುವುದಿಲ್ಲ. ಅವರಿಗೆ ಪರಿಜ್ಞಾನವೂ ಇದ್ದಹಾಗೆ ಕಾಣುತ್ತಿಲ್ಲ. ಮುಂದಿನ ವರ್ಷ ದೇಶದಲ್ಲಿ ಆಹಾರಕ್ಕೇನು ಮಾಡಬೇಕೆಂಬ ರೋಧನವು ಎಲ್ಲೆಲ್ಲೂ ಕೇಳಿಬರುತ್ತಿದೆ ರೈತರು ಏನಾದರೂ ಕಷ್ಟಪಟ್ಟು ಆಹಾರವನ್ನು ಉತ್ಪತ್ತಿಮಾಡೋಣ ಎಂದು ಪ್ರಯತ್ನಪಟ್ಟರೆ ಪಂಪ್‌ಸೆಟ್ಟನ್ನು ಕೊಂಡುಕೊಳ್ಳುವುದಕ್ಕೆ ವಗೈರೆ ಖರ್ಚುವೆಚ್ಚಗಳಿಗೆ ಖಾಸಗೀ ಜನರಲ್ಲಿ ಸಾಲಮಾಡೋಣ ಎಂದರೆ ಆ ಡೆಟ್ ರಿಲೀಫ್ ಆಕ್ಟಿನ ದೆಶೆಯಿಂದ ಅಲ್ಲಿಯೂ ಸಾಲ ಸಿಕ್ಕುತ್ತಿಲ್ಲ. ಇನ್ನು ಬ್ಯಾಂಕುಗಳಲ್ಲೂ ಸಹಾ ರೈತನಿಗೆ ಸಾಲಸಿಕ್ಕುವಂತಿಲ್ಲ. ಈ ಎಲ್ಲಾ ತೊಂದರೆಗಳನ್ನೂ ದಾಟಿಕೊಂಡು ಆ ರೈತನು ತನ್ನ ಮನೆಮಠಗಳನ್ನೂ ಮಾರಾಟ ಮಾಡಿ ಪಂಪ್ ಸೆಟ್ಟುಗಳನ್ನು ಕೊಂಡು ತಂದು ಹಾಕಿದ್ದರೆ ಆತನಿಗೆ ಆ ಬಾವಿಗಳಲ್ಲಿ ಒಂದು ಗಂಟೆಗಿಂತ ನೀರು

ಹೆಚ್ಚಾಗಿ ಸಿಕ್ಕುತ್ತಿಲ್ಲ. ಇಷ್ಟು ರೈತ ಕಷ್ಟಪಟ್ಟು ಕೆಲಸಮಾಡುತ್ತಿದ್ದಾನೆಂಬುದೂ ಕೂಡ ಇವರಿಗೆ ಪರಿಜ್ಞಾನವಿಲ್ಲ. ಈ ಬೋರ್ಡಿನವರು ಏನೋ ನೇರವಾಗಿ ಆಕಾಶದಿಂದ ಕೆಳಗಿಳಿದವರಂತೆ ನಟಿಸುತ್ತಿದ್ದಾರೆ. ಇವರಲ್ಲಿ ಮಾನವೀಯತೆಯ ದೃಷ್ಟಿ ಕೂಡ ಇಲ್ಲ. ಹೀಗೆ ರೈತನಿಗೆ ದಿನ ದಿನಕ್ಕೂ ಅನ್ಯಾಯಗಳು ಹೆಚ್ಚುತ್ತಿರುವುದರಿಂದ ದೇಶದಲ್ಲಿ ಜನರು ಬೊಬ್ಬೆಯೇಳತಕ್ಕ ಮಟ್ಟದಲ್ಲಿದ್ದಾರೆ. ಸರ್ಕಾರದವರು ಹಿಂದೆಕೊಟ್ಟಿದ್ದ ಆಶ್ವಾಸನವನ್ನು ಅವರು ಇಂದು ಮುರಿದುಹಾಕುತ್ತಿದ್ದಾರೆ. ಅಂದಾಗ ಇನ್ನು ನಮ್ಮಲ್ಲಿ ಆ ಶಿಸ್ತು ಸಂಯಮಗಳು ಎಲ್ಲಿಂದ ಬರಬೇಕು ? ಪರಿಸ್ಥಿತಿ ಹೀಗೆ ಮುಂದುವರಿದರೆ ಮುಂದೆ ನಾವು ಏನುಮಾಡಬೇಕೆಂಬದನ್ನು ನಾವೂ ಕೂಡ ಮಾಡೇ ಮಾಡುತ್ತೇವೆ. ಕೈಗಾರಿಕೆಗಳವರಿಗೆ ದರವನ್ನು ಇಳಿಸತಕ್ಕ ಕಾಲದಲ್ಲಿ ನಮ್ಮನ್ನೆಲ್ಲಾ ಕೇಳಿ ಅದನ್ನು ಇಳಿಸಿದರೋ : ಈ ದಿವಸ ನಮ್ಮ ಸರ್ಕಾರದವರು ಹೊರ ರಾಜ್ಯಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿರುವುದರಿಂದ ಎಷ್ಟು ನಷ್ಟವಾಗುತ್ತದೆ ? ಕೋಟಿಗಟ್ಟಲೆ ನಷ್ಟವಾಗುತ್ತದೆ. ಆದರೆ ಆ ಕೈಗಾರಿಕಾ ಕ್ಷೇತ್ರದಲ್ಲಿ ಒಂದು ಸಂಘಟನೆ ಇರುವುದರಿಂದ ಅವರಿಗೆ ಹೆದರಿ ಅದನ್ನು ಸಬ್ ಸಿಡೈಜ್ ಮಾಡಿದ್ದಾರೆ. ಅದನ್ನು ಆ ವಿದ್ಯುಚ್ಛಕ್ತಿ ಮಂಡಲಿ ಕೊಡಲಿ. ರೈತನ ನಾನಾ ಸಮಸ್ಯೆಗಳು ಪರಿಹಾರವಾಗಬೇಕಾಗಿದ್ದರೆ ಈ ಬೋರ್ಡಿನಿಂದ ಸಾಧ್ಯವಿಲ್ಲ. ಆ ವಿದ್ಯುಚ್ಛಕ್ತಿ ಬೋರ್ಡಿನವರು ಅವರೇ ಬೇರೆ, ಸರ್ಕಾರದವರೇ ಬೇರೆ ಇಲ್ಲಿರತಕ್ಕ ಜನರೇ ಬೇರೆ ಎಂದು ಭಾವಿಸಿರುವಂತೆ ಕಾಣುತ್ತದೆ. ಏನೇ ಆಗಲೀ ದೇಶದಲ್ಲಿರತಕ್ಕ ಜನರನ್ನೂ ಜನರ ಪ್ರತಿನಿಧಿಗಳನ್ನೂ ಮತ್ತು ಸರ್ಕಾರವನ್ನೂ ಆ ಬೋರ್ಡಿನವರು ಬಹಳ ಧಿಕ್ಕಾರದಿಂದ ಕಾಣುತ್ತಿದ್ದಾರೆ. ಆದ್ದರಿಂದ ಅದು ರೈತನ ಏಳಿಗೆಗಾಗಿ ಇರತಕ್ಕ ಸಂಸ್ಥೆಯಲ್ಲ ಎಂಬುದನ್ನು ಮನಗಂಡಂತೆ ಆಯಿತು. ಇದರಿಂದ ರೈತನ ಏಳಿಗೆಯಾಗುತ್ತದೆಂಬುದನ್ನು ಅವರು ಮರೆಯಬೇಕು. ಇನ್ನು ಆ ವಿದ್ಯುಚ್ಛಕ್ತಿ ಮಂಡಲಿಯಲ್ಲಿರತಕ್ಕ ನೌಕರರು ಆ ಮಂಡಲಿಯ ಕಂಟ್ರಾಕ್ಟರುಗಳಿಗೆ ಸರಿಯಾಗಿ ಹೊಂದಿಕೊಂಡು ವಿಧೇಯರಾಗಿ ನಡೆಯದಿದ್ದರೆ ಅವರನ್ನು ಆ ತಾಲ್ಲೂಕಿನಿಂದ ಆ ಕೂಡಲೆ ವರ್ಗಮಾಡಲಾಗುತ್ತದೆ. ಅವರನ್ನು ಹೊಂದಿಕೊಂಡವರು ಒಂದೇ ತಾಲ್ಲೂಕಿನಲ್ಲಿ ಎಷ್ಟು ವರ್ಷಗಳು ಬೇಕಾದರೂ ಇರಬಹುದು. ಆ ಒಂದು ಭಯದಿಂದ ಕಂಟ್ರಾಕ್ಟರು ಎಂಥ ಕೀಳು ದರ್ಜೆಯ ಮೆಟೀರಿಯಲ್ಸ್‌ಗಳನ್ನು ಉಪಯೋಗ ಮಾಡಿದರೂ ಅದನ್ನು ಯಾರೂ ತನಿಖೆಮಾಡುವಂತಿಲ್ಲ. ತನಿಖೆಮಾಡಿದರೆ ವರ್ಗ ಆಯಿತೆಂತಲೇ. ಕಂಟ್ರಾಕ್ಟರು ಎಲ್ಲಿಗೆ ವಿದ್ಯುಚ್ಛಕ್ತಿಯನ್ನು ಮಂಜೂರು ಮಾಡಬೇಕೆಂದರೆ ಅಲ್ಲಿಗೆ ಮಾತ್ರ ವಿದ್ಯುಚ್ಛಕ್ತಿ ಸಿಕ್ಕುತ್ತದೆ. ನೂರು ಜನರು ವಿದ್ಯುಚ್ಛಕ್ತಿ ಬೇಕೆಂದು ಅರ್ಜಿಹಾಕಿಕೊಂಡರೆ ಅದರಲ್ಲಿ ಒಂದು ಕ್ರಮಪ್ರಕಾರ ಗ್ರಾಮಗಳಿಗೆ ಸರಬರಾಯಿ ಮಾಡುತ್ತಿಲ್ಲ. ಯಾವ ಕೆಲಸಕ್ಕೂ ಲಂಚವಿಲ್ಲದೆ ಕೆಲಸ ನಡೆಯುವಂತೆಯೇ ಇಲ್ಲ. ಹತ್ತನೆಯ ಮನುಷ್ಯನಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡತಕ್ಕ ಛಾನ್ಸ್ ಬಂದಾಗ ಅವನಿಗೆ ಕಂಬವಿಲ್ಲ, ತಂತಿಇಲ್ಲ ಎಂದು ಏನೇನೋ ಸಬೂಬನ್ನು ಹೇಳಿ ಅವನಿಗಿಂತ ಹಿಂದೆ ಅರ್ಜಿ ಹಾಕಿಕೊಂಡಿದ್ದವನಿಗೆ ಸರ್ವೀಸನ್ನು ಕೊಡುತ್ತಿದ್ದಾರೆ. ಇದೆಂಥ ನೀತಿ ? ಇದಕ್ಕೆಲ್ಲಾ ಮೂಲ ಕಾರಣ ಆ ಬೋರ್ಡಿನ ಅಧ್ಯಕ್ಷರಿಗೆ ಯಾರ ಭಯವೂ ಇಲ್ಲ. ಜನರ ಪ್ರತಿನಿಧಿಯೊಬ್ಬ ಅಲ್ಲಿ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ. ಶ್ರೀಮತಿ ನಾಗರತ್ನಮ್ಮನವರು ಅಲ್ಲಿ ಒಬ್ಬ ಸರ್ಕಾರದವರ ಕಾರ್ಯದರ್ಶಿಯನ್ನು ಇಟ್ಟು ಏಕೆ ಆಡಳಿತವನ್ನು ನಡೆಸಬಾರದೆಂದು ಹೇಳಿದರೂ. ಅದೂ ಕೂಡ ಸರಿಯಾದ್ದಲ್ಲ. ಆ ಸ್ಥಾನದಲ್ಲಿ ಒಬ್ಬ ಖಾಸಗೀ ಸದಸ್ಯರನ್ನಿಟ್ಟರೇನೇ ಅಲ್ಲಿ ಅವರು ಸ್ವಲ್ಪ ಭಯದಿಂದ ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳುತ್ತೇನೆ. ಆ ಸ್ಥಾನದಲ್ಲಿ ಯಾರೋ ಚುನಾವಣೆಗಳಲ್ಲಿ ಸೋತವರನ್ನು ಇಲ್ಲವೇ ನಿವೃತ್ತ ಅಧಿಕಾರಿಗಳನ್ನು ಇಟ್ಟರೆ ಆಗುವುದೇ ಹೀಗೆ. ಇನ್ನೊಬ್ಬ ಯಾರೋ ನನ್ನ ಮಾನ್ಯ ಸ್ನೇಹಿತರು ಇದು ಕೇಂದ್ರಕ್ಕೆ ಸೇರಿದ ಬಾಬು, ರಾಜ್ಯ ಸರ್ಕಾರದವರು ಇದರಲ್ಲಿ ಕೈಹಾಕುವುದಕ್ಕೆ ಬರುವುದಿಲ್ಲ ಎಂದು. ಜನತೆಗೆ ವಿರೋಧ ಮಾಡತಕ್ಕ ಸಂಸ್ಥೆ ಅದು ಯಾರದೇಆಗಿರಲಿ ಅದನ್ನುರದ್ದುಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ. ಆದ್ದರಿಂದ ಕೂಡಲೇ ಆ ಬೋರ್ಡ್‌ನ್ನು ರದ್ದುಮಾಡಿ ಆ ಅಧಿಕಾರವನ್ನು ಕೂಡಲೆ ಸರ್ಕಾರದವರು ವಹಿಸಿಕೊಳ್ಳಬೇಕೆಂದೂ ಆ ತರುವಾಯ ಅವರು ಅದನ್ನು ಒಬ್ಬ ಜನರ ಪ್ರತಿನಿಧಿಗೆ ವಹಿಸಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಸರ್ಕಾರದವರು ಇಂಥ ಮಂಡಳಿಗಳ ಆಡಳಿತದ ಬಗ್ಗೆ ರಚಿಸತಕ್ಕ ಕಾನೂನುಗಳಲ್ಲಿ ಇಂಥಅಕ್ರಮ ಪ್ರಸಂಗಗಳಲ್ಲಿ ನಡೆದಾಗ ಕೈಹಾಕುವುದಕ್ಕೆ ಅನುಕೂಲ ಆಗುವಂತೆ ಸರ್ಕಾರದವರು ಅವಕಾಶ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ಈ ವಿದ್ಯುಚ್ಛಕ್ತಿ ಪಂಪುಗಳಿಗೆ ಏನು ದರವನ್ನು ಏರಿಸಿದ್ದಾರೋ ಅದನ್ನು ತಕ್ಷಣ ಕ್ಯಾನ್ಸಲ್‌ಮಾಡಬೇಕು. ಜನಗಳ ಆಶೋತ್ತರಗಳನ್ನು ಈಡೇರಿಸಬೇಕಾದರೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವನ್ನು ತೆಗೆದುಕೊಳ್ಳುವುದಕ್ಕೆ ಈಗ ಕಾಲ ಸನ್ನಿಹಿತವಾಗಿ ಬಂದಿದೆ ಎಂಬುದಾಗಿ ಹೇಳುತ್ತೇನೆ.

ಸಭಾಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಎನ್. ನಂಜೇಗೌಡ (ಅರಕಲುಗೂಡು).—ಮಾನ್ಯ ಸಭಾಧ್ಯಕ್ಷರೇ, ಕೆಲವಾರು ವಿಷಯಗಳನ್ನು ವಿದ್ಯುಚ್ಛಕ್ತಿಮಂಡಲಿಯ ಬಗ್ಗೆ ಹೇಳತಕ್ಕದ್ದು ಅತ್ಯಗತ್ಯವಾಗಿದೆ. ಅದೃಷ್ಟವಶಾತ್, ಈ ಮಂಡಲಿ ರಚನೆಯಾದ ಮೇಲೆ ಈಗ ಮೊದಲನೆಯಬಾರಿ ಇದು ಇಲ್ಲಿ ಚರ್ಚೆಗೆ ಬಂದಿದೆ. ಇಂತಹ ಸಂದರ್ಭದಲ್ಲಿ ಕೇವಲ ಏನೋ ಮಂಡಲಿಯ ಬಗ್ಗೆ ಕೆಲವಾರು ಒರಟು ಮಾತುಗಳನ್ನು ಹೇಳಿ ಅವರ ಮೇಲೆ ಅನಗತ್ಯವಾದ ಆಕ್ಷೇಪಣೆಗಳನ್ನು ಹೊರಿಸುವಂಥ ಉದ್ದೇಶವನ್ನು ಇಟ್ಟುಕೊಂಡು ನಾನು ಇಲ್ಲಿ ಮಾತನಾಡುವುದಕ್ಕೆ ಬಯಸುವುದಿಲ್ಲ. ಮಂಡಲಿಯ ವ್ಯವಹಾರ ಏನಿದೆ, ಮಂಡಲಿಯವರಿಗೆ ಇರುವ ಕಷ್ಟಸುಖಗಳೇನು, ಅವನ್ನೂ ಕೂಡ ನಾನು ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ಈ ಮೊದಲು ಮಂಡಲಿಯವರ ವಿಚಾರವಾಗಿ ನಾನು ಮುಖ್ಯ ಮಂತ್ರಿಗಳಿಗೆ ಕಾಗದ ಬರೆದ ಸಂದರ್ಭದಲ್ಲಿ ಅವರು ನನಗೆ ಉತ್ತರ ಕೊಟ್ಟರು. ಆ ಉತ್ತರದಿಂದ ನನ್ನ ಮಾತುಗಳನ್ನು ಪ್ರಾರಂಭ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ಟ್ಯಾರಿಫ್ ರೇಟ್ಸನ್ನು ಏರಿಸಿದ ಬಗ್ಗೆ ಅವರು ಕೆಲವಾರು ಕಾರಣಗಳನ್ನು ಕೊಟ್ಟಿದ್ದಾರೆ. ಅದಕಾಗಿ ಐ. ಪಿ. ಸೆಟ್ ಮೇಲೆ ದರವನ್ನು ಏರಿಸಬೇಕಾಯಿತು ಎಂಬುದಾಗಿ ಹೇಳಿದ್ದಾರೆ. ಕಾರಣ ಕೊಟ್ಟಿದ್ದರಲ್ಲಿ ಅವರು ಸಂಪೂರ್ಣವಾಗಿ ಕಾರಣಗಳನ್ನು ಕೊಟ್ಟಿಲ್ಲವೆಂದು ನನಗೆ ಅಭಿಪ್ರಾಯವುಂಟಾಗಿದೆ. ಏಕೆಂದರೆ, ರೂರಲ್ ಎಲೆಕ್ಟ್ರಿಫಿಕೇಷನ್ನಿನಲ್ಲಿ ಸರ್ವಿಸಿಂಗ್ ಆಫ್ ಐ.ಪಿ. ಸೆಟ್ಸ್ ರಿಟರ್ನ್ ಬರುತ್ತಾ ಇಲ್ಲ, ಮಂಡಲಿ ನಷ್ಟ ಹೊಂದುತ್ತಿದೆಯೆಂದು ಹೇಳಿದ್ದಾರೆ. ನಾನು ಏತಕ್ಕೆ ಹೀಗೆ ಆಗುತ್ತದೆ. ಪರಿಶೀಲನೆಮಾಡಿ ನೋಡಿದ್ದೀರಾ ಎಂದು ಸಂಬಂಧಪಟ್ಟ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಾ ಗ್ರಾಮಗಳಿಗೂ ವಿದ್ಯುಚ್ಛಕ್ತಿ ಸರಬರಾಜುಮಾಡುವ ಉದ್ದೇಶದಿಂದ ಐ.ಪಿ. ಸೆಟ್ಟುಗಳನ್ನು ಕೊಡಲು ಕೇಂದ್ರ ಸರ್ಕಾರದವರು ಸಬ್ಸಿಡಿ ರೇಟ್‌ನಲ್ಲಿ ರಾಜ್ಯ ಸರ್ಕಾರದವರಿಗೆ ಹಣವನ್ನು ನಿರ್ದಿಷ್ಟವಾಗಿ ಕೊಡುತ್ತಾ ಇಲ್ಲವೇ? ನನಗೆ ತಿಳಿದ ಪ್ರಕಾರ ವರ್ಷಂಪ್ರತಿ 2 ಕೋಟಿ ರೂಪಾಯಿಗಳಷ್ಟು ಹಣವನ್ನು ಇದೇ ಉದ್ದೇಶಕ್ಕಾಗಿ ರಾಜ್ಯ ಸರ್ಕಾರಕ್ಕೆ ಕೊಡುತ್ತಿದ್ದಾರೆ. ಈ ಹಣವನ್ನು ರಾಜ್ಯ ಸರ್ಕಾರದವರು ಮಂಡಲಿಗೆ ಕೊಡುತ್ತಾ ಇಲ್ಲವೆಂದು ನನಗೆ ಅರ್ಥವಾಗುತ್ತದೆ. ಈ ಹಣ ಎಲ್ಲಿ ಹೋಗುತ್ತದೋ ಗೊತ್ತಿಲ್ಲ. ಅವರು ಸಬ್ಸಿಡಿ ರೂಪದಲ್ಲಿ ಕೊಡುವ ಹಣವನ್ನು ಮಂಡಲಿಯವರಿಗೆ ಕೊಡದೇ ಇರುವುದರಿಂದಲೇ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜು ಕಡಿಮೆಯಾಗಿ ಸರ್ವಿಸಿಂಗ್ ಆಫ್ ಐ. ಪಿ. ಸೆಟ್ಟುಗಳನ್ನು ಕೊಡುತ್ತಾ ಇಲ್ಲ. ಆದಕೋಸ್ಕರ ಈ ಮಂಡಲಿ ನಷ್ಟದಲ್ಲಿ ಕೆಲಸಮಾಡುತ್ತಿದೆಯೆಂದು ಹೇಳುತ್ತಿದ್ದಾರೆ. ಯಾವ ಉದ್ದೇಶಕ್ಕಾಗಿ ಇದನ್ನು ಡೈವರ್ಟ್ ಮಾಡಿದರೆಂಬುದು ಗೊತ್ತಿಲ್ಲ. ಕೇಂದ್ರಸರ್ಕಾರದಿಂದ ಹಣ ಬರುತ್ತದೆಂಬ ಬಲದಿಂದ ಇವರು ಅವನ್ನು ಬೇರೆ ರೀತಿಯಲ್ಲಿ ಉಪಯೋಗಿಸುವುದನ್ನು ನೋಡಿದರೆ, ಮತ್ತು ಎಲ್ಲಾ ತಪ್ಪುಗಳನ್ನು ಮಂಡಲಿಯವರ ಮೇಲೆಯೇ ಹೊರಿಸುವುದನ್ನು ನೋಡಿದರೆ, ಇದರಲ್ಲಿ ಏನೂ ಅರ್ಥವಿಲ್ಲ. ಮಂಡಲಿಯವರು ಇದರಿಂದ ಯಾವ ರೀತಿ ಲಾಭದಾಯಕವಾಗಿ ಕೆಲಸಮಾಡಬಹುದು. ಒಂದು ಐ. ಪಿ. ಸೆಟ್ಟಿಗೆ ಹಳೆಯ ಮೈಸೂರು ಭಾಗದಲ್ಲಿ 3ಸಾವಿರ ಅಥವಾ 4 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಆದರೆ ಒಂದು ಐ. ಪಿ. ಸೆಟ್ಟನ್ನು ಹೊಸ ಮೈಸೂರಿನಲ್ಲಿ ಹಾಕಬೇಕಾದರೆ ಸುಮಾರು 25ಸಾವಿರ ರೂಪಾಯಿಗಳಾದರೂ ಆಗುವುದಿಲ್ಲ. ಮಿನಿಮಂ ವರ್ಕ್‌ಔಟ್ ಆಗುವುದಿಲ್ಲ. Are we to be penalised ? ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಫೈನಾನ್ಷಿಯಲ್ ಸ್ಟೇಟ್‌ಮೆಂಟ್ 1957ರಿಂದ 1967ರವರೆಗೆ ರೂರಲ್ ಎಲೆಕ್ಟ್ರಿಫಿಕೇಷನ್ನಿನಲ್ಲಿ ಸರ್ವಿಸಿಂಗ್ ಆಫ್ ಐ. ಪಿ. ಸೆಟ್ಸ್‌ಗಳಿಂದ ಎಷ್ಟರಮಟ್ಟಿಗೆ ಖರ್ಚಾಗಿದೆಯೆಂಬುದು ಈ ರೀತಿ ಇದೆ. ಓದುತ್ತೇನೆ.

		ರೂ.
ಚಿತ್ರದುರ್ಗ	...	17,83,000
ಗುಲ್ಬರ್ಗ	...	20,47,000
ಹಾಸನ	...	4,12,000
ಹುಬ್ಬಳ್ಳಿ	...	55,25,000
ಮಂಡ್ಯ	...	1,84,000
ಮಂಗಳೂರು	...	24,42,000
ಮೈಸೂರು	...	72,000 (ಮೂರು ವರ್ಷಗಳಿಗೆ)
ಡಿವಿಷನ್ (ಶ್ರೀ ಡಿ. ಎಂ. ಸಿದ್ದಯ್ಯನವರ ಕ್ಷೇತ್ರ)		
ತುಮಕೂರು	...	5,00,000

ಕೇವಲ ಎರಡು ಡಿವಿಷನ್ನುಗಳಲ್ಲಿ ಲಿಮಿಟ್ ಮೀರಿ ಖರ್ಚುಮಾಡಿರುವುದಕ್ಕೆ ಮತ್ತು ಉಳಿದ ಭಾಗಗಳಲ್ಲಿ ಅಂದರೆ, ಕಾರವಾರ, ಮಂಡ್ಯ ಮತ್ತು ಹಾಸನ—ಇಂತಹ ಕಡೆಗಳಲ್ಲಿ ನೀವು ಪೀನಲೈಜ್ ಮಾಡುತ್ತೇವೆಂದು ಹೇಳಿದರೆ ನಾವು ಕಣ್ಣುಮುಚ್ಚಿ ನೋಡುವುದಕ್ಕೆ ತಯಾರಾಗಿಲ್ಲ, ಕೇಂದ್ರ ಸರ್ಕಾರದಿಂದ ಬರತಕ್ಕ ಹಣವನ್ನು ನೇರವಾಗಿ ಬೋರ್ಡಿಗೆ ಕೊಡದೆ ಅದನ್ನೂ ಕೂಡ ಪ್ರೈಮರಿಯಾಗಿ ಲೈನ್ ಎಳೆಯುವುದಕ್ಕೆ ಉಪಯೋಗಿಸಿ ಅದರಲ್ಲಿ ರಾಜಕಾರಣ ಮಾಡಿ ಕೃಷ್ಣಾ ಮತ್ತು ಕಾವೇರಿ ಬೇಸಿನ್‌ನಲ್ಲಿರುವವರಿಗೆ ಜಗಳ ತರುವುದು, ಕಾರವಾರ, ಮಂಡ್ಯಾ ಮತ್ತು ಹಾಸನ—ಈ ಪ್ರದೇಶಗಳಲ್ಲಿರುವವರಿಗೆ ಜಗಳ ತರುವುದು—ಹೀಗೆ ಮುಖ್ಯಮಂತ್ರಿಗಳು ರಾಜ್ಯಭಾರ ಮಾಡಿ ಕಾಲಹರಣ ಮಾಡುವುದು ನಿಜವಾಗಿ ಸೌಜನ್ಯವಾಗಿಲ್ಲ. ಏತಕ್ಕೆಂದರೆ, ಇಲ್ಲಿ ಇವತ್ತು ನಾನು ಕ್ರೋಢೀಕರಿಸಿದಂಥ ಅಂಕಿ ಅಂಶಗಳನ್ನು ಹೇಳದೆ ಹೋದರೆ ಖಂಡಿತವಾಗಿ ನಾನು ಅಪರಾಧಮಾಡಿದಂತಾಗುತ್ತದೆ. ಅದಕ್ಕಾಗಿ ಹೇಳಿದ್ದೇನೆ. ಕೆಲವಾರು ಭಾಗಗಳಿಗೆ ಹೆಚ್ಚಿಗೆ ಅನುಕೂಲ ಮಾಡಿದ್ದಾರೆಂದು ಹೇಳಿದರು. ಏತಕ್ಕೆ ನಾನು ಈ ಪ್ರಸಂಗದಲ್ಲಿ ಅಂಕಿಅಂಶಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆಂದರೆ, ವಾಸ್ತವವಾಗಿ ಏನು ಎಕ್ಸ್‌ಪೆಂಡಿಚರ್ ಸ್ಪೈಡಿನಲ್ಲಿ ಖರ್ಚುಮಾಡುತ್ತಿರೋ ಅದರಲ್ಲಿ ಕೆಲವು ಭಾಗಗಳಿಗೆ ಬಹಳ ಕಡಿಮೆ ಖರ್ಚುಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಅನೇಕ ಪಂಪುಸೆಟ್ಟುಗಳಿಗೆ ಮಂಡ್ಯಾ ಮುಂತಾದ ಕಡೆಗಳಲ್ಲಿ ಕಡಿಮೆಯಾಗಿ ಖರ್ಚುಮಾಡಲು ಕಾರಣ ಕೇವಲ ಎರಡು ಫರ್ಲಾಂಗ್, ಮೂರು ಫರ್ಲಾಂಗ್ ಲೈನ್ ಎಳೆದರೆ 2—3 ಪಂಪುಸೆಟ್ಟುಗಳನ್ನು ಕೊಡಬಹುದು. ಮಾನ್ಯ ಮುಖ್ಯ ಮಂತ್ರಿಗಳ ಊರಿನಲ್ಲಿ ಎಷ್ಟೋ ದುಡ್ಡನ್ನು ಖರ್ಚುಮಾಡುತ್ತಿದ್ದಾರೆ. ಸೀಲಿಂಗ್ ಲಿಮಿಟ್ ಅಲ್ಲಿ ಇಲ್ಲ. 10 ಎಚ್. ಪಿ. ಗೆ 40 ಸಾವಿರ ರೂಪಾಯಿಗಳಂತೆ ಎಸ್ಟಿಮೇಟ್ ಮಾಡಿರುವ ಉದಾಹರಣೆಗಳಿವೆ. ಈಗ ಎರಡೂವರೆ ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಅದು ತಪ್ಪು. ಹೀಗಾದರೆ ನಿಮ್ಮ ಮಂಡಲಿಯವರಿಗೆ ಎಲ್ಲಿ ಲಾಭದಾಯಕವಾಗಿ ಕೆಲಸಮಾಡುವುದಕ್ಕಾಗುತ್ತದೆ! ತಾವು ಸಂಪೂರ್ಣವಾಗಿ ತಮ್ಮ ಆರ್ಥಿಕ ಹಿತದೃಷ್ಟಿಯನ್ನು ಅನುಸರಿಸಿ ಕೆಲಸಮಾಡುವುದಾದರೆ, ಎರಡೂವರೆ ಸಾವಿರ ರೂಪಾಯಿಗಳಷ್ಟು ಮಂಡಲಿಯವರಿಗೆ ನೀವು ಮಾಡುತ್ತಿರಲಿಲ್ಲ. 10 ಎಚ್. ಪಿ. ಇಂಜಿನ್ ಕೊಡುವುದಕ್ಕೆ ಅವರಿಗೆ 25 ಸಾವಿರ ರೂಪಾಯಿಗಳು ಅಥವಾ 40 ಸಾವಿರ ರೂಪಾಯಿಗಳು ಬೇಕಾಗುತ್ತದೆ. ಮಿನಿಮಮ್ ಇಷ್ಟೇ ರಿಟರ್ನ್ ಬರಬೇಕೆಂದು ಹೇಳಿದ್ದಾರೆ. ಹೀಗೆ ಮಾಡಿದರೆ ಆಗುವುದಿಲ್ಲ! ಗುಲ್ಬರ್ಗ ಆಗಲೀ ಅಥವಾ ಹಾಸನ ಆಗಲೀ We are not prepared to be penalised. ಎಂಬ ಎಚ್ಚರಿಕೆಯನ್ನು ನಾನು ಕೊಡಲಿಕ್ಕೆ ಇಚ್ಛಿಸುತ್ತೇನೆ, ಇವತ್ತಿನ ದಿವಸ ಒಂದು ಅಂಕಿ ಅಂಶವನ್ನು ತಮ್ಮ ಮುಖಾಂತರ ತಿಳಿಸುತ್ತೇನೆ. ಇತ್ತೀಚೆಗೆ ಇವರು ಮಾಡಿರತಕ್ಕ ಖರ್ಚನ್ನು ತೆಗೆದುಕೊಂಡರೆ ಗೊತ್ತಾಗುತ್ತದೆ. 1965 ರಿಂದೀಚೆಗೆ ಡಿ. ಎಂ. ಸಿದ್ದಯ್ಯನವರ ಊರಿನಲ್ಲಿ 8 ಲಕ್ಷ ರೂಪಾಯಿ ಖರ್ಚುಮಾಡಿದ್ದಾರೆ, ವೀರೇಂದ್ರ ಪಾಟೀಲರ ಊರಿನಲ್ಲಿ 85 ಲಕ್ಷ ರೂಪಾಯಿ ಖರ್ಚಾಗಿದೆ. ಚಿತ್ರದುರ್ಗದಲ್ಲಿ ಸಿದ್ದವೀರಪ್ಪನವರ ಊರಿನಲ್ಲಿ 18 ಲಕ್ಷ ರೂಪಾಯಿ ಖರ್ಚಾಗಿದೆ. ಅದು ಬಿಟ್ಟರೆ ಬಾಗಲಕೋಟೆಯಲ್ಲಿ 60 ಲಕ್ಷ ರೂಪಾಯಿ. ಈ ಖರ್ಚನ್ನು ಹಳೆಯ ಮೈಸೂರಿನಲ್ಲಿ, ಹಾಗೂ ಕಾರವಾರ ಮುಂತಾದ ಕಡೆಗಳಲ್ಲಿ ಟ್ಯಾರಿಫ್ ರೇಟುಗಳ ಮೂಲಕ ವಸೂಲು ಮಾಡುತ್ತೇವೆಂದು ಹೇಳಿದರೆ ಏನು ಮಾಡುವುದು! ಸೀಲಿಂಗ್ ಲಿಮಿಟ್ ತೀರ್ಮಾನ ಮಾಡುವಾಗ ಜಿಲ್ಲಾವಾರು ಮಿನಿಮಮ್ ಏಕೆ ಮಾಡಬಾರದು! ಒಂದು ಕಡೆ 30 ಸಾವಿರ ರೂಪಾಯಿ ಖರ್ಚುಮಾಡುತ್ತೀರಿ. ಇನ್ನೊಂದು ಕಡೆ ಒಂದೂವರೆ ಸಾವಿರ ರೂಪಾಯಿ ಖರ್ಚು ಮಾಡುತ್ತೀರಿ. ಅಲ್ಲಿ ಎರಡು ಕಡೆಯೂ ಒಂದೇ ರೀತಿ ಕೊಡಬೇಕೆಂದು ಹೇಳಿದರೆ ಹೇಗೆ! ಇದರಲ್ಲಿ ನೀವು ಇಕ್ವಿಟಿ ಆಫ್ ಜಸ್ಟಿಸ್ ಮಾಡುತ್ತಾ ಇಲ್ಲ. ನಿನ್ನೆ ಮಾನ್ಯ ಮುಖ್ಯ ಮಂತ್ರಿಯವರು ಈ ಪರಿಕೆಯಿಂದ ಕೇವಲ 22 ಲಕ್ಷ ರೂಪಾಯಿ ಚಿಲ್ಲರೆಬರುತ್ತದೆ ಎಂದು ಹೇಳಿದರು. ನೀವು ಮೊಟ್ಟಮೊದಲನೆಯದಾಗಿ ಜನರನ್ನು ರಾಬ್ ಮಾಡುತ್ತಿದ್ದೀರಿ. ನಿಮ್ಮ ಡಿಪಾಸಿಟ್ ಇವತ್ತು 91 ರಿಂದ 95 ಲಕ್ಷ ರೂಪಾಯಿಯಾಗುತ್ತದೆ. ನೀವು ಇವತ್ತು ರೈತರನ್ನು ರಾಬ್ ಮಾಡುತ್ತಿದ್ದೀರಿ. ಐ. ಪಿ. ಸೆಟ್ಸ್‌ಗೆ ಬೆಂಗಳೂರಿನಲ್ಲಿ 18 ಲಕ್ಷ 60 ಸಾವಿರ ಖರ್ಚಾಗಿವೆ. ತುಮಕೂರಿನಲ್ಲಿ ಕೆಲವು ಭಾಗ ಆಗಿವೆ. ಮೈಸೂರಿನಲ್ಲಿ 59 ಲಕ್ಷ ಆಗಿದೆ. ಹಾಸನದಲ್ಲಿ 45 ಲಕ್ಷ, ಗುಲ್ಬರ್ಗ 97 ಲಕ್ಷ, ಹುಬ್ಬಳ್ಳಿಯಲ್ಲಿ 66 ಲಕ್ಷವಾಗಿವೆ. ಇತ್ತೀಚಿನ ವರ್ಷಗಳಲ್ಲಿ ಐ ಪಿ ಸೆಟ್ಟುಗಳಿಗೆ ಖರ್ಚಾಗಿರತಕ್ಕಂತದ್ದು ಕೆಲವೇ ಕೆಲವು ಡಿವಿಜನ್ನುಗಳಿಗೆ. ಮುಖ್ಯಮಂತ್ರಿಯವರ ಫೇವರಿಟ್ ಆದ ಕೆಲವು ಜಿಲ್ಲೆಗಳಿಗೆ, ಕೆಲವು ಜನರಿಗೋಸ್ಕರ ಯು ವಾಂಟ್ ಟು ಪೀನಲೈಸ್ ದಿ ಓರ್ ಸ್ಟೇಟ್. ಇದರಿಂದಾಗುವ ಪರಿಣಾಮಕ್ಕೆ ನೀವೇ ಹೊಣೆ. ನಾನು ಒಂದು ಸೂಚನೆಯನ್ನು ಇಲ್ಲಿ ಕೊಡುತ್ತೇನೆ. ನಿಮಗೆ ಏನಾದರೂ ಸೀಲಿಂಗ್ ಲಿಮಿಟ್ ವರ್ಕ್ ಔಟ್ ಆಗುವುದಿಲ್ಲ ಎಂದಿದ್ದರೆ ಮಂಡಲಿಯವರಿಗೆ ಅಧಿಕಾರ ಕೊಡಿ. ಜಿಲ್ಲಾವಾರು ಮಾತ್ರ ವಸೂಲು ಮಾಡಿ. ಹಾಸನ ಜಿಲ್ಲೆಗೆ ಬೇರೆ ಫಿಕ್ಸ್ ಮಾಡಿ, ಗುಲ್ಬರ್ಗಕ್ಕೆ ಬೇರೆ ಮಾಡಿ. ಎಲ್ಲಾ ಕಡೆಯೂ ಒಂದೇ ತರನಾಗಿ

(ಶ್ರೀ ಎಚ್. ಎನ್. ನಂಜೇಗೌಡ)

ಮಾಡಬೇಡಿ. ಒಂದು ಕಡೆ ಜಾಸ್ತಿ ಖರ್ಚು ಮಾಡಿ ಇನ್ನೊಂದು ಕಡೆ ಅದನ್ನು ವಸೂಲು ಮಾಡುವುದಕ್ಕೆ ಹೊರಟರೆ ಹೇಗೆ ?

(MR. DEPUTY SPEAKER in the Chair)

ಇನ್ನು 10 ಪೈಸೆ ವರೆ ಇಟ್ಟಿರತಕ್ಕದ್ದು ಒಂದು ಮಹಾ ಮೋಸವೆಂದು ಹೇಳುತ್ತೇನೆ. ಇವತ್ತು ಇರತಕ್ಕಂತಹ ಪಂಪ್‌ಸೆಟ್ಟುಗಳು ಒಟ್ಟು ಒಂದು ಲಕ್ಷ ಎಂದು ಇಟ್ಟುಕೊಳ್ಳೋಣ. ಇದರಲ್ಲಿ ಪೆರಿನಿಯಲ್ ಸಪ್ಲೈ ಮಾಡುವಂತಹದ್ದು 36 ಸಾವಿರ ಇರಬಹುದು. ಇವರಿಗೆ 48 ರೂಪಾಯಿ ಮಿನಿಮಂ ಮಾಡಿದರೂ ಕೂಡ ವರ್ಕ್ ಔಟ್ ಆಗುತ್ತದೆ, ಏಕೆಂದರೆ, ಹರಿಯುವ ನೀರು ಇರುತ್ತದೆ. ಆದರೆ ಉಳಿದ ಭಾಗಗಳಲ್ಲಿ ಹಾಗಲ್ಲ. ಉಳಿದ 70 ಸಾವಿರ ಪಂಪ್‌ಸೆಟ್ಟುಗಳಿಗೆ 6 ತಿಂಗಳು ನೀರು ಇದ್ದರೆ, 6 ತಿಂಗಳು ನೀರು ಇರುವುದಿಲ್ಲ. ಆದರಲ್ಲೂ ದಿನಕ್ಕೆ ಕೆಲವು ಸಮಯ ಒಂದು ಗಂಟೆಗಿಂತ ಹೆಚ್ಚು ಓಡಿಸುವುದಕ್ಕಾಗುವುದಿಲ್ಲ. ಏಕೆಂದರೆ ನೀರೇ ಇಲ್ಲ. ಇವತ್ತು ನೀವು ಇಟ್ಟಂತ ರೇಟು ಸರಿಯಾದುದಲ್ಲ. ಹಳೆಯ ರೇಟ್ ಪ್ರಕಾರ ಯೂನಿಟ್‌ಗೆ 12 ಪೈಸೆ ಬೀಳುತ್ತದೆ. ನ್ಯೂ ರೂಲ್ಸ್ ಪ್ರಕಾರ ಒಂದು ಯೂನಿಟ್‌ಗೆ 24 ಪೈಸೆ ಬರುತ್ತದೆ. ನೀವು ಪೆರೇನಿಯಲ್ ಸಪ್ಲೈಸ್‌ಗೆ 10 ಪೈಸೆ ಇಡಿ.

ಇನ್ನು ಕೆಲವು ಪ್ರೊಜೆಕ್ಟುಗಳನ್ನು ನೀವು ಇಟ್ಟುಕೊಂಡಿದ್ದೀರಿ. ಯಾವುದು ರೆಮ್ಯುನರೇಟಿವ್ ಇದೆಯೋ ಅದನ್ನು ನೀವು ಇಟ್ಟುಕೊಂಡಿದ್ದೀರಿ, ನೀವು ಶರಾವತಿಯಲ್ಲಿ ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟು ಎಂದು ಕೇಳಿದರೆ ಹೇಳುವುದಿಲ್ಲ. ಶರಾವತಿಯಲ್ಲಿ 0·98 ಪೈಸೆ. ಡ್ಯುಟ್ ಈಸ್ ದಿ ಕರೆಕ್ಟ್ ಅಸೆಸ್‌ಮೆಂಟ್ ಆಫ್ ದಿ ಕಾಸ್ಟ್ ಆಫ್ ಪ್ರೊಡಕ್ಷನ್. ಮುನಿರಾಬಾದಿನಲ್ಲಿ 5. 28 ಪೈಸೆ. ಇದು ಬಾರಿ ಅನ್‌ರೆಮ್ಯುನರೇಟಿವ್.

ಎಚ್. ಇ. ಸಿ. ಪಿ ಯನ್ನು ಎಂ.ಎಸ್.ಇ.ಬಿ. ಗೆ ಕೊಟ್ಟಿದ್ದಾರೆ. ಒಂದು ಯೂನಿಟ್ಟಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ 5.28 ಪೈಸಾ ಬೀಳುತ್ತದೆ. ಅನ್ ರೆಮ್ಯುನರೇಟಿವ್ ಆದ ಮುನಿರಾಬಾದಿನ ಪವರ್ ಪ್ರಾಜೆಕ್ಟ್ ಅನ್ನು ಎಂ.ಎಸ್.ಇ.ಬಿ. ಗೆ ಕೊಟ್ಟಿದ್ದಾರೆ. ಒಂದು ಯೂನಿಟ್ಟಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ ·98 ಪೈಸಾ ಬೀಳತಕ್ಕಂಥ ಶರಾವತಿಯನ್ನು ಸರ್ಕಾರದವರೇ ಇಟ್ಟುಕೊಂಡಿದ್ದಾರೆ. ಶರಾವತಿಯಲ್ಲಿ ಉತ್ಪತ್ತಿಯಾಗತಕ್ಕಂಥ ವಿದ್ಯುಚ್ಛಕ್ತಿಯನ್ನು ಸರ್ಕಾರದವರು ಬೋರ್ಡಿಗೆ ಒಂದು ಯೂನಿಟ್ಟಿಗೆ 4·3 ಪೈಸೆಯಂತೆ ಕೊಡುತ್ತಾರೆ. ಈ ವಿದ್ಯುಚ್ಛಕ್ತಿಯ ಡಿಸ್ಟ್ರಿಬ್ಯೂಷನ್ ಮತ್ತು ಮೇಂಟೆನನ್ಸ್‌ಗೆ ಸಂಬಂಧಪಟ್ಟಹಾಗೆ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಬರತಕ್ಕಂಥ ಸಬ್ಸಿಡಿ ಎರಡು ಕೋಟಿ ರೂಪಾಯಿಗಳನ್ನು ಗುಲ್ಬರ್ಗ, ಹುಬ್ಬಳ್ಳಿ ಮತ್ತು ಬೆಳಗಾಂ ಡಿವಿಜನ್ನಿಗೆ ನೀವು ಡೈವರ್ಟ್ ಮಾಡುತ್ತೀರಿ. ಈ ರೀತಿ ಮಾಡಿದರೆ ಎಂ. ಎಸ್. ಇ. ಬಿ. ಯಾವರೀತಿ ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಸರ್ಕಾರದವರನ್ನು ಪ್ರಶ್ನೆ ಮಾಡುತ್ತೇನೆ.

5.00 P. M.

ಇದರ ಜೊತೆಗೆ ಒಂದು ಅಗ್ರಿಮೆಂಟ್ ಮಾಡಿ ಸೇರಿಸಿದ್ದಾರೆ. ಅದು ಏನೆಂದರೆ ವರ್ಲ್ಡ್ ಬ್ಯಾಂಕಿನ ಅಗ್ರಿಮೆಂಟ್ ಪ್ರಕಾರ 11 ಪರ್ಸೆಂಟ್ ರೆವಿನ್ಯೂ ರಿಟರ್ನ್ ಬರಬೇಕೆಂದು ಹೇಳಿದ್ದಾರೆ. 11 ಪರ್ಸೆಂಟ್ ರೆವಿನ್ಯೂ ರಿಟರ್ನ್ ಬರಬೇಕಾದರೆ ಯಾವ ಮಾಯಮಂತ್ರ ಮಾಡಬೇಕೋ ನನಗೆ ಗೊತ್ತಿಲ್ಲ. ಈ ರೀತಿಯಾದ ಸಹಾಯ ಸೌಲಭ್ಯವನ್ನು ಸರ್ಕಾರದವರು ಎಂ.ಎಸ್.ಇ.ಬಿ.ಗೆ ಕೊಟ್ಟಿದ್ದಾರೆ. ಆಕ್ಟ್ ಪ್ರಕಾರ 30 ಕೋಟಿ ರೂಪಾಯಿಗಳಿಗಿಂತ ಮೇಲ್ಪಟ್ಟು ಎಂ.ಎಸ್.ಇ.ಬಿ. ಯವರು ಸಾಲ ಮಾಡುವುದಕ್ಕೆ ಅವಕಾಶ ಇಲ್ಲ. ಸರ್ಕಾರಕ್ಕೆ ಮರುಪಾವತಿ ಮಾಡಬೇಕಾದ ಸಾಲವನ್ನು ಯಾವರೀತಿ ಮಾಡುತ್ತಾರೆ ಎಂದರೆ ಸಾಲ ತಂದದ್ದನ್ನು ಮರುಪಾವತಿ ಮಾಡಿದಂತೆ ತೋರಿಸಿ, ಬುಕ್ ಅಡ್ಜಸ್ಟ್‌ಮೆಂಟ್ ಮಾಡಿ, ಅದನ್ನು ಪುನಃ ಸಾಲ ಎಂದು ಟ್ರೀಟ್ ಮಾಡುತ್ತಾರೆ. ಈ ರೀತಿಯಿಂದ ಎಲೆಕ್ಟ್ರಿಸಿಟಿ ಬೋರ್ಡಿಗೆ 39 ಕೋಟಿ ರೂಪಾಯಿಗಳ ಸಾಲವಾಗಿದೆ. ಆದ್ದರಿಂದ ಇದನ್ನೆಲ್ಲಾ ಸರಿದೂಗಿಸಬೇಕಾದರೆ, ಸರಿಪಡಿಸಬೇಕಾದರೆ ನಾನೊಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಶರಾವತಿಯಿಂದ ಹಿಡಿದು ಪ್ರೊಡಕ್ಷನ್ ಮತ್ತು ಇನ್‌ವೆಸ್ಟಿಗೇಷನ್ನಿಗೆ ಸಂಬಂಧಪಟ್ಟ ಎಚ್. ಇ. ಸಿ. ಪಿ. ಇಲಾಖೆಯನ್ನು ಅಬಾಲಿಷ್ ಮಾಡಿ ಆ ಕೆಲಸವನ್ನು ಬೋರ್ಡಿಗೆ ವಹಿಸಿ. ನಾನ್ ರೆಮ್ಯುನರೇಟಿವ್ ಆದ ಮುನಿರಾಬಾದ್ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟನ್ನು ಎಲೆಕ್ಟ್ರಿಸಿಟಿ

ಬೋರ್ಡಿಗೆ ಏತಕ್ಕೆ ವಹಿಸಬೇಕು. ಅದನ್ನು ಸರ್ಕಾರದವರು ಇಟ್ಟುಕೊಂಡು ನಡೆಸಲಿ. ಏತಕ್ಕೆಂದರೆ ಅದರಲ್ಲಿ ಕಾಸ್ಟ್ ಆಫ್ ಪ್ರೊಡಕ್ಷನ್ ಒಂದು ಯೂನಿಟ್ಟಿಗೆ 5·28 ಪೈಸಾ ಬೀಳುತ್ತದೆ. ಬೋರ್ಡಿನವರು ಶರಾವತಿಯ ವಿದ್ಯುಚ್ಛಕ್ತಿಯನ್ನು 4·8 ಪೈಸಾದಂತೆ ಕೊಂಡುಕೊಳ್ಳುವುದರಿಂದ ಬೋರ್ಡಿನವರಿಗೆ ರೇಟು ಜಾಸ್ತಿಯಾಗುತ್ತದೆ. ಈಗ ಕೈಗಾರಿಕೆಗಳಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದಾರೆ. ಅದೇರೀತಿ ವ್ಯವಸಾಯವನ್ನೂ ಒಂದು ಕೈಗಾರಿಕೆ ಎಂದು ಏತಕ್ಕೆ ಭಾವನೆ ಮಾಡುವುದಿಲ್ಲ? ಮುಖ್ಯ ಮಂತ್ರಿಗಳು ಕೆಲವು ಜಿಲ್ಲೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಹೆಚ್ಚು ಹಣವನ್ನು ಕೊಟ್ಟಿದ್ದಾರೆ. ಇದು ಸರಿಯಲ್ಲ. ಇನ್ನುಮುಂದೆ ಆ ರೀತಿ ತಮಗೆ ಬೇಕಾದ ಜಿಲ್ಲೆಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡುವಂಥಾದ್ದನ್ನು ಕೈ ಬಿಡಬೇಕು ಎಂದು ನಾನು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ರಿಪೋರ್ಟಿನಲ್ಲಿ ಈ ಎಲೆಕ್ಟ್ರಿಸಿಟಿ ಬೋರ್ಡಿಗೆ ಸಂಬಂಧಪಟ್ಟ ಹಾಗೆ, ಸುಮಾರು 18 ಲಕ್ಷ 64 ಸಾವಿರ ರೂಪಾಯಿಗಳು ದುರುಪಯೋಗವಾಗಿರುವುದನ್ನು ಬರೆದಿದ್ದಾರೆ. ಒಂದು ಕಂಟ್ರಾಕ್ಟ್ ಕೊಟ್ಟ ವ್ಯವಹಾರದಲ್ಲಿ 10 ಲಕ್ಷ 90 ಸಾವಿರ ರೂಪಾಯಿಗಳು ದುರುಪಯೋಗವಾಗಿರುವ ಬಗ್ಗೆ ಗಂಭೀರವಾದ ಅಪಾದನೆಗಳನ್ನು ವ್ಯಕ್ತಪಡಿಸಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಯಲ್ಲಿ ನಮೂದಿಸಿದ್ದಾರೆ. ಅದು ಈ ರೀತಿ ಇದೆ. The Audit paragraph cites 6 cases of extra expenditure totalling Rs. 10.90 lakhs incurred by the Board on the purchase of equipments like diesel power generating sets, transformers, cables, insulators, etc. In most of the cases, the extra expenditure had to be incurred because of the delay in finalisation of tender quotations and failure to place orders within the period of validitly of offers made by the firms. The delay helped the firms either to increase their rates or to back out of their offers leaving no choice to the Board but to effect the purchases at higher rates ಎಂದು ಹೇಳಿದ್ದಾರೆ. ಇದರಲ್ಲಿ ಯಾರು ಯಾರೋ ಸೇರಿಕೊಂಡು ವ್ಯವಹಾರಗಳನ್ನು ಮಾಡಿದ್ದಾರೆ. ಕಂಟ್ರಾಕ್ಟರ ಜೊತೆಯಲ್ಲಿ ಸೇರಿಕೊಂಡು ಈ ರೀತಿ ವ್ಯವಹಾರ ಮಾಡಿದ್ದಾರೆ. ಈ ವಿಚಾರದಲ್ಲಿ ಅನುಮಾನಪಡುವುದಕ್ಕೆ ಅವಕಾಶ ಇದೆ. ಈ ಬಗ್ಗೆ ವಿಚಾರಣೆಯಾಗಬೇಕು ಎಂದು ನಾನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನೊಂದು ಮಾತು ಹೇಳುತ್ತೇನೆ. ಇವೊತ್ತು ಈ ರೀತಿ ಇವರು ವಿದ್ಯುಚ್ಛಕ್ತಿಯನ್ನು ಉಪಯೋಗಿಸತಕ್ಕಂಥ ಜನಗಳಮೇಲೆ ಹೆಚ್ಚಿನ ದರವನ್ನು ವಿಧಿಸತಕ್ಕದ್ದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಕನ್‌ಸ್ಯೂಮರ್ಸ್ ಮೇಲೆ ಹೆಚ್ಚಿನ ಹೊರೆಯನ್ನು ಹಾಕತಕ್ಕದ್ದು ನೈತಿಕದೃಷ್ಟಿಯಿಂದ ನ್ಯಾಯವಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಸರ್ಕಾರದವರು ಮತ್ತು ಎಲೆಕ್ಟ್ರಿಸಿಟಿ ಬೋರ್ಡಿನವರು 20 ಸಾವಿರ ಪಂಪುಸೆಟ್ಟುಗಳಿಗೆ ಸರ್ವೀಸ್ ಕೊಡಬೇಕೆಂದು ಏನು ಪ್ರೋಗ್ರಾಂ ಹಾಕಿಕೊಂಡಿದ್ದಾರೆಯೋ ಇದನ್ನು ಸರಿಯಾಗಿ ಕಾರ್ಯಗತ ಮಾಡುತ್ತಾರೆಯೋ ಹೇಗೆ ಎಂಬುದರ ಬಗ್ಗೆ ನನಗೆ ಉತ್ತರ ಕೊಡಬೇಕು. ಕೇಂದ್ರ ಸರ್ಕಾರದಿಂದ ಎಲೆಕ್ಟ್ರಿಸಿಟಿ ಡಿಸ್ಟ್ರಿಬ್ಯೂಷನ್ ಮತ್ತು ಮೇಂಟೆನೆನ್ಸ್‌ಗೆ ಸಂಬಂಧಪಟ್ಟಹಾಗೆ ನಮ್ಮ ರಾಜ್ಯ ಸರ್ಕಾರಕ್ಕೆ ಏನು ಸಬ್ಸಿಡಿ ಬರುತ್ತದೆಯೋ ಅದನ್ನು ಬೋರ್ಡಿಗೆ ಕೊಡದೇ ಗುಲ್ಬರ್ಗ, ಧಾರವಾಡ ಮತ್ತು ಬೆಳಗಾಂ ಈ ಮೂರು ಜಿಲ್ಲೆಗೆ ಮಾತ್ರ ಸರ್ಕಾರದವರು ನೇರವಾಗಿ ಖರ್ಚು ಮಾಡುತ್ತಿದ್ದಾರೆ. ಇದು ಸರಿಯೇ?

ಶ್ರೀ ವಿ. ಎನ್. ಪಾಟೀಲ್.—ಒಂದೆರಡು ಜಿಲ್ಲೆಗಳು ಮಾತ್ರವಲ್ಲ, ಅನೇಕ ಜಿಲ್ಲೆಗಳಿಗೆ ತಾರತಮ್ಯ ಮಾಡಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಹೌದು, ತಾವು ಕಮ್ಯೂನಿಸ್ಟ್ ಪಾರ್ಟಿಯವರಾದ್ದರಿಂದ ತಮ್ಮ ಜಿಲ್ಲೆಗೂ ಕೂಡ ತಾರತಮ್ಯ ಮಾಡಿರಬಹುದು. ಆದ್ದರಿಂದ ವಿದ್ಯುಚ್ಛಕ್ತಿ ಬೋರ್ಡಿನ ಅಧ್ಯಕ್ಷರು ಮುಚ್ಚುಮರೆ ಇಲ್ಲದಂಥ ಮತ್ತೊಂದು ಪತ್ರಿಕಾ ಪ್ರಕಟಣೆಯನ್ನು ಕೊಡಬೇಕು. ಮತ್ತು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಹೇಳಿಕೆ ಕೊಡಬೇಕು. I request the Electricity Board to rectify the mistakes they have committed. I do not care if the Government were to abolish the Board. ಅವರ ಕೈಯಲ್ಲಿ ನಡೆಸುವುದಕ್ಕಾಗದಿದ್ದರೆ ಸರ್ಕಾರಕ್ಕೆ ವಹಿಸಿಬಿಡಲಿ. ಮುಖ್ಯವಾಗಿ ನಾನು ಕೇಳಿಕೊಳ್ಳುವುದು ಏನೆಂದರೆ ಈಗ ಇರತಕ್ಕಂಥ ನಿಜ ಸಂಗತಿಯನ್ನು ಬೋರ್ಡಿನ ಅಧ್ಯಕ್ಷರು ಸಾರ್ವಜನಿಕರ ಗಮನಕ್ಕೆ ತಂದು

(ಶ್ರೀ ಎಚ್. ಎನ್. ನಂಜೇಗೌಡ)

ಬೋರ್ಡಿನವರ ಕಷ್ಟಸುಖಗಳನ್ನು ತಿಳಿಸಬೇಕು. ಇಷ್ಟು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†Sri R. G. WALI (Hubli).—Mr. Speaker, while considering the Annual Financial Statement of the Mysore State Electricity Board, I wish to place the following observations before the House.

Our State which is supposed to be producing large quantity of electricity and which has taken up bigger Projects, has to see that electricity supplied to the consumer, whether he is an agriculturist or industrialist or common man, is supplied at a reasonable rate, if possible cheaper than in other parts of the country. We know our neighbouring State, in spite of many difficulties they are facing, in spite of non-availability of natural resources which we have got in our State, in spite of many inconveniences, has been able to provide larger number of electric pumpsets, electrify more number of villages in that State. Their progress in this direction is not comparable to our State. We feel that in spite of our resources we have not been able to fullfil the desires of the people. It is an agreed fact that rural electrification and irrigation pumsets should be given top priority in order to increase agricultural production and to see that our country more particularly our State becomes self-sufficient in food. We have to see that pumpsets are provided to the ryots as quickly as possible and at as cheap a rate as possible. Similarly every village in the State should be electrified. There cannot be any dispute and nobody can say that a particular village should not be electrified and a particular villlage should be electrified. Everyone has the right to demand that villages should be electrified. Every village must have power and everyone has the right to demand power. Rural electrification must be taken up and power supplied to as many irrigation pumpsets as possible. This must be done on a top priority basis.

In our State there are a number of villages not developed. They do not have electricity and it is, therefore, necessary to see that they are electrified. When villages around Bangalore can have electricity, why should not the people in other parts of the State have the same benefits. We must struggle hard to see that all people have electricity. In order to achieve this, the Government must give priority and see that finances are made available to all these projects. Today the mind of everyone of the agriculturists in the village is much agitated, because there is a proposal, and already a decision has been taken, to increase the minimum charges and also a proposal to increase the rates. If that is the case, I want to bring to the notice of the Mysore State Electricity Board and the Government that it is not proper to increase the minimum charges because the agriculturists will be hit hard to pay that money. There are a number of reasons to show why he feels very hard to pay that money. The first thing is, they do not have water in the well and when they do not get water throughout the year

why should they pay throughout the year? During rainy seasons they may not utilise the water. As it is an agreed policy that agriculture should develop and irrigation facilities should be provided, it is necessary that power is supplied at cheap rates and the for that the Electricity Board should fix lowest rates. While ruggesting this, I want to request the Government to take up these projects as special projects or subsidised projects. Unless they are taken as subsidised projects, it may not be possible to make much headway. The Electricity Board is a statutory body appointed by the Government and they have to work on commercial lines. But, I say it is a public utility concern and it is necessary that it should work on no profit no loss basis. Firstly when such projects are entrusted to the Board it is necessary that the Government should subsidise this extra expenditure. I am sure the Central Government also is giving some subsidy for developing these programmes, and that fund also can be used to subsidise the loss that may be incurred by the Board. I am sure the Board cannot incur loss in the case of other consumers like industries, household connections or any other entertainments, cinema houses, etc. They have fixed the rates considering all aspects and the Tariff Committee is meeting very often and many times they are revising the rates taking into consideration various factors to see that the Board works under no loss. When such is the case, and when a lot of profit is made I am sure some money out of it can be utilised for subsidising agricultural pumpsets. Until and unless Government takes a serious view of rural electrification programme for supplying electrical energy for irrigation pumpsets and treats them as subsidised projects, it may not be possible to develop the State. The common man in the villages has the right to agitate for this and we have to see that they prosper well. If the villages prosper, everyone will prosper, the industry will also prosper.

Secondly, while considering the financial report of the Board I have to point out some of the defects. There are leakages and they have to be stopped. Unless it is done, it is not possible to get full utility. Whatever energy that is produced must be utilised fully. There are a number of villages where they say that rural electrification programme has been taken up, but unfortunately the fuse is not fixed for months together. This must not be the case. It must be run on commercial basis. They must see that electricity is supplied and there is return as quickly as possible. Even in the case of household units, they are not giving current soon and the people have to wait for months together. They must see that within 24 hours electric energy is supplied. It is much more difficult in the case of irrigation pump sets. The ryot goes to the bank, and gets the pumpset on loan, he has to pay interest every day. There are instances where the ryot has waited for months together, only because the fuse is not given. Why should these fuses be withheld by the authority concerned?

SRI M. MALLIKARJUNASWAMY (Malavalli).—That is due to the lack of co-ordination between the hydro-electric project and the M.S.E.B.

Sri R. G. WALI.—I do not think there is any quarrel between these two departments, because they are departments of the Government. It is our duty as people's representatives to see that proper supplies are made without any difficulty any that service is given without the least resistance. That should be the motto in this public utility concern. I suggest that the M.S.E.B. should take immediate action and see that electric energy is supplied as quickly as possible.

There are a number of complaints that have been brought to your kind notice, Sir, during the speeches. I suggest that these complaints have to be attended to and for that purpose I suggest that at each divisional headquarter there should be committees where they can get the advice of the public as to whether there is any defect, whether some people are harassing the consumers, what difficulties are there and so on and so forth. They can go into those matters, and see that the difficulties of the public are removed. This is one of the essential things which I think the M.S.E.B. should consider.

I have one suggestion as regards leakage. The M.S.E.B. is distributing energies to various cities. These are bulk consumers. I want to know whether there is record of the consumption by each village, each town or each city. They have to maintain the record of electricity consumption by each city, town or villages by fixing meters. When we supply electricity to the private distributors, we have got a metering system. We know how many kilo watts are consumed by private agency. So, I suggest that the M.S.E B. should have metering system for each village, each town and each city and see that the total consumption of all these villages, cities and towns is equal to the electricity supplied by the main source. This is one of the ways of removing leakage.

There are a number of complaints regarding misuse of power by various people and that also gives scope for the lower staff to play some mischief. Without proper metering electricity is consumed or they do not want to take meter reading. All these things will lead to mischief that should be avoided.

Finally, I would like to point out that there is lot of mischief or dishonesty in respect of stores and materials. Many a time stocks are not maintained properly and there is leakage. It is necessary that this leakage should be stopped.

So, top priority must be given to agriculture and every village must be electrified. Every ryot must get electricity for irrigation purpose to produce more. The M.S.E.B. should supply power at concessional rate to the ryots. These two projects should be subsidised and the difficulties I have pointed out must be removed as quickly as possible.

With these few words, I request that this Annual Report may be accepted.

† Sri P. B. NANDIHALI (Uchagaon).—Sir, I wish to offer my remarks on the Annual Financial Statement of the Electricity Board for

the year 1969-70. Hon. Members on both sides have criticised the Chairman and officials of the Electricity Board bitterly.

In the first instance, I want to ask the Hon. Minister in charge whether Government have got any policy for the uplift of the common people and for the progress of the farmers, whether they are practising socialism, and whether they have got some special consideration for the poor people who have been in the dark valley of poverty for centuries together. If their problem is solved, this criticism will stop immediately from both sides. I am very glad to hear the criticism from the Members of the Ruling Party. Of course, this is welcome in the age of conscience and the age of revolt. They have shared much of the views of the Members on this side and that is a very good thing. If the problem is solved at the level of policy making, there will be no scope for this criticism. Either the Government should have full control over the board or if they have no control, they should abolish it within twenty-four hours and take over direct control. If this problem is not solved, the difficulties will go on increasing day by day. I oppose the policy of the Board and the order which they have issued for enhancing the power tariff; it is a great injustice.

We are complaining about the rate fixed in 1966. We were saying that that rate itself was high. If one sees what is actually happening, one can understand that pumpsets are not used for all the 12 months of the year. In the rainy season the farmers do not use the pumpsets for 5 to 6 months and in summer becau e they have no money to deepen their wells and because they have no water in their wells, they cannot use the pumpsets for one or two months and yet they are forced to pay the minimum charges for all the 12 months. The Board did not consider this difficulty of the farmers, but, on the contrary, they increased the minimum rate from Rs. 2 per Hp. to Rs. 4 per Hp. This is a great injustice done to the farmers and it should be set right immediately. Otherwise we are listening to threats of agitation throughout the State. I request the Government and the Board to take immediate action in this matter to stop the recovery of the enhanced rate and to collect only at the old rate.

5-30 P.M.

It is said that the Board has enhanced the rate because it is incurring great loss and so the Government has sanctioned this increase in the rate. I would say that the Government must go into the details and find out why the Board is incurring losses and also find out whether throwing this burden on the poor peasants is the only alternative to avoid this loss. This increase must be immediately withdrawn and the burden on the poor farmers must be lessened.

In this connection I wish to state here some of my bitter experiences. During the last session the Minister called a meeting of districtwise members and we felt very happy in the first instance at the organising capacity of the Minister. At this

(SRI P. B. NANDIHALI)

meeting we gave our proposals to the Minister and the Minister assured us to give top priority to our proposals, but the unfortunate experience of myself and my colleagues from my district is that out of the proposals submitted by us, not even a single village has been selected for electrification this year. On the assurance of the Minister we gave in turn our assurance to the villagers that the Minister has given us a promise to electrify their villages as per our proposals and they were all expecting that their villages would be electrified. Now it is very difficult for us to convince the people. This shows that the Minister has no control over the Board or the Board is going on its own way and not caring for the Minister. We have given so many representations and proposals. The Board and the Government must consider our proposals very seriously or they should not consult the members and they should go their own way. In that case the people also would go their own way and the Government would have to face the consequences. If this is their attitude it would be very difficult for the authorities to sanction the electrification of villages.

Even the villages which are electrified are facing so many difficulties which must be removed forthwith. When the villagers heard the speeches made at the time of the inauguration of electrification of their villages, they sold their oil engines immediately and ran to banks or moneylenders or sold their properties and got money and installed pumpsets in their wells, but unfortunately their experience is that most of them are not getting electricity. Last year the crops so many villages of Belgaum taluka failed only because the Board failed to give them electrifity in time. The village of Belgundi fulfilled all the conditions of the Board and the Government by paying the required amount, but unfortunately they could not get the line in time and so they had to suffer last year. These things should be set right forthwith.

The Board has also miserably failed to give proper service and guidance to the farmers. In fact, in these days of democratic set-up all facilities must go to the doors of the farmers if we want to make our Grow More Food campaign a success. Unfortunately, our experience is quite the contrary and the farmers have to go off and on to the office of the Board. They are ill-treated there and so they come back disappointed. There is no encouragement given to them.

In this connection I wish to suggest that the old procedure of collecting the minimum charge at the end of the year should be restored and the new procedure of collecting the same particularly when the rate has been doubled, should be given up as it is causing great hardship to the farmers. They do not have any cash with them except during harvest time. A farmer is born in debt and he dies in debt and the Government does not do anything to solve his problems. He is not in a position to pay the minimum charges every month. This is one difficulty.

Another difficulty is that the farmer has to go every month to the Office to pay the amount and much of his time is wasted which he can better utilize in his field. So this procedure of collecting the minimum charge every month should be changed forthwith.

As I find that the Hon. Minister is listening to the criticisms and the suggestions made by Hon. Members, I hope he will take some progressive steps and try to remove all the difficulties immediately.

† ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-2).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದಿರುವ ವಿದ್ಯುತ್ ಮಂಡಲಿ ಬಜೆಟ್ಟನ್ನು ಕುರಿತು ಕೆಲವು ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದ ರೈತರಿಗೆ ವಿದ್ಯುತ್ ಬಳಕೆಯಲ್ಲಿ ವಿಶೇಷ ಅನುಕೂಲವಾಗಬೇಕಾಗಿತ್ತು. ಕರ್ಣಾಟಕ ಭಾಗಗಳು ಮೈಸೂರು ರಾಜ್ಯಕ್ಕೆ ಸೇರಿದ ಮೇಲೆ ವಿದ್ಯುತ್ತಿನ ಬಗ್ಗೆ ಬಹಳ ಅನುಕೂಲವಾಗ ಬಹುದೆಂಬ ಭಾವನೆ ಇತ್ತು. ಶರಾವತಿ ಇರುವ ರಾಜ್ಯದಲ್ಲಿ ವಿದ್ಯುತ್ ಬೇಕಾದಷ್ಟಿದೆ ಎಂಬ ಭಾವನೆ ಇತ್ತು. ಗಂಧದ ನಾಡು, ಚಿನ್ನದ ನಾಡು, ವಿದ್ಯುತ್‌ನಾಡು ಮೈಸೂರು ಎಂದು ಕವಿಗಳು ಹಾಡಿದ್ದಾರೆ. ಇಂಥ ರಾಜ್ಯದಲ್ಲಿ ಇಂದು ವಿದ್ಯುತ್ ಬೇಕಾದಷ್ಟು ಸಿಕ್ಕಬೇಕು, ಉಪಯೋಗವಾಗಬೇಕು ಅದರ ಸಹಾಯ ಪಡೆದು ಉತ್ಪತ್ತಿ ಹೆಚ್ಚಬೇಕು ಎಂಬುದು ಸಿದ್ಧಾಂತ. ಆದರೆ ವಿದ್ಯುತ್ತನ್ನು ನಮ್ಮ ರೈತರಿಗೆ ಬಳಸುವುದಕ್ಕೆ ಕೊಡುವುದನ್ನು ಬಿಟ್ಟು ಮದ್ರಾಸು, ಮಹಾರಾಷ್ಟ್ರ ಮತ್ತು ಆಂಧ್ರ ರಾಜ್ಯಗಳಿಗೆ ಕೊಡುವುದಕ್ಕೆ ಯೋಚನೆ ಮಾಡಿದ್ದಾರೆ. ಇದು ಸರಿಯಲ್ಲ. ಲಾಭದ ದೃಷ್ಟಿಯಿಂದ ಹೀಗೆ ಕೊಟ್ಟರೂ ದೇಶದಲ್ಲಿರುವ ಶೇಕಡ 75 ಭಾಗ ರೈತರ ಉದ್ಧಾರಕ್ಕೆ ಹೆಚ್ಚು ಗಮನ ಕೊಡಬೇಕಾದ್ದು ಅತಿ ಮುಖ್ಯವಾದುದು. ಮಹಾತ್ಮ ಗಾಂಧಿಯವರು ಇದನ್ನೇ ಹೇಳಿದ್ದಾರೆಂದು ಗೊತ್ತಿದೆ. ಈ ದೇಶದಲ್ಲಿರುವ ಏಳೂವರೆ ಲಕ್ಷ ಹಳ್ಳಿಗಳಲ್ಲಿರುವವರ ಉದ್ಧಾರವಾಗಬೇಕು ಎಂದು ಅವರು ಹರಿಜನ್ ಎಂಬ ಪತ್ರಿಕೆಯಲ್ಲೂ ಬರೆದು ಭಾಷಣದಲ್ಲೂ ಹೇಳಿದ್ದರು. ಏಳೂವರೆ ಲಕ್ಷ ಹಳ್ಳಿಗಳಲ್ಲಿರುವರ ರೈತರ ಉದ್ಧಾರ, ಏಳಿಗೆ ಆಗದಿದ್ದರೆ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಪ್ರಯೋಜನವಿಲ್ಲ ಎಂದು ಅವರು ಹೇಳಿದ್ದಾರೆ. ಇದನ್ನು ತಿಳಿದು ಇದೇ ಪರಂಪರೆಯಲ್ಲಿ ಬೆಳೆದು ಇರುವ ನಾವು ರೈತರ ಬಗ್ಗೆ ಹೆಚ್ಚು ಗಮನ ಕೊಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ನಾವು ಹೊರ ದೇಶದವರನ್ನು ಆಹಾರಕ್ಕಾಗಿ ಅವಲಂಬಿಸಿದ್ದೇವೆ, ಅಮೆರಿಕ ಮತ್ತಿತರ ದೇಶಗಳಿಂದ ಆಹಾರ ಧಾನ್ಯಗಳು ಬಂದರೆ ಮಾತ್ರ ಜನರನ್ನು ರಕ್ಷಣೆ ಮಾಡಲು ಸಾಧ್ಯ ಎಂಬ ಭಾವನೆಯಿದೆ. ಹೊರ ದೇಶದಿಂದ ಆಹಾರ ತಂದು ಅಭಾವ ನೀಗಬೇಕಾದ ಕಾಲ ಬಂದಿದೆ. ಇದನ್ನು ನೀಗಿಸಿ ಸ್ವಾವಲಂಬಿಯಾಗಬೇಕು ಆಹಾರ ಮತ್ತಿತರ ಪದಾರ್ಥಗಳನ್ನು ಹೆಚ್ಚಾಗಿ ಬೆಳೆಯಬೇಕು, ಎಂದು ಹೇಳುವಾಗ ವಿದ್ಯುತ್ತನ್ನು ಸಾಕಷ್ಟು ಸರಬರಾಯಿ ಮಾಡಬೇಕು. ಅದಿಲ್ಲದಿದ್ದರೆ ಹಾಗೆ ಮಾಡಲು ಸಾಧ್ಯವಿಲ್ಲ. ಇಂದು ರಾಜ್ಯದಲ್ಲಿ ಎಷ್ಟೋ ನದಿಗಳಿದ್ದರೂ ಕೂಡ ಅವುಗಳ ನೀರನ್ನು ಬಳಸಿ, ಇರುವ ವಿದ್ಯುತ್ತನ್ನು ಉಪಯೋಗಮಾಡಿ ಆಹಾರ ಉತ್ಪತ್ತಿಯನ್ನು ಹೆಚ್ಚಿಸಲು ಗಮನ ಕೊಟ್ಟಿಲ್ಲ. 1965ರಲ್ಲಿ ಚೈನಾ ಮತ್ತು ಪಾಕಿಸ್ತಾನಗಳೊಡನೆ ಯುದ್ಧ ಸಂಭವಿಸಿದಾಗ ಆಹಾರದ ಅಭಾವ ಬಂತು. ಸೈನಿಕರಿಗೆ ಆಹಾರ ಆಗ ಒದಗಿಸಬೇಕಾಗಿತ್ತು, ಅತ್ತಕಡೆ ಗೊಂದಲವಾದಾಗ ಇಡೀ ಭಾರತದಲ್ಲೇ ಆಹಾರದ ಆಂದೋಳನ ನಡೆಯಿತು, ಮೈಸೂರಿನಲ್ಲೂ ದೊಡ್ಡ ಆಂದೋಳನ ನಡೆಯಿತು. ಈ ದೇಶದ ಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರು ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರು ಪ್ರತಿ ಹಳ್ಳಿಗೂ ಸಂಚಾರ ಹೋಗಿ ಆಹಾರವನ್ನು ಹೆಚ್ಚಾಗಿ ಬೆಳೆಯಬೇಕು, ಪಂಪುಸೆಟ್ಟು ಹಾಕಬೇಕು, ವಿದ್ಯುತ್ ಕೊಡುತ್ತೇವೆ ಎಂದು ಹೇಳಿದರು. ಅದಕ್ಕೆ ಜನರು ಒಪ್ಪಿಕೊಂಡರು. ಸ್ವಾತಂತ್ರ್ಯ ಬಂದಾಗ ಸ್ವಾವಲಂಬಿಗಳಾಗಬೇಕೆಂಬುದನ್ನು ಮನಗಂಡು ಯುದ್ಧವಾದಾಗ ಪ್ರಚಾರಮಾಡಿದರು. ಆಗ ರೈತರು ಪಂಪುಸೆಟ್ಟುಗಳಿಗೆ ಅರ್ಜಿಕೊಟ್ಟರು. ಆದರೆ ದಕ್ಷಿಣ ಕನ್ನಡ ಜಿಲ್ಲೆ ವಿಚಾರ ಹೇಳುವುದಾದರೆ ಬೇಕಾದಷ್ಟು ನದಿಗಳು ಅಲ್ಲಿವೆ, ಅಲ್ಲಿ 150 ಇಂಚು ಮಳೆ ಬಿದ್ದರೂ ನೆಲದಲ್ಲಿ ಇಂಗಿ ಹೋಗುವುದು, ನದಿಗಳ ನೀರು ಸಮುದ್ರಕ್ಕೆ ಹರಿದುಹೋಗುವುದು. ಅದು ನ್ಯಾಯವಲ್ಲ, ಅದನ್ನು ಬಳಸಬೇಕು, ಬಳಸಿ ಹೆಚ್ಚು ಉತ್ಪತ್ತಿಮಾಡಬೇಕು, ಆಹಾರ ಹೆಚ್ಚು ಬೆಳೆಯಬೇಕು ಎಂದು ತಿಳಿಸಿದರು. ಇಷ್ಟು ನದಿಗಳಿದ್ದರೂ ಪಂಪುಸೆಟ್ಟು ಕೇಳಿದಾಗ ಸಿಕ್ಕುವುದು ಕಠಿಣವಾಗಿತ್ತು. ಪ್ರತಿಯೊಂದು ತಾಲ್ಲೂಕಿನವರು ಹೋಗಿ ಮನವಿಮಾಡಿದರು. ಆದರೆ ಈಗ 2 ರೂಪಾಯಿ ದರವನ್ನು 4 ರೂಪಾಯಿ ಮಾಡಿರುವುದು ಸರಿಯಲ್ಲ, ದರ ಇಳಿಸಬೇಕು ಎಂದು ಎಲ್ಲರೂ ಮನವಿಮಾಡುತ್ತಿದ್ದಾರೆ. ಮೊದಲು ವರ್ಷಕ್ಕೆ ಒಂದು ಸಲ ಕಂತು ಕಟ್ಟುತ್ತಿದ್ದರು, ಈಗ ತಿಂಗಳಿಗೊಂದು ಸಲ ಕಟ್ಟಬೇಕೆಂಬುದು ಸರಿಯಲ್ಲ, ವರ್ಷಕ್ಕೊಂದು ಸಲ ಕಟ್ಟಲು ಅವಕಾಶ ನೀಡಬೇಕು. ರೈತರಿಂದ ಅರಿಸಿ

(ಶ್ರೀ ಬಿ. ಎಂ. ಇದಿನಬ್ಬ)

ಬಂದಿರುವ ನಾವು ರೈತರ ಬಳಿಗೆ ಹೋಗಬೇಕಾಗುವುದು, ಹೋದಾಗ ಸುತ್ತಲೂ ರೈತರು ಬಂದು ಸುತ್ತಿಕೊಂಡು ಹೆಚ್ಚು ಮಾಡಿರುವ ದರವನ್ನು ಕಡಿಮೆ ಮಾಡಿಸಿಕೊಡುತ್ತೀರಾ ಎಂದು ಕೇಳುವರು. ಅದಕ್ಕೆ ಸದಸ್ಯರುಗಳಾದ ನಾವು ಉತ್ತರ ಕೊಡಬೇಕು. ಆದುದರಿಂದ ವಿದ್ಯುಚ್ಛಕ್ತಿ ಮಂಡಲಿಯವರೂ ಮತ್ತು ಸರಕಾರದವರೂ ಇದಕ್ಕೆ ಗಮನಕೊಡಬೇಕು. ರೈತರಿಂದ ನಾವು ಆರಿಸಿ ಬಂದಿರುವಾಗ ಅವರು ಸರಕಾರದ ಬೆನ್ನುಮೂಳೆ ಎಂದು ಹೇಳುವಾಗ ಅವರಿಗೆ ತೊಂದರೆ ಮಾಡಬಾರದು, ಬೇಕಾದ ಸವಲತ್ತನ್ನು 1965ರಲ್ಲಿ ಹೇಳಿರುವಂತೆ ಕೊಡಬೇಕು, ವಿದ್ಯುತ್ತನ್ನು ಬೇಕಾದಷ್ಟು ಒದಗಿಸುತ್ತೇವೆ, ಸಾಲ ಕೊಡುತ್ತೇವೆ ಎಂದು ಹೇಳಿರುವಂತೆ ಕೊಡಬೇಕು. ದರ ಹೆಚ್ಚುವುದೆಂದು ತಿಳಿಯದ ಇಂದು ಪಂಪುಸೆಟ್ಟುಗಳಿಗೆ ಅರ್ಜಿ ಹಾಕಿರುವವರೇನು ಮಾಡಬೇಕು? ಇಂದು ಆಹಾರ ಹೆಚ್ಚು ಬೆಳೆಯಬೇಕು ಎಂದು ಹೇಳುವಾಗ, ಅದರಂತೆ ಅವರು ಆಹಾರಪದಾರ್ಥಗಳು ಅಡಕೆ, ಕಬ್ಬು, ಹೊಗೆಸೊಪ್ಪು ಮುಂತಾದುವನ್ನು ಹೇರಳವಾಗಿ ಬೆಳೆಯುತ್ತಿರುವಾಗ ದರ ಹೆಚ್ಚಿಸಿರುವುದು ರೈತರಿಗೆ ಕೈ ಮುರಿದಂತಾಗಿ ಬಹಳ ಅನ್ಯಾಯವಾಗಿದೆ. ಇದರಲ್ಲಿ ಸಂಶಯವಿಲ್ಲ. ಶೇಕಡ 70 ಭಾಗವಿರುವ ರೈತರ ಹಿತ ಸಾಧಿಸುತ್ತೇವೆಂದು ಹೇಳುವಾಗ ಅವರನ್ನು ಅಧೋಗತಿಗೆ ಇಳಿಸಲು ದರ ಹೆಚ್ಚು ಮಾಡಿರುವುದು ನಿಜವಾಗಿಯೂ ಶೋಚನೀಯವಾದ ವಿಚಾರ. ಆದುದರಿಂದ ಸರಕಾರ ಇದಕ್ಕೆ ಮೊದಲು ಗಮನಕೊಡಬೇಕು. ವಿದ್ಯುತ್ ಮಂಡಲಿಗೆ ನಷ್ಟವಾಗಿದೆ, ಏನು ಮಾಡುವುದು ಎಂದು ಹೇಳುವುದುಂಟು. ಒಂದು ವೇಳೆ ಹಾಗಿದ್ದರೆ ಬೇರೆ ರೀತಿಯಲ್ಲಿ ತುಂಬಿಕೊಳ್ಳಬೇಕು, ರೈತರಿಗೆ ತೊಂದರೆ ಮಾಡಬಾರದು. ರೈತರು ಗೊಂದಲ ಮಾಡುವುದಿಲ್ಲ, ಚಳುವಳಿ ಮಾಡುವುದಿಲ್ಲ. ಹಾಗಿರುವವರು ರೇಗಿದರೆ ಯಾವ ಪರಿಸ್ಥಿತಿ ಉಂಟಾಗಬಹುದೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಮಂಡಲಿಗೆ ನಷ್ಟವಾದರೆ ಮಿತವ್ಯಯ ಮಾಡಬೇಕು. ಸಿಬ್ಬಂದಿ ಕಡಿಮೆ ಮಾಡಬೇಕು, ಸಾಮಗ್ರಿಗಳು ಹಾಳಾಗುವುದನ್ನು ತಡೆಗಟ್ಟಬೇಕು, ಅನ್ಯಾಯ ಮಾಡುವವರನ್ನು ಬಂದೋಬಸ್ತು ಮಾಡಬೇಕು, ತನಿಖೆ ಮಾಡಿ ತಪ್ಪು ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ರೀತಿ ಮಾಡಿ ಮಂಡಲಿಯು ನಷ್ಟವನ್ನು ತುಂಬಿಕೊಳ್ಳಬೇಕು, ನಷ್ಟವಾಗಿದೆ ಎಂದು ಹೀಗೆ ದರ ಏರಿಸಬಾರದು ಎಂದು ಸರಕಾರದಲ್ಲಿ ಮನವಿ ಮಾಡುತ್ತೇನೆ. ಸರಕಾರ ಆಲೋಚನೆಮಾಡಬೇಕು, ಸಿಬ್ಬಂದಿ ಬೇಕಾದಷ್ಟಿದೆ, ಅವಶ್ಯಕವಿರುವಷ್ಟು ಮಾತ್ರ ಇರುವಂತೆ ವ್ಯವಸ್ಥೆ ಮಾಡುವುದು ಒಳ್ಳೆಯದು, ಸರಕಾರ ಸಾಧ್ಯವಾದಷ್ಟು ನಷ್ಟ ತುಂಬಿಕೊಡಬೇಕು. ಇದು ಬಹಳ ದೊಡ್ಡ ಪ್ರಶ್ನೆ, ಸ್ವಾತಂತ್ರ್ಯ ಸಿಕ್ಕುವಾಗ 34 ಕೋಟಿ ಪ್ರಜೆ ಇದ್ದುದು ಇಂದು 54 ಕೋಟಿಯಾಗಿದೆ, ಭಾರತದಲ್ಲಿ ಜನಸಂಖ್ಯೆ ಹೆಚ್ಚು, ಅದಕ್ಕಾಗಿ ಆಹಾರದ ಉತ್ಪಾದನೆ ಹೆಚ್ಚಬೇಕು. ಹೀಗಿರುವಾಗ ವಿದ್ಯುತ್ತಿನ ದರ ಹೆಚ್ಚಿಸಿದರೆ ರೈತರು ಹೇಗೆತಾನೆ ಹೆಚ್ಚು ಬೆಳೆಯಲು ಸಾಧ್ಯ!

ಇನ್ನೊಂದು ಸೂಚನೆ. ಇಂದಿರುವ ಸಾಮಾನುಗಳು, ಈಗ ಹಾಕುವ ಬಲ್ಬುಗಳು ಬಹಳ ಕೆಳಮಟ್ಟದವು, ಇಂದು ಹಾಕಿದರೆ ನಾಳೆ ಸುಟ್ಟುಹೋಗುವುವು. ಹೀಗಿರುವಾಗ ಬೋರ್ಡು ಖರೀದಿ ಮಾಡುವುದರ ಬದಲಾಗಿ ಸಾರ್ವಜನಿಕರೇ ಖರೀದಿ ಮಾಡಬಹುದು. ಖರೀದಿ ಮಾಡುವಾಗ ಸರಕಾರದ ಕಂಟ್ರೋಲ್ ಇರಬೇಕು, ಯಾರಿಂದ ತೆಗೆದುಕೊಳ್ಳಬೇಕು, ಯಾವುದು ತೆಗೆದುಕೊಳ್ಳಬೇಕು ಎಂದು ಆಲೋಚನೆಮಾಡಿ ಸರಕಾರ ವಿದ್ಯುತ್ ಮಂಡಲಿಗೆ ತಿಳಿಸಿದರೆ, ಆ ಪ್ರಕಾರ ಮಂಡಲಿ ತೆಗೆದುಕೊಂಡರೆ ಕೆಳಮಟ್ಟದ ಬಲ್ಬುಗಳು ಅಥವಾ ಇತರ ಸಾಮಗ್ರಿಗಳನ್ನು ಉಪಯೋಗಮಾಡುವುದು ಕಡಿಮೆಯಾಗುವುದಕ್ಕೆ ಸಾಧ್ಯವುಂಟು. ಇದನ್ನು ಗಮನಿಸಬೇಕು.

ಕೈಗಾರಿಕೆಗಳನ್ನು ನಡೆಸತಕ್ಕವರ ವಿದ್ಯುಚ್ಛಕ್ತಿ ಬಳಕೆಯ ಬಿಲ್ಲು ಸಾವಿರ ರೂಪಾಯಿಗಳಿಗೂ ಮೇಲ್ಪಟ್ಟು ಬರುತ್ತದೆ, ಅಂತಹವರಿಗೂ ಒಂದೇ, ಮನೆಬಳಕೆಗೂ, ಪಂಪುಸೆಟ್ಟುಗಳಿಗೂ ಉಪಯೋಗಿಸತಕ್ಕವರಿಗೂ ಬಹಳ ಹೆಚ್ಚಿನ ವ್ಯತ್ಯಾಸವನ್ನೇನೂ ಮಾಡಿಲ್ಲ ಎಂಬ ದೂರು ಉಂಟು. ಯಾಕೆ ಈ ರೀತಿಯಾಗುತ್ತಿದೆ ಎಂಬುದನ್ನು ಪರಿಶೀಲನೆ ಮಾಡಿ ಈ ರೀತಿ ಅಕ್ರಮಗಳು ಆಗದಂತೆ ತಡೆಗಟ್ಟಬೇಕೆಂದು ಸರ್ಕಾರದವರಿಗೆ ಸಲಹೆ ಮಾಡುತ್ತಾ ಇದ್ದೇನೆ.

ಎರಡು ರೂಪಾಯಿ ಇದ್ದುದನ್ನು 4 ರೂಪಾಯಿ ಮಾಡಿದ್ದಾರೆ. ಇದಕ್ಕೆ ಮೊದಲು ಪಂಪ್‌ಸೆಟ್ ಇಟ್ಟುಕೊಂಡರೆ ಸಾವಿರ ರೂಪಾಯಿ ಮುಂಗಡ ಹಣ ಕೊಡಬೇಕೆಂದು ಆಜ್ಞೆ ಮಾಡಿದ್ದರು. ಈ ಸಭೆಯ 216 ಜನ ಸದಸ್ಯರು ಏಕ ಕಂಠದಿಂದ ಈ ರೀತಿ ಮುಂಗಡವನ್ನು ಕೊಡಲಿಕ್ಕೆ ರೈತನಿಂದ ಸಾಧ್ಯವಾಗಲಿಕ್ಕಿಲ್ಲ, ಈ ರೀತಿ ಮಾಡಬಾರದು ಎಂದು ಹೇಳಿದಾಗ ಅದನ್ನು ಕೈ ಬಿಟ್ಟರು, ಅದರಿಂದ ರೈತರಿಗೆ ಉಪಕಾರವಾಗಿದೆ. ಆಹಾರ ಹೆಚ್ಚು ಬೆಳೆಯಲಿ ಎಂಬ ಭಾವನೆಯಿಂದ ಆ ರೀತಿ ಮಾಡಲಾಯಿತು. ಅದೇ ರೀತಿ ಈಗ 4 ರೂಪಾಯಿ ಮಾಡಿರುವುದನ್ನು 2 ರೂಪಾಯಿಗೆ ತರಬೇಕು

ಅದಕ್ಕೆ ಮೀರಿ ಆಗತಕ್ಕ ನಷ್ಟವನ್ನು ಸರ್ಕಾರದವರೇ ಸಬ್ಸಿಡಿ ಅಥವಾ ಸಾಲ ಯಾವುದಾದರು ರೂಪದಲ್ಲಿ ಭರ್ತಿಮಾಡಿಕೊಟ್ಟು ರೈತನನ್ನು ಕಾಪಾಡದಿದ್ದರೆ ಮುಂದೆ ಬರತಕ್ಕ ಭವಿಷ್ಯತ್ತಿನ ವಿಚಾರ ಕಷ್ಟವಾಗಬಹುದು. ಹಸಿರು ಕ್ರಾಂತಿಯಾಗಬೇಕೆಂದು ಹೇಳುತ್ತೀರಿ. ಹಸಿರು ಕ್ರಾಂತಿಯಾದರೆ ಕಣ್ಣಿಗೆ ಹಬ್ಬವಾಗುತ್ತದೆ, ಹೊಟ್ಟೆಗೆ ಆಹಾರವಾಗುತ್ತದೆ. ಆದರೆ ಅದಕ್ಕೆ ಬೇಕಾದ ಉಪಕಾರ ಮಾತ್ರ ಮಾಡುವುದಿಲ್ಲ ಎಂದರೆ ಮುಂದೆ ಯಾವ ರೀತಿಯ ಪರಿಣಾಮವಾಗಬಹುದು ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಿ. ಇದು ಮುಂದೆ ಕೆಂಪು ಕ್ರಾಂತಿಗೆ ಅವಕಾಶವಾಗದಂತೆ ನೋಡಿಕೊಳ್ಳಬೇಕಾದ್ದು ನಿಮ್ಮ ಧರ್ಮ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾವಿರಾರು ಪಂಪುಸೆಟ್ಟುಗಳು ಇವೆ, ಅವರಿಂದ ದಿನಂಪ್ರತಿ ಮನವಿಗಳು ಬರುತ್ತಾ ಇವೆ. ಈ ದರವನ್ನು ಕಡಿಮೆ ಮಾಡಿಕೊಡುವುದರ ಕಡೆಗೆ ಸರ್ಕಾರದವರು ಗಮನ ಕೊಡಬೇಕು. ಈ ಬಗ್ಗೆ ಆಳುವ ಪಕ್ಷದ ಸದಸ್ಯರು ಬಹಳ ಕಟುವಾಗಿ ಮಾತನಾಡಿದ್ದಾರೆ, ಎದುರು ಪಕ್ಷದವರೂ ಕೂಡ ಮಾತನಾಡಿದ್ದಾರೆ, ಇದನ್ನೆಲ್ಲಾ ಗಮನಿಸಿ ಸೂಕ್ತವಾದ ಕಾರ್ಯಕ್ರಮವನ್ನು ತಗೆದುಕೊಳ್ಳಬೇಕಾದ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಕೊನೆಯದಾಗಿ ಈ ಮೂರು ಚರಣಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

" ರೈತನ ಬಿಟ್ಟರೆ ಕೆಟ್ಟಿತು ದೇಶ
ರೈತನ ಪ್ರೇಮವೇ ದೇಶದ ಪ್ರೇಮ
ರೈತನ ಹಿರಿಮೆಯೇ ದೇಶದ ಹಿರಿಮೆ ".

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿ ಮಂಡಲಿಯ ರೈತನಮೇಲೆ ಹಾಕಿರತಕ್ಕ ಹೆಚ್ಚಿನ ತೆರಿಗೆಯ ವಿಚಾರವಾಗಿ ಈ ಸದನದ ಹಿರಿಯ ಸದಸ್ಯರೆಲ್ಲರೂ ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ಸರ್ಕಾರಕ್ಕೆ ಮನದಟ್ಟಾಗುವ ರೀತಿಯಲ್ಲಿ ಹೇಳಿದ್ದಾರೆ. ಜನತೆಯ ಆಶೋತ್ತರಗಳನ್ನು ನೆರವೇರಿಸಿ ಅವರ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕೋಸ್ಕರ ಸರಕಾರ ಇಂತ ಮಂಡಲಿಗಳನ್ನು ರಚನೆ ಮಾಡಿದರು, ಇವತ್ತು ಇದು ಸರ್ವಾಧಿಕಾರಿಯಾದಂತಹ ಒಂದು ಮಂಡಲಿಯಾಗಿದೆ. ನಾನು ವಿದ್ಯುಚ್ಛಕ್ತಿ ಮಂಡಲಿಯ ಮೀಟಿಂಗ್‌ಗೆ ಹೋಗಿದ್ದೆ, ಈ ಮಂಡಲಿ ಪರ್ಣಸ್ವಾತಂತ್ರ್ಯ ಅಧಿಕಾರವನ್ನು ಹೊಂದಿರತಕ್ಕ ಒಂದು ಸಂಸ್ಥೆ ಎಂಬ ಭಾವನೆಯನ್ನು ಮಂಡಲಿಯ ಅಧ್ಯಕ್ಷರು ವ್ಯಕ್ತಪಡಿಸಿದರು. ಪ್ರಜಾಪ್ರಭುತ್ವದ ನೆಪದಲ್ಲಿ ಇಂತಹ ಮಂಡಲಿಗಳನ್ನು ರಚನೆ ಮಾಡುವುದು ಆದರ್ಶಪ್ರಾಯವಾದುದಲ್ಲ ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಇಂತಹ ಮಂಡಲಿಗಳನ್ನು ಮಾಡಿ ರೈತರಿಗೆ ಬೇಕಾದ ನೆರವನ್ನು ಅವರು ನೀಡದೇಹೋದ ಪಕ್ಷದಲ್ಲಿ ಇವುಗಳಿಂದ ಪ್ರಯೋಜನವಾದರೂ ಏನು ಎಂದು ನಾನು ಬಹಳ ವ್ಯಸನದಿಂದ ಹೇಳಬೇಕಾಗುತ್ತದೆ. ವಿದ್ಯುಚ್ಛಕ್ತಿ ಮಂಡಲಿಯವರು ದೊಡ್ಡ ದೊಡ್ಡ ಕೈಗಾರಿಕೆಗಳಿಂದ ಬರಬೇಕಾದ ಸುಮಾರು 270ಲಕ್ಷ ರೂಪಾಯಿಗಳನ್ನು ಬಾಕಿ ಬಿಟ್ಟುಕೊಂಡು ಬಂದಿದ್ದಾರೆ. ಯಾವ ಕಾರಣದಿಂದ ಬಿಟ್ಟುಕೊಂಡು ಬಂದಿದ್ದಾರೆ ಎಂದರೆ ಈ ಕೈಗಾರಿಕೆಗಳು ಸಾರೋದ್ಧಾರವಾಗಿ ಅಭಿವೃದ್ಧಿಯಾಗುವುದಕ್ಕಾಗಿ ಅಲ್ಲಾ ಕೆಲವು ಮುಖಂಡರ ಮತ್ತು ಕೆಲ ಅಧಿಕಾರಿಗಳ ಸೌಲಭ್ಯಕ್ಕಾಗಿ ಬಾಕಿ ವಸೂಲಿ ಮಾಡದಂತೆ ಸರ್ಕಾರದವರು ಆದೇಶ ನೀಡಿದ್ದಾರೆ ಗ್ರಾಮಾಂತರಗಳ ರೈತರ ಪಂಪು ಸೆಟ್ಟುಗಳಿಗಾಗಿ ಸರಬರಾಯಿ ಮಾಡತಕ್ಕ ವಿದ್ಯುಚ್ಛಕ್ತಿಗೆ ನಿಗದಿ ಮಾಡಿರತಕ್ಕ ತಾರೀಖಿನಲ್ಲಿ ಹಣ ಕಟ್ಟದಿದ್ದರೆ ವಿದ್ಯುಚ್ಛಕ್ತಿಯ ಸರಬರಾಯಿ ನಿಲ್ಲಿಸತಕ್ಕ ಪರಿಸ್ಥಿತಿ ಇದೆ. ಅದೇ ಕೈಗಾರಿಕೆಗಳವರ ವಿಷಯದಲ್ಲಿ ಯಾವ ಕ್ರಮ ತೆಗೆದುಕೊಂಡಿದ್ದೀರಿ ! ಅವರಿಂದ ಎಷ್ಟು ನಷ್ಟ ವಿದ್ಯುಚ್ಛಕ್ತಿ ಮಂಡಲಿಗೆ ಆಗಿದೆ ! ಅದಕ್ಕೆ ಕಾರಣರು ಸರ್ಕಾರದವರೇ ? ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರೇ ? ಮೊನ್ನೆತಾನೆ ಸರ್ಕಾರದ ವತಿಯಿಂದ ಅನೇಕ ಕೈಗಾರಿಕೆಗಳಿಗೆ ಲಕ್ಷೋಪಲಕ್ಷ ರೂಪಾಯಿಗಳನ್ನು ಗ್ರ್ಯಾಂಟ್ ರೂಪದಲ್ಲಿ ಕಡಿಮೆ ಬಡ್ಡಿಗೆ ಕೊಟ್ಟಿದ್ದೀರಿ. ನಮ್ಮ ದೇಶದ ಜನರ ದುರಾದೃಷ್ಟ ಎಂದು ಹೇಳಬೇಕಾಗಿದೆ, ಯಾವುದೇ ತೆರಿಗೆಯನ್ನು ಹಾಕುವಾಗಲೂ ಕೂಡ ಸರ್ಕಾರದವರ ದೃಷ್ಟಿ ಗ್ರಾಮಾಂತರದ ಜನರಮೇಲೆಯೇ ಇರುತ್ತದೆ. ಗ್ರಾಮಾಂತರ ಜನತೆಯ ಅಭ್ಯುದಯವಾಗಬೇಕಾದರೆ ನಮ್ಮ ದೇಶದಲ್ಲಿರತಕ್ಕ ಅನ್ನದ ಅಭಾವ ನಿವಾರಣೆಯಾಗಬೇಕಾದರೆ ಗ್ರಾಮಾಂತರದ ಜನರು ಹೆಚ್ಚು ಹೆಚ್ಚಾಗಿ ಆಹಾರ ಧಾನ್ಯವನ್ನು ಬೆಳೆಯಬೇಕು. ಅನ್ನ ಸಮಸ್ಯೆಯಿಂದ ಮಾತ್ರ ಎಲ್ಲಾ ಅಭ್ಯುದಯವಾದಂತೆ ದೇಶವಿದೇಶಗಳಿಂದ ಭಿಕ್ಷಾ ಪಾತ್ರೆ ಹಿಡಿದು ದವಸಧಾನ್ಯಗಳನ್ನು ತರುತ್ತಾ ಇದ್ದೇವೆ ಗ್ರಾಮಾಂತರ ಜನರ ಹಿತಚಿಂತನೆ ಮಾಡಿಲ್ಲ ಎಂಬುದು ಇದರಿಂದಲೇ ಸ್ಪಷ್ಟವಾಗುತ್ತದೆ. ನಮ್ಮಲ್ಲಿ ಇರತಕ್ಕ ಅಧಿಕಾರಿಗಳು, ಮಂತ್ರಿವರ್ಯರೂ ಕೂಡ ರೈತನ ಮಕ್ಕಳೇ, ಆದರೆ ಅವರು ನಗರಕ್ಕೆ ಬಂದಮೇಲೆ ಅವರ ಭಾವನೆಯೇ ಬದಲಾವಣೆಯಾಗಿ ನಾವು ಸಾಮ್ರಾಟರೆಂಬ ಮನೋಭಾವ ಹೊಂದಿದವರಾಗಿ ಜನತೆಯ ಹಿತವನ್ನೇ ಮರೆತಿದ್ದಾರೆ. ಅಧಿಕಾರವರ್ಗದಲ್ಲಿ

(ಶ್ರೀ ಬಿ. ದೊಡ್ಡಬೋರೇಗೌಡ)

ನೂರಕ್ಕೆ ಎಂಬತ್ತು ಜನರು ಭ್ರಷ್ಟಾಚಾರ, ಲಂಚಗುಳಿತನದಿಂದ ಕೂಡಿದ್ದಾರೆ. ನಮ್ಮ ಆಡಳಿತ ಭದ್ರವಾಗಿ ಇರಲಿ ಅನ್ನುವುದಕ್ಕೆ ಕಂಟ್ರಾಕ್ಟುದಾರರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿ ಕೊಟ್ಟು, ಚುನಾವಣಾ ಕಾಲದಲ್ಲಿ ಅವರಿಂದ ಬೇಕಾದಷ್ಟು ಹಣವನ್ನು ವಸೂಲು ಮಾಡಿಕೊಂಡಿರುತ್ತಾರೆ, ಬೇಕಾದರೆ ನನ್ನ ಹತ್ತಿರ ಹೆಸರುಗಳು ಇವೆ, ಅಧ್ಯಕ್ಷರು ಅಪ್ಪಣೆಕೊಟ್ಟರೆ ಅಂಕಿಅಂಶಗಳಿಂದ ಅದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಎಲ್ಲರೂ ಅದೇರೀತಿ ಇದ್ದಾರೆಎಂದು ನಾನು ಹೇಳುತ್ತಿಲ್ಲ. ಶೇಕಡ 20 ರಷ್ಟು ಅಧಿಕಾರಿಗಳು ನಿಷ್ಠಾವಂತರು ಇದ್ದಾರೆ, ಅವರಿಗೆ ಸರ್ಕಾರದಲ್ಲಿ ಬೆಂಬಲ ಇಲ್ಲ. ನಿಷ್ಠಾವಂತ ಅಧಿಕಾರಿಗಳು ಯಾರಿದ್ದಾರೆ ಅವರಿಗೆ ವರ್ಷದಲ್ಲಿ 3-4 ಸಾರಿ ವರ್ಗಾವಣೆಯಾಗಿ ಅವರು ಗಂಟುಮೂಟೆ ಕಟ್ಟಿರ್ಲೇ ಬೇಕು. ಮತ್ತು ನೌಕರರು ತಮ್ಮ ಸೀನಿಯಾರಿಟಿ ಮತ್ತು ಗ್ರೇಡ್ ವಗ್ಗೈರೆ ಸಿಕ್ಕಲಿಲ್ಲ ಎಂದು ಅತೃಪ್ತಿಹೊಂದಿದವರಾಗಿ ಕೆಲಸ ಮಾಡುತ್ತಿಲ್ಲ ಆ ದೊಡ್ಡರೋಗಗಳಿಗೆ ಇಲ್ಲಿಯವರಿಗೂ ಚಿಕಿತ್ಸೆಯನ್ನು ಕಂಡುಹಿಡಿಯುವುದಕ್ಕಾಗಲಿಲ್ಲ, ಸರ್ಕಾರದವರು ಈ ವಿಚಾರದಲ್ಲಿ ಅನಾಸಕ್ತಿ ವಹಿಸಿದ್ದಾರೆ. ಇದು ಸರಿಯಲ್ಲ. ಅವರಿಗೆ ಒಂದು ಯೋಗ್ಯ ಜೀವನ ನಡೆಸುವುದಕ್ಕೆ ಆಗುವಷ್ಟನ್ನಾದರೂ ಕೊಡರ್ಲೇಬೇಕು. ಇದನ್ನೆಲ್ಲಾ ಸರ್ಕಾರದವರು ಮನಗಂಡಿದ್ದರೂ ಕಾಣದವರಂತೆ ನಡೆಸುತ್ತಿರುವುದು ನಾಚಿಗೇಡಿನ ಪ್ರಸಂಗ. ಈ ಹಿಂದೆ ಸರ್ಕಾರದವರು ಇನ್ನುಮುಂದೆ ಈ ಆಹಾರಧಾನ್ಯಗಳಮೇಲೆ ಯಾವುದೇ ಒಂದು ತೆರಿಗೆಯನ್ನೂ ಹಾಕುವುದಿಲ್ಲ ಎಂಬ ಭರವಸೆಯನ್ನು ಹೇಳಿ ಆ ಶರಾವತಿಯ ವಿದ್ಯುತ್ ಜನರೇಟ್ ಉತ್ಪಾದನಾ ಕಾಲದಲ್ಲಿ ವಿಪರೀತ ತೆರಿಗೆಗಳನ್ನು ಹಾಕಿ ಆ ಶರಾವತಿ ಮೂರನೆ ಹಂತದಲ್ಲಿ ಅದಕ್ಕೆ ನೂರಾಹತ್ತು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರು. ಆ ಕಾಲದಲ್ಲಿ ಸರ್ಕಾರದವರು ಏನು ಹೇಳಿದ್ದರು ? ದೇಶದಲ್ಲಿ ಇರತಕ್ಕ ಎಲ್ಲಾ ಗ್ರಾಮಾಂತರ ಪ್ರದೇಶದವರಿಗೂ ವಿದ್ಯುಚ್ಛಕ್ತಿಯನ್ನು ಬಹಳ ರಿಯಾಯಿತಿ ದರದಲ್ಲಿ ಒದಗಿಸುತ್ತೇವೆಂದು ಹೇಳಿದ್ದರು. ಆ ದಿವಸ ಹಾಗೆ ಹೇಳಿ ಈ ದಿವಸ ಅವರು ನಡೆಯುತ್ತಿರುವುದನ್ನು ನೋಡಿದರೆ ಅವರು ಯಾವ ದಿಕ್ಕಿಗೆ ಹೊರಟಿದ್ದಾರೆ ಎಂಬುದು ಗೊತ್ತಾಗುತ್ತದೆ. ಸರ್ಕಾರದವರು ಇಲ್ಲಿಯವರೆಗೂ ಹೊರದೇಶದಿಂದ ಸಾಲಮಾಡಿ ತಂದಿರತಕ್ಕ ಅಪಾರ ಹಣಕ್ಕೆಲ್ಲಾ ದೇಶದಲ್ಲಿರತಕ್ಕ ರೈತಾಪಿ ಜನರು ಅದಕ್ಕೆ ಬಡ್ಡಿಯನ್ನು ತೆರಬೇಕಾಗಿದೆ. ನಮ್ಮ ಸರ್ಕಾರದವರು ಅಕ್ಕಪಕ್ಕದ ರಾಜ್ಯಗಳವರಿಗೆ ಯೂನಿಟ್ ಒಂದಕ್ಕೆ ಅಂದರೆ ಕಿ. ವಾಟ್ ಒಂದಕ್ಕೆ 6 ಪೈಸೆಗಳಿಂದ ಹಿಡಿದು 10 ಪೈಸೆಗಳವರೆಗೆ, ದರವನ್ನು ನಿಗದಿಮಾಡಿದ್ದಾರೆ. ಇಲ್ಲಿ ಒಂದು ಕಿ. ವಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆಮಾಡಬೇಕಾಗಿದ್ದರೆ ಅದಕ್ಕೆ 980 ರೂಪಾಯಿಗಳಿಂದ 1,005 ರೂಪಾಯಿಗಳವರೆಗೂ ಖರ್ಚಾಗುತ್ತದೆಂದು ಹೇಳುತ್ತಿದ್ದಾರೆ. ಹೀಗೆ ಆ ವಿದ್ಯುಚ್ಛಕ್ತಿಯ ಉತ್ಪಾದನೆಗೆ ತಗುಲುವ ಅಪಾರ ಖರ್ಚನ್ನು ವಹಿಸಲು ಸರ್ಕಾರದವರು ಅಪಾರವಾಗಿ ಸಾಲ ಮಾಡಿದ್ದಾರೆ. ಆ ಸಾಲದ ಹೊರೆಯನ್ನು ದೇಶದ ಪ್ರಜೆಗಳಮೇಲೆ ಹೊರಿಸಿದ್ದಾರೆ. ಹೊರಗಡೆ ರಾಜ್ಯಗಳಲ್ಲಿರತಕ್ಕ ಮಂತ್ರಿಮಂಡಲದ ಪ್ರೀತಿಯನ್ನು ಸಂಪಾದಿಸುವುದಕ್ಕಾಗಿ ನಮ್ಮ ಸರ್ಕಾರದವರು ಅವರಿಗೆ ಬಹಳ ಕಡಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕ ರೈತನಿಗೂ ಕೂಡ ಅದೇ ಪ್ರಮಾಣದಲ್ಲಿ ಏಕೆ ರಿಯಾಯಿತಿ ದರದಲ್ಲಿ ಪವರನ್ನು ಸರಬರಾಯಿಮಾಡುತ್ತಿಲ್ಲ. ಸರ್ಕಾರದವರು ಅನೇಕ ಕೋಟಿ ರೂಪಾಯಿಗಳನ್ನು ಸಾಲ ಮಾಡಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಎರಡೂವರೆ ಕೋಟಿ ಜನರಮೇಲೆ ಆ ಸಾಲದ ಹೊರೆಯನ್ನು ಹೇರಿದ್ದರೂ ರಾಜ್ಯಸರ್ಕಾರ ಅವರ ಹಿತಸಾಧನೆಯ ಗಮನ ಕೊಡದಿರುವುದು ಬಹಳ ವ್ಯಸನಕರ. ನಮ್ಮ ಅಕ್ಕಪಕ್ಕದಲ್ಲಿರತಕ್ಕ ರಾಜ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಕಡಮೆ ದರದಲ್ಲಿ ಒದಗಿಸತಕ್ಕ ವಿಚಾರದಲ್ಲಿ ಈ ಸಭೆಯವರನ್ನು ಸರ್ಕಾರದವರು ಕೇಳಲಿಲ್ಲ. ನೆರೆ ರಾಜ್ಯಗಳಿಗೆ ಕಡಿಮೆ ದರದಲ್ಲಿ ವಿದ್ಯುತ್ತನ್ನು ಒದಗಿಸಿ ಅಪಾರ ಸಾಲದ ಹೊರೆಯನ್ನು ಹೊರತಕ್ಕ ರೈತರಿಗೆ ಆ ರಿಯಾಯಿತಿ ದರದಲ್ಲಿ ವಿದ್ಯುತ್ತನ್ನು ಒದಗಿಸಿಲ್ಲ. ಈ ವಿದ್ಯುಚ್ಛಕ್ತಿಯನ್ನು ತಯಾರಿಸುವುದಕ್ಕಾಗಿ ಖರ್ಚುಮಾಡಿರತಕ್ಕ ಕೋಟ್ಯಾನುಕೋಟಿ ರೂಪಾಯಿಗಳ ಸಾಲವನ್ನಾಗಲಿ ಅಥವ ಅದರ ಬಡ್ಡಿಯನ್ನಾಗಲ್ಲಿ ಅಕ್ಕ ಪಕ್ಕದ ರಾಜ್ಯಸರ್ಕಾರ ಕೊಡುತ್ತಿಲ್ಲ. ಅಂಥವರಿಗೇಕೆ ಇವರು ರಿಯಾಯಿತಿ ದರದಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಯಿಮಾಡಬೇಕು ? ನಮ್ಮ ರಾಜ್ಯ ಸರ್ಕಾರದ ಆಡಳಿತಇಷ್ಟು ಲಕ್ಷಣವಾಗಿದೆ. ಇನ್ನು ಜನತೆಯ ಉದ್ಧಾರವಾದಂತೆಯೇ ಇದೆ. ಇನ್ನಾದರೂ ಈ ಸರ್ಕಾರದವರು ಎಚ್ಚೆತ್ತು ಕೆಲಸಮಾಡಬೇಕಾಗಿದೆ. ಈಗಿನ ಮಂತ್ರಿಮಂಡಲವಾದರೋ ಯುವಕರಿಂದಲೂ ಉತ್ಸಾಹಶಾಲಿಗಳಿಂದಲೂ ಕೂಡಿದ್ದಾಗಿದೆ. ನಮ್ಮ ಮಂತ್ರಿಮಂಡಲದಲ್ಲಿ 29 ಜನ ಮಂತ್ರಿಗಳಿದ್ದಾರೆ. ಇವರೆಲ್ಲಾ ದಿನ ಬೆಳಗಾದರೆ ರಾಜ್ಯದಲ್ಲಿ ಸುತ್ತುತ್ತರ್ಲೇ ಇರುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಕಳೆದ 5–6 ವರ್ಷಗಳಿಂದ ಮಳೆಬೆಳೆಗಳಿಲ್ಲ ಎಂಬುವು ಇವರಿಗೇನು ಗೊತ್ತಿಲ್ಲದ

ವಿಷಯವೇ? ಹಾಗೆ ಅಲ್ಲಿ ಮಳೆ ಬೆಳೆಗಳಿಲ್ಲವಿದ್ದರೂ ಇವರಿಗೆ ಸಿಕ್ಕತಕ್ಕ ಭವ್ಯಸ್ವಾಗತಕ್ಕೇನೂ ಕೊರತೆಯಿಲ್ಲ. ಇವರ ಆ ಭವ್ಯಸ್ವಾಗತದ ವೈಭವದಲ್ಲಿ ಇವರಿಗೆ ಆ ರೈತರ ಗೋಳನ್ನು ಕೇಳುವುದಕ್ಕಾದರೂ ವೇಳೆಯೆಲ್ಲಿದೆ? ದೇಶದಲ್ಲಿ ಸಹಕಾರ ಪದ್ಧತಿಯನ್ನು ರೂಢಿಸುವುದಕ್ಕಾಗಿ ನಿರ್ಮಾಣವಾದ ಸಹಕಾರ ಸಂಘಗಳೇನಿವೆ ಅವು ಈ ದಿವಸ ಅ ಸಹಕಾರ ಸಂಘಗಳಾಗಿ ಮಾರ್ಪಟ್ಟು ದೇಶಕ್ಕೆ ಬಹಳ ಹಾನಿಯನ್ನುಂಟುಮಾಡುತ್ತಿವೆ. ದೇಶದಲ್ಲಿ ಇಂಥ ಅಸಹಕಾರ ಸಂಘಗಳು ಸುಮಾರು 20 ಸಾವಿರ ಇರುತ್ತವೆ. ಈ ಅಸಹಕಾರ ಸಂಘಗಳು ಈ ಮಂತ್ರಿಗಳಿಗೆ ಆಮಂತ್ರಣಕೊಟ್ಟು ಸ್ವಾಗತಿಸುತ್ತಿವೆ. ಒಂದು ಗ್ರಾಮದಲ್ಲಿ ಒಂದು ವಿದ್ಯುಚ್ಛಕ್ತಿಯ ಕಂಬವನ್ನು ನಿಲ್ಲಿಸುವುದಕ್ಕೆ ಎಷ್ಟುಜನ ಮಂತ್ರಿಗಳು ಬರಬೇಕು! ಅಧಿಕಾರಿಗಳು ಎಷ್ಟುಮಂದಿ? ಜೀಪುಗಳೆಷ್ಟು? ಇದನ್ನು ಹೇಳತೀರದು. ಸುಮಾರು 8 ಜೀಪುಗಳಲ್ಲಿ ಅಧಿಕಾರಿಗಳ ತಂಡ ಮಂತ್ರಿಗಳನ್ನು ಸ್ವಾಗತಿಸಲು ಅವರು ತಮ್ಮ ಕೆಲಸ ಕಾರ್ಯಗಳನ್ನೆಲ್ಲಾ ಬಿಟ್ಟು ಅಲ್ಲಿದ್ದರು ಇಬ್ಬರು ಸಚಿವರು ಆ ಕಾರ್ಯದ ಉದ್ಘಾಟನೆ ಆಗಮಿಸಿದರು. ಇದು ಸುಖರಾಜ್ಯದ ಲಕ್ಷಣಗಳು. ಅವರಿಗೆ ಟಿ.ಎ.ಡಿ.ಎ. ಎಷ್ಟು ಖರ್ಚಾಗುತ್ತದೆ ಇವನ್ನೆಲ್ಲಾ ಕೇಳತಕ್ಕವರು ಯಾರು ಇಲ್ಲವೋ! ಇಷ್ಟು ಅಧರ್ಮಗಳನ್ನು ನಾನೆಂದೂ ಕಂಡಿರಲಿಲ್ಲ. ಇವನ್ನೆಲ್ಲಾ ಕೂಡಲೆ ನಿಲ್ಲಿಸಬೇಕೆಂದು ಹೇಳಿ ಇನ್ನು ನಾನು ಈ ಸಂದರ್ಭದಲ್ಲಿ ಸಂದರ್ಭಕ್ಕೆ ಲಗತ್ತಾಗಿರತಕ್ಕ ಒಂದು ಕಥೆಯನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಕಾಬೂಲಿನ ರಾಜ್ಯದ ಒಂದು ಹಳ್ಳಿಯಲ್ಲಿ ಕ್ವಾಜಾಸಾಬ್ ಎಂಬ ಒಬ್ಬ ಉತ್ತಮ ರೈತನಿದ್ದ. ಅವನು ಯಾವಾಗಲೂ ತನ್ನ ಹೊಲಗದ್ದೆಗಳ ಕಡೆ ಹೋಗಬೇಕಾಗಿದ್ದಾಗ ಗಾರ್ಧಭದಮೇಲೆ ಸವಾರಿ ಮಾಡಿಕೊಂಡು ಹೋಗುತ್ತಿದ್ದ. ಅವನ ಜಮೀನುಗಳು ಊರಿಗೆ ಸುಮಾರು ಎರಡೂವರೆ ಮೈಲಿಗಳ ದೂರದಲ್ಲಿದ್ದವು. ಒಂದು ದಿನ ಬೇಸಿಗೆಯ ಕಾಲ. ಅವನು ಗಾರ್ಧಭದಮೇಲೆ ಸವಾರಿಹೊರಟಿದ್ದ ಕಾಲದಲ್ಲಿ ದಾರಿಯಲ್ಲಿ ಒಂದು ದೊಡ್ಡ ನಾಗರ ಹಾವು ಅಡ್ಡಬಂದಿತು. ಆಗ ಗಾರ್ಧಭ ಹೆದರಿ ಓಡುವುದಕ್ಕೆ ಪ್ರಾರಂಭ ಮಾಡಿತು. ಅದರಮೇಲೆ ಕುಳಿತಿದ್ದ ಸವಾರನು ಅದನ್ನು ಭದ್ರವಾಗಿ ಕಟ್ಟಿ ಹಿಡಿದ್ದನು. ಆ ಗಾರ್ಧಭ 4–5 ಮೈಲಿಗಳವರೆಗೂ ಓಡಲಾರಂಭಿಸಿತು. ಆಗ ದಾರಿಯಲ್ಲಿ ಅದನ್ನು ಕಂಡ ಜನರು ಖಾಜಾಸಾಹೇಬರನ್ನು ಎಲ್ಲಿಗೆ ಹೀಗೆಹೊರಟಿದ್ದೀಯ ಎಂದು ಕೇಳಿದ್ದಕ್ಕೆ ಆತನು ನಾನು ಹೋಗುತ್ತಿಲ್ಲ, ಈ ಗಾರ್ಧಭಮಾತ್ರ ಹೋಗುತ್ತಿದೆ. ಅದು ಎಲ್ಲಿಗೆ ಹೋಗುತ್ತಿದೆ ಎಂಬುದನ್ನು ತಿಳಿಯಬೇಕಾಗಿದ್ದರೆ ಅದನ್ನೇ ಕೇಳಿ ಎಂದನಂತೆ. ಹಾಗೆ ಇಲ್ಲಿ ರೈತರಿಗೆ ಇಷ್ಟೊಂದು ಅನ್ಯಾಯಗಳಾಗುತ್ತಿವೆ ಎಂದು ಸರ್ಕಾರದವರನ್ನು ಕೇಳಿದರೆ ಅವರು ಬೋರ್ಡಿನ ಕಡೆಗೆ ಕೈತೋರಿಸುತ್ತಾರೆ. ಬೋರ್ಡಿನವರನ್ನು ಕಂಡರೆ ಅವರು ಸರ್ಕಾರದವರ ಕಡೆಗೆ ಕೈತೋರಿಸುತ್ತಾರೆ. ಹೀಗೆ ಉಭಯತ್ರರಿಂದಲೂ ಅತೃಪ್ತಿಯ ಉತ್ತರಗಳೇ ಬರುತ್ತಿವೆ. ರೈತರು ಇಂಥ ಪರಿಸ್ಥಿತಿಯಲ್ಲಿ ಶತಮಾನಗಟ್ಟಲೆ ಪ್ರಯತ್ನಮಾಡಿದರೂ ಪ್ರಯೋಜನವಾಗುವುದಿಲ್ಲ. ಇಂಥ ಬೋರ್ಡ್‌ಗಳನ್ನು ಪರಿವರ್ತನೆಮಾಡುವುದಕ್ಕೂ ಕೂಡ ಸಾಧ್ಯವಿಲ್ಲ. ನಮ್ಮ ಮುಖಂಡರು ಬಾಯಲ್ಲಿ ಹೇಳುತ್ತಾರೆ ವ್ಯಕ್ತಿಪೂಜೆ ಸಲ್ಲದು ಎಂದು. ಹಾಗೆ ಹೇಳಿದವರು ಹಳ್ಳಿಗಳಿಗೆ ಹೋಗುವುದನ್ನು ಏನಾದರೂ ಬಿಟ್ಟಿದ್ದಾರೆಯೇ! ಅವರ ಪಾರ್ಟಿಯ ಜನರು ಸೇರಿ ಈ ವ್ಯಕ್ತಿಪೂಜೆಯನ್ನು ಇನ್ನೂ ಬಲಗೊಳಿಸುತ್ತಿದ್ದಾರೆ. ಒಂದೊಂದು ಕಾಂಗ್ರೆಸ್ ಕೂಟಕ್ಕೂ ಏನಿಲ್ಲ ಎಂದರೂ 400 ರೂಪಾಯಿಗಳಿಂದ ಹಿಡಿದು 800 ಸಾವಿರವರೆಗೂ ಖರ್ಚುಮಾಡುತ್ತಾರೆ; ಜನರಿಂದ ಓಟನ್ನು ಗಳಿಸತಕ್ಕ ಒಂದು ಕಾರಣಕ್ಕಾಗಿ ಹಳ್ಳಿಗಳಲ್ಲಿ ಆಡತಕ್ಕ ನಾಟಕಗಳಿಗೆ ಹೋಗಿ ಮಂತ್ರಿಗಳು ಭಾಷಣ ಮಾಡುತ್ತಿದ್ದಾರೆ. ಇಂಥ ನಾಲ್ಕೈದು ನಿದರ್ಶನಗಳು ನನಗೆ ಗೊತ್ತು. ದೇಶದಲ್ಲಿ ಅನ್ನದ ನೀರಿನ ಜಟಿಲ ಸಮಸ್ಯೆಗಳಿದ್ದಾಗ ಈ ರೀತಿ ರೈತನನ್ನು ಹಿಂಸೆಗೆ ಗುರಿಮಾಡತಕ್ಕದ್ದು ಸರಿಯಲ್ಲ. ಈ ಹೊರೆಯನ್ನು ಕಡಿಮೆ ಮಾಡಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ಕೆ. ಲೀಲಾವತಿ ರೈ (ಬಂಟವಾಳ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಎಲೆಕ್ಟ್ರಿಸಿಟಿ ವಿಷಯದಲ್ಲಿ ಸನ್ಮಾನ್ಯ ಸದಸ್ಯರುಗಳು ಈ ಕಡೆಯಿಂದ ಆ ಕಡೆಯಿಂದ ಬಹಳವಾಗಿ ಮಾತನಾಡಿದರು. ಮೊಟ್ಟಮೊದಲನೆಯದಾಗಿ ನಮ್ಮ ದೇಶದ ಶೇಕಡಾ 85ರಷ್ಟು ರೈತರು ಈ ದೇಶದ ಜೀವಾಳ. ಅವರ ಉತ್ತಮ ರೀತಿಯ ಜೀವನವೇ ಈ ದೇಶದ ಅಡಿಗಲ್ಲು ಎಂದು ಹೇಳಬಯಸುತ್ತೇನೆ. ಹಿಂದೆ ಬೋರ್ಡಿನ ಅಧಿಕಾರವರ್ಗದವರೊಡನೆ ಕೂಡಿ ಮಾತನಾಡಿದಂಥ ಸಂದರ್ಭದಲ್ಲಿ ಯಾವ ರೀತಿ ಕಷ್ಟಕರವಾದ ಸ್ಥಿತಿಯನ್ನು ಸುಧಾರಿಸಬೇಕೆಂಬುದನ್ನು ನಾವು ಹೇಳಿಕೊಂಡಿದ್ದೇವೆ. ರೈತರಿಂದ ಮಿನಿಮಂ ಚಾರ್ಜಸ್ 4 ರೂಪಾಯಿನಂತೆ ವಸೂಲು ಮಾಡುವುದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಇದನ್ನು ಸರ್ಕಾರದವರು ಯೋಚನೆಮಾಡಿ ಕಡಿಮೆ ಮಾಡಬೇಕು. ರೈತರಿಗೆ ಎಲೆಕ್ಟ್ರಿಸಿಟಿ ಸಿಗುವಂತಾಗುವುದಿಲ್ಲ. ಈ ಬೋರ್ಡ್ ಜನತೆಗಾಗಿ ಇದೆ. ಜನತೆಯ ಕ್ಷೇಮಕ್ಕಾಗಿ

(ಶ್ರೀಮತಿ ಕೆ. ಲೀಲಾವತಿ ರೈ)

ಇದೆ. ಪ್ರತಿಯೊಂದು ಹಳ್ಳಿಹಳ್ಳಿಗೂ ಈ ದೇಶದಲ್ಲಿ ಎಲೆಕ್ಟ್ರಿಸಿಟಿ ಹೋಗಬೇಕು ಮತ್ತು ನೀರಾವರಿ ಸೌಲಭ್ಯವೂ ಹೋಗುವುದು ಅಗತ್ಯವೆಂದು ನಮ್ಮ ಸರ್ಕಾರ ಪದೇ ಪದೇ ಸಾರಿದೆ. ಅದನ್ನು ಮಾಡುವುದು ನಮ್ಮ ಕರ್ತವ್ಯ. ಅದರೂ ನಾವು ಹೇಳುವುದು ಒಂದನ್ನೂ ಕಿವಿಗೆ ಸರ್ಕಾರದವರು ಹಾಕಿಕೊಳ್ಳುತ್ತಿಲ್ಲ. ಆ ರೀತಿ ಮಾಡುವುದು ಸರಿಯಲ್ಲ. ಈಗ ಈ ಸದನದಲ್ಲಿ ಬರೀ ಬಾಯಿಯಿಂದ ಹೇಳಿದರೆ, ಅದರಿಂದೇನೂ ಪ್ರಯೋಜನವಿಲ್ಲ. ಅವರು ಹೇಳಿದ್ದನ್ನು ಕಾರ್ಯಗತ ಮಾಡಬೇಕು.

ಮತ್ತೊಂದು ವಿಷಯ. ನೀರು ಕೊಡುವುದು, ವಿದ್ಯುಚ್ಛಕ್ತಿ ಕೊಡುವುದು, ಆಹಾರ ಕೊಡುವುದು, ಇವು ಪುಣ್ಯ ಕೆಲಸ. ಡೆಪ್ಯುಟಿ ಕಮಿಷನರೇ ಆಗಲಿ, ಯಾರೇ ಆಗಲಿ, ಅಧಿಕಾರ ಸ್ಥಾನದಲ್ಲಿ ಕೂತಿರುವವರು ಎಲ್ಲರ ಅಭಿಪ್ರಾಯವನ್ನೂ ತೆಗೆದುಕೊಂಡು ಕನಿಕರ ದೃಷ್ಟಿಯಿಂದ ಅನುಕೂಲ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಸದಸ್ಯರು ಅನೇಕರು ಇಲ್ಲಿ ಏನು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೋ, ಅವೆಲ್ಲವನ್ನೂ ನಾನು ಪುಷ್ಟೀಕರಿಸುತ್ತೇನೆ. ಹಿಂದೆ ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀಮಾನ್ ನಿಜಲಿಂಗಪ್ಪನವರೇ ಈ ಸದನದಲ್ಲಿ ವ್ಯವಸಾಯವನ್ನು ಒಂದು ಕೈಗಾರಿಕೆಯನ್ನಾಗಿ ಪರಿಗಣಿಸಬೇಕೆಂದು ಹೇಳಿದ್ದು ನನಗೆ ಈಗ ಜ್ಞಾಪಕಕ್ಕೆ ಬರುತ್ತಿದೆ. ಅವರು ಹೇಳಿದಂತೆ ಈ ವ್ಯವಸಾಯವನ್ನು ಕೈಗಾರಿಕೆಯ ಹಾಗೆ ಭಾವಿಸಬೇಕೆಂದು ನಾನು ಹೇಳುತ್ತೇನೆ. 6.7 ಪೈಸೆಯಂತೆ ಇಂಡಸ್ಟ್ರಿಗೋಸ್ಕರವಾಗಿ ಕೊಡುತ್ತಿದ್ದಾರೆ. ಆದರೆ ನಮ್ಮ ರೈತರಿಗೆ ಇಲ್ಲಿ ನಾಲ್ಕು ತಿಂಗಳುಗಳ ಕಾಲ ನೀರು ಇದ್ದರೆ ಆರು ತಿಂಗಳುಗಳು ನೀರು ಇಲ್ಲ. ಅವರು 24 ರೂಪಾಯಿಗಳನ್ನು ಕೊಡುವುದು ಬಹಳ ಕಷ್ಟ. ಅವರು ಈಗಿರತಕ್ಕ ತೆರಿಗೆಗಳ ಹೊರೆಯನ್ನು ಹೊರುವುದಕ್ಕೆ ಕಷ್ಟಪಡುತ್ತಿದ್ದಾರೆ. ಅವರು ಬತ್ತ ಬೆಳೆದುದನ್ನು ಲೆವಿ ರೂಪವಾಗಿ ತೆಗೆದುಕೊಂಡು ಅರ್ಬನ್ ಏರಿಯಾದಲ್ಲಿ ಜನರಿಗೆ ಒದಗಿಸಿಕೊಡುವಂಥ ಪುಣ್ಯ ಕೆಲಸವನ್ನು ಮಾಡುತ್ತಿದ್ದಾರೆ. ಅರ್ಬನ್ ಏರಿಯಾಗಳಲ್ಲಿರುವ ಜನತೆ ಅದನ್ನು ತಿಳಿದುಕೊಳ್ಳಬೇಕು. ಅವರು ಅರ್ಬನ್ ಜನತೆಗೆ ಊಟಕ್ಕಾಗಿ ಆಹಾರವನ್ನು ಕಷ್ಟಪಟ್ಟು ಬೆಳೆಸಿ ಕೊಡುತ್ತಿದ್ದಾರೆ. ಅಂದಮೇಲೆ ಅವರು ಕೂಡ ಸ್ಟ್ರೈಕ್ ಮಾಡುತ್ತೇವೆಂದು ಎದ್ದರೆ, ನಮ್ಮ ಗತಿಯೇನೆಂಬುದನ್ನು ನಮ್ಮ ಜನತೆ ತಿಳಿಯಬೇಕು. ಏಕೆಂದರೆ ನಮ್ಮಲ್ಲಿ ಶೇಕಡಾ 85ರಷ್ಟು ರೈತರು ಇದ್ದಾರೆ. ಅವರು ಈಗಾಗಲೇ ಮಾನ್ಯ ಮಂತ್ರಿಗಳಿಗೆ ತಂತಿಗಳನ್ನು ಕಳುಹಿಸಿದ್ದಾರೆ. ಹಳ್ಳಿಗಳಿಂದ ಈಗಾಗಲೇ 500 ತಂತಿಗಳು ಒಬ್ಬೊಬ್ಬ ಸದಸ್ಯರಿಗೆ ಬಂದಿದೆ. ಈ ಇಲಾಖೆ ಬಹಳ ಪ್ರಾಮುಖ್ಯವಾದುದು. ಇದು ದೇಶದ ಜೀವಾಳ. ಇದಕ್ಕೆ ಯಾವುದಾದರೂ ರೀತಿಯಿಂದ ಸಬ್ಸಿಡೈಜ್ ಮಾಡಬೇಕು. ಸರ್ಕಾರದವರು ಅಗತ್ಯವಿಲ್ಲದ ಕೆಲಸಕಾರ್ಯಗಳಿಗೆ ಬಹಳವಾಗಿ ಖರ್ಚುಮಾಡುತ್ತಿದ್ದಾರೆ. ಅದನ್ನು ನಿಲ್ಲಿಸಿ ಈ ಬೋರ್ಡಿಗೆ ಅದಷ್ಟು ಹಣವನ್ನು ಒದಗಿಸಬೇಕು. ಸರ್ಕಾರ ಮತ್ತು ಬೋರ್ಡಿನವರು ರೈತರ ಹಿತದೃಷ್ಟಿ ಇಟ್ಟುಕೊಂಡು ಇದರಲ್ಲಿ ಏನಾದರೂ ಅವರಿಗೆ ಉಪಕಾರ ಮಾಡದಿದ್ದರೆ ಮಾನ್ಯ ಸದಸ್ಯರು ಬಹಳ ಇಕ್ಕಟ್ಟಿನ ಪರಿಸ್ಥಿತಿಗೆ ಬೀಳಬೇಕಾಗುತ್ತದೆ. ರೈತರ ಪ್ರತಿನಿಧಿಗಳಾಗಿ ಹೋದವರು ನೀವು ಅಸೆಂಬ್ಲಿಯಲ್ಲಿ ಏನು ಮಾಡಿದ್ದೀರಿ ಎಂದು ಕೇಳುತ್ತಾರೆ. ಆದುದರಿಂದ ವಿದ್ಯುಚ್ಛಕ್ತಿಯ ದರವನ್ನು ಆದಷ್ಟು ಕಡಿಮೆ ಮಾಡುವುದಕ್ಕೆ ಪ್ರಯತ್ನಪಡಬೇಕು. ಸರ್ಕಾರದವರು ಅದನ್ನು ಕಾರ್ಯಗತ ಮಾಡಬೇಕು. ಇದು ಸಾಧ್ಯವಿಲ್ಲದಿದ್ದರೆ ಯಾವುದಾದರೂ ಒಂದು ರೂಪದಲ್ಲಿ ಸಬ್ಸಿಡಿ ಕೊಟ್ಟು ರೈತರಿಗೆ ಸಹಾಯ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಬಹಳ ಕಳಕಳಿಯಿಂದ ರೈತರ ಪರವಾಗಿ ಹೇಳಲಿಚ್ಛಿಸುತ್ತೇನೆ. ಈಗ ರೈತರಿಗೆ ಅವರ ಪಂಪು ಸೆಟ್ಟಿಗೆ ಎಲೆಕ್ಟ್ರಿಸಿಟಿ ಸಿಗಬೇಕಾದರೆ ಅವರು ಅದಕ್ಕಾಗಿ ಎಷ್ಟು ಕಷ್ಟಪಡುತ್ತಾರೆ. ಮತ್ತು ಅವರು ಎಷ್ಟು ನಷ್ಟಪಡುತ್ತಾರೆಂಬುದನ್ನು ನಾನು ಇಲ್ಲಿ ವಿವರಿಸಬೇಕಾಗಿಲ್ಲ. ಅದು ಮಾನ್ಯ ಸದಸ್ಯರಿಗೇ ಗೊತ್ತಿದೆ. ನೀವು ನಷ್ಟದಿಂದ ಕೊಡಿ ಎಂದು ನಾನು ಹೇಳುತ್ತಾ ಇಲ್ಲ. ಆದರೆ ರೈತರಿಗೆ ಕಷ್ಟಕೊಡಬೇಡಿ. ಅವರಿಗೆ ಸುಲಭ ದರದಲ್ಲಿ ಎಲೆಕ್ಟ್ರಿಸಿಟಿ ಸಿಗುವಂತೆ ಮಾಡುವುದು ಸರ್ಕಾರದ ಮತ್ತು ಬೋರ್ಡಿನ ಜವಾಬ್ದಾರಿ ಇದೆ. ಇದರಲ್ಲಿ ಯಾವ ರೀತಿ ನಷ್ಟವಾಗುತ್ತಿದೆ, ಏನು ಕಾರ್ಯಕ್ರಮ ತೆಗೆದುಕೊಂಡರೆ ಉಳಿತಾಯ ಮಾಡಬಹುದೆಂಬುದನ್ನು ಪರಿಶೀಲಿಸಿ ನಮ್ಮ ರೈತರಿಗೆ ಆದಷ್ಟು ಸಹಾಯ ಮಾಡಬೇಕೆಂದು ಮತ್ತೊಮ್ಮೆ ಕಳಕಳಿಯಿಂದ ಬೇಡಿ, ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರನೇಕರು, ಈ ವಿದ್ಯುಚ್ಛಕ್ತಿಯ ದರ ಏರಿಕೆಯ ವಿಚಾರದಲ್ಲಿ ಸಾಕಷ್ಟು ಪ್ರತಿಭಟನೆಯನ್ನು ಮತ್ತು ಇದರಿಂದಾಗತಕ್ಕ ಅನಾಹುತವನ್ನು ಸಾಕಷ್ಟು ಹೇಳಿದ್ದಾರೆ.

ನಾನಾದರೂ ಈ ಬೋರ್ಡನ್ನು ಭಸ್ಮಾಸುರನಿಗೆ ಹೋಲಿಸುತ್ತೇನೆ. ಇವತ್ತು ಬೋರ್ಡ ಕೈಹಾಕಿದ ಯಾವುದೇ ವಿಚಾರವಾದರೂ ಕೂಡ, ನಾಶವಾಗುವುದಲ್ಲದೆ, ಒಳ್ಳೆಯದಾಗುವುದಿಲ್ಲ. ಎಲೆಕ್ಟ್ರಿಸಿಟಿ ಬೋರ್ಡು, ಟ್ರಸ್ಟ್ ಬೋರ್ಡು, ವಾಟರ್ ಸಪ್ಲೈ ಬೋರ್ಡು ಮತ್ತು ಇದರ ಜೊತೆಗೆ ಕಾರ್ಪೊರೇಷನ್ ಇವೇ ಅದಕ್ಕೆ ಸಾಕ್ಷಿ. ಸರ್ಕಾರದವರು ನಡೆಸುತ್ತಿದ್ದಾಗ ಲಾಭವಾಗುವುದಕ್ಕೆ ಏನು ಕಾರಣ ಮತ್ತು ಬೋರ್ಡಿನವರು ಬಂದಾಗ ಏಕೆ ನಷ್ಟವಾಯಿತು, ಇದಕ್ಕೆ ಕಾರಣವೇನು ಎಂಬುದನ್ನು ನೋಡಬೇಕು. ಬೋರ್ಡಿನ ಅಧಿಕಾರಿಗಳನ್ನು ಪೂರ್ಣವಾಗಿ ಟೀಕೆ ಮಾಡುತ್ತಾ ಇಲ್ಲ. ಏಕೆಂದರೆ ಇವರು ಹಿಂದೆ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ಮಾಡುತ್ತಿದ್ದವರು. ಆದರೆ ಆಗ ಡಿಪಾರ್ಟ್‌ಮೆಂಟ್ ಚೆನ್ನಾಗಿ ನಡೆದಿರುವುದಕ್ಕೆ ಏನು ಕಾರಣ? ಮತ್ತು ಇವತ್ತು ಇವರು ಜನರಿಗೆ ಕಿರುಕುಳ ಕೊಡುವುದಕ್ಕೆ ಏನು ಕಾರಣವೆಂಬುದನ್ನು ನಾವು ನೋಡಬೇಕಾಗಿದೆ. ಇವತ್ತು ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಅನೇಕ ವಿಧವಾದಂತಹ ನಷ್ಟವಾಗಲು ಮುಖ್ಯವಾಗಿ ಸರ್ಕಾರದವರೇ ಕಾರಣರು. ಇದಕ್ಕೆ ಸರ್ಕಾರದ ನೀತಿಯೇ ಕಾರಣವೆಂದು ಹೇಳಬೇಕಾಗಿದೆ. ಸರ್ಕಾರದವರು ಏನು ಮಾಡಿದ್ದಾರೆಂದರೆ, ತಮ್ಮ ಅಧಿಕಾರ ನಡೆಯಬೇಕು, ತಾವು ಹೇಳಿದಂತೆ ನಡೆಯಬೇಕೆಂದು ಮಾಡಿದ್ದಾರೆ. ಕಷ್ಟ ಬಂದಾಗ ಸ್ಟ್ಯಾಚುಟರಿ ಬೋರ್ಡು ಎಂದು ಇಡುತ್ತಾರೆ. ಇವರು ತಮ್ಮವರನ್ನು ಅಲ್ಲಿ ಇಡುವುದಕ್ಕೆ, ತಮ್ಮವರಿಗೆ ಲಾಭ ಮಾಡುವುದಕ್ಕೆ, ಈ ಬೋರ್ಡನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಮುಖ್ಯವಾಗಿ ಬೋರ್ಡಿನವರು ಈ ರೂರಲ್ ಎಲೆಕ್ಟ್ರಿಫಿಕೇಶನ್ ತೆಗೆದುಕೊಂಡಿದ್ದರಿಂದ ಈ ನಷ್ಟವನ್ನು ಸರಿದೂಗಿಸುವುದಕ್ಕೆ ರೇಟ್ ಹೆಚ್ಚಿಸಿದ್ದು ಎಂದು ಹೇಳುತ್ತಾರೆ. ನಮ್ಮ ಹಳ್ಳಿಗಳಿಗೆ ಆಗತಕ್ಕ ತೊಂದರೆಗಳನ್ನು ನಮ್ಮ ಸದಸ್ಯರನೇಕರು ಹೇಳಿದ್ದಾರೆ. ಹಳ್ಳಿಯವರಿಂದ ಇವತ್ತು ನಾವು ಬದುಕುತ್ತಿದ್ದೇವೆ. ಹಳ್ಳಿಯವರಿಂದ ಜನ ಊಟ ಮಾಡುತ್ತಿದ್ದಾರೆ ಮತ್ತು ನಾನು ಅವರಿಗೆ ಉಪಕಾರ ಮಾಡಬೇಡಿ ಎಂದು ಹೇಳುತ್ತಿಲ್ಲ. ಆದರೆ ನಮ್ಮ ಪಟ್ಟಣವನ್ನು ಕೂಡ ಹಳ್ಳಿಯವರ ಜೊತೆಗೆ ಅವ್ಯವಸ್ಥೆಗೆ ತೆಗೆದುಕೊಂಡು ಹೋಗಬೇಡಿ. ಸರ್ಕಾರ ಎಲೆಕ್ಟ್ರಿಸಿಟಿ ಟ್ಯಾಕ್ಸ್ ತೆಗೆದುಕೊಳ್ಳುತ್ತದೆ, ಸೇಲ್ಸ್ ಟ್ಯಾಕ್ಸ್ ತೆಗೆದುಕೊಳ್ಳುತ್ತದೆ, ಮತ್ತು ಕೋಟ್ಯಾಂತರ ರೂಪಾಯಿ ಬಡ್ಡಿ ರೂಪದಲ್ಲಿ ತೆಗೆದುಕೊಳ್ಳುತ್ತದೆ. ಹಳ್ಳಿಗಳನ್ನು ಉದ್ಧಾರಮಾಡುವುದಕ್ಕೆ ಸಬ್ಸಿಡಿ ಕೊಡಬೇಕೇ ವಿನಹ ಬೇರೆ ಏನೂ ಮಾಡುವುದು ಸರಿಯಲ್ಲ. ಹಾವನ್ನು ಹೊಡೆದು ಹದ್ದಿಗೆಹಾಕಿದಂತೆ ಮಾಡುವುದು ಸರಿಯಲ್ಲ. ಇವತ್ತು ಶರಾವತಿಯಲ್ಲಿ ಮತ್ತು ಜೋಗ್‌ನಲ್ಲಿ ಉಂಟಾಗತಕ್ಕ ಉತ್ಪನ್ನ ಒಂದಕ್ಕೆ ನಾಲ್ಕರಷ್ಟು ಹೆಚ್ಚಾಗಿದೆ. ಈ ಉತ್ಪನ್ನದ ಖರ್ಚುಗಳಿಗನುಗುಣವಾಗಿ ಅದರ ದರವನ್ನು ಫಿಕ್ಸ್ ಮಾಡಬೇಕು. ಅವರು ಕೊಡತಕ್ಕ ಬಡ್ಡಿ ಮತ್ತು ಅವರ ಆಸ್ತಿಪಾಸ್ತಿಗಳನ್ನು ನೋಡಬೇಕು. ಸರ್ಕಾರದವರು ಅವರಿಗೆ ಎಷ್ಟು ಆಸ್ತಿಪಾಸ್ತಿ ಕೊಟ್ಟಿದ್ದಾರೆ, ಮತ್ತು ಅದರ ಮೇಲೆ ಬಡ್ಡಿ ಕೊಡುತ್ತಾರೆಂಬುದನ್ನೂ ವಿಮರ್ಶೆ ಮಾಡಬೇಕು. ಅದೇ ರೀತಿ ಇವತ್ತು ನಿಮ್ಮ ಎಸ್ಟ್ಯಾಬ್ಲಿಷ್‌ಮೆಂಟ್ ಯದ್ವಾತದ್ವಾ ಹೋಗಿದೆ. ಅದನ್ನು ಕೂಡ ಪರಿಶೀಲನೆ ಮಾಡಬೇಕು. ಇವತ್ತು ಇಲ್ಲಿ ಬೇಕಾದಷ್ಟು ಆಫೀಸರುಗಳು ಇದ್ದಾರೆ. ಅವರನ್ನು ಕಡಿಮೆ ಮಾಡಬೇಕು. ಇದರ ಜೊತೆಗೆ ಮಾನ್ಯಸದಸ್ಯರನೇಕರು ಹೇಳಿದ ಹಾಗೆ ಬೇಕಾದಷ್ಟು ಜನರು ವಿದ್ಯುಚ್ಛಕ್ತಿಯನ್ನು ಕದ್ದು ಉಪಯೋಗಿಸುತ್ತಿದ್ದಾರೆ. ಇದಕ್ಕೆ ಎಲೆಕ್ಟ್ರಿಸಿಟಿ ಬೋರ್ಡಿನ ಅಧಿಕಾರಿಗಳ ಬೆಂಬಲ ಇದೆ. ಇದನ್ನು ಹಲವು ಸದಸ್ಯರು ಇಲ್ಲಿ ಹೇಳಿದ್ದಾರೆ. ಇವತ್ತು ಜನರೇಟ್ ಆಗತಕ್ಕ ಪವರನ್ನು ನಾವು ಪೂರ್ತಿಯಾಗಿ ಉಪಯೊಗಿಸಿಕೊಳ್ಳಬೇಕು. ಅರ್ದಂಭರ್ಧ ಉಪಯೋಗಿಸಿಕೊಳ್ಳದೆ, ಪೂರ್ತಿಯಾಗಿ ಉಪಯೋಗಿಸಿಕೊಳ್ಳಬೇಕು; ಮತ್ತು ಈಗ ಆಗತಕ್ಕ ಅನ್ ಅಥರೈಸ್‌ಡ್ ಟ್ಯಾಪಿಂಗ್ ಏನಿದೆ, ಅದನ್ನು ತಪ್ಪಿಸಬೇಕು. ಈ ರೀತಿಯೆಲ್ಲಾ ಮಾಡಿ ಆದ ನಷ್ಟವನ್ನು ತುಂಬಬೇಕೇ ವಿನಃ ಅದನ್ನು ಯಾರ ಮೇಲಾದರೂ ಹಾಕಬಾರದು. ಬೆಂಗಳೂರಿಗೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಈಗಾಗಲೇ ಇವರ ವರಮಾನದ ಸುಮಾರು ಕಾಲು ಭಾಗ ಉತ್ಪತ್ತಿಯಾಗುತ್ತಿದೆ. ನೀವು ದರ ಹೆಚ್ಚಿಸಿರುವುದರಿಂದ ಕಾರ್ಪೊರೇಷನ್ನಿನವರು 13 ಲಕ್ಷ ಕೊಡುತ್ತಿದ್ದಾರೆ. ವಾಟರ್ ಅಂಡ್ ಸಿವರೇಜ್ ಬೋರ್ಡಿನವರು 32 ಲಕ್ಷ ಕೊಡುತ್ತಿದ್ದಾರೆ. ಆ ಮೇಲೆ ಸ್ಟ್ರೀಟ್ ಲೈಟ್, ವಾಟರ್ ಸಪ್ಲೈಸ್ ಇದಕ್ಕೆಲ್ಲಾ ಪವರ್ ರೇಟ್ ಜಾಸ್ತಿಯಾದಾಗ, ಅದು ಇನ್‌ಡೈರೆಕ್ಟಾಗಿ ಜನರ ಮೇಲೆ ಬೀಳುತ್ತದೆ. ಅದರ ಜೊತೆಗೆ ಗೃಹ ಬಳಕೆಯ ವಿದ್ಯುಚ್ಛಕ್ತಿಗೂ ಕೂಡ ಒಂದಕ್ಕೆ ಎರಡರಷ್ಟು, ಮೂರರಷ್ಟು ಕೊಡಬೇಕಾದ ಸಂದರ್ಭ ಬರುತ್ತದೆ. ಇವತ್ತು ಸಿಟಿಯಲ್ಲಿ ಅನೇಕ, ಪ್ರಿಂಟಿಂಗ್ ಪ್ರೆಸ್ಸುಗಳು ಇವೆ, ಹ್ಯಾಂಡ್ ಲೂಮ್ಸ್ ಇವೆ, ಸಣ್ಣ ಕೈಗಾರಿಕೆಗಳು ಇವೆ, ಇವೆಲ್ಲಾ ಪವರ್ ಉಪಯೋಗಿಸುವಾಗ ಇದಕ್ಕೆ ಕಡಿಮೆ ದರದಲ್ಲಿ ಕೊಡಬೇಕು. ಏಕೆಂದರೆ ಒಂದು ಕಡೆ ನೀವು ಜನರ ಜೀವನ ಮಟ್ಟ ಇಳಿಸಬೇಕೆಂದು ಹೇಳುತ್ತಿದ್ದೀರಿ ಇನ್ನೊಂದು ಕಡೆ ಈ ರೀತಿ ರೇಟನ್ನು ಜಾಸ್ತಿ ಮಾಡುತ್ತಿದ್ದೀರಿ. ಇದರಿಂದ ಜನರ ಹಿತದೃಷ್ಟಿಯನ್ನು ಕಾಪಾಡಿದ ಹಾಗೆ ಆಗುವುದಿಲ್ಲ. ಒಟ್ಟಿನಲ್ಲಿ ಎಲೆಕ್ಟ್ರಿಸಿಟಿ ಬೋರ್ಡು ಆದ ಮೇಲೆ ಜನರಿಗೆ ಏನಾದರೂ ಸೌಕರ್ಯವಾಗಿದೆಯೇ ಅಂದರೆ ಅದು ಇಲ್ಲ. ಇವತ್ತು

(ಶ್ರೀ ಟಿ. ಆರ್. ಶಾಮಣ್ಣ)

ಬೆಂಗಳೂರಿನಲ್ಲಿ ಎಷ್ಟೋ ಅವ್ಯವಸ್ಥೆಯಾಗಿದೆ. ಇವರ ಲೆಕ್ಕಪತ್ರಗಳು ಸರಿಯಾಗಿಲ್ಲ. ಇವತ್ತು ರೈತರಿಗೆ ಅನುಕೂಲವಾಗಬೇಕೆಂದು ಶೇಕಡಾ 90 ಜನರು ಹೇಳುತ್ತಿದ್ದಾರೆ. ಆದರೆ ಆ ನಷ್ಟವನ್ನು ನಮ್ಮಿಂದ ವಸೂಲು ಮಾಡುವುದು ಬೇಡ. ರೂರಲ್ ಎಲೆಕ್ಟ್ರಿಫಿಕೇಶನ್‌ನಲ್ಲಿ ಆಗತಕ್ಕಂತಹ ನಷ್ಟವನ್ನು ಸರ್ಕಾರದವರು ಭರ್ತಿ ಮಾಡಬೇಕು ಮತ್ತು ಇನ್ನು ಬೇರೆ ರೀತಿಯಲ್ಲಿ ನಷ್ಟವಾಗಿದ್ದರೆ, ಅದನ್ನು ನಮ್ಮಿಂದ ವಸೂಲು ಮಾಡಬಾರದು. ಮತ್ತು ಇಲ್ಲಿ ಆಗತಕ್ಕ ಮಿಸ್‌ಮ್ಯಾನೇಜ್‌ಮೆಂಟನ್ನು ಕಡಿಮೆ ಮಾಡಿ, ಆಗತಕ್ಕ ನಷ್ಟವನ್ನು ಕಡಿಮೆ ಮಾಡಬೇಕು. ಮತ್ತು ಯಾವುದೋ ಕಾಲದಲ್ಲಿ ಈ ದರವನ್ನು ಫಿಕ್ಸ್ ಮಾಡಿದ್ದು ಎಂದು ಹೇಳುತ್ತಿದ್ದಾರೆ. ಆದರೆ, ಅದೇ ಸಮಯಕ್ಕೆ, ಹಿಂದೆ ಎಷ್ಟು ಪವರ್ ಜನರೇಟ್ ಆಗುತ್ತಿತ್ತು, ಈಗ ಎಷ್ಟು ಆಗುತ್ತಿದೆ ಎಂಬುದನ್ನೂ ಕೂಡ ನೋಡಬೇಕು. ಆದ್ದರಿಂದ ಹಳ್ಳಿಯ ವರಿಗೆ ಅನುಕೂಲ ಮಾಡಿಕೊಡಬೇಕೆಂದು ಇಲ್ಲಿಯ ಜನರಿಂದತುಂಬಿಕೊಳ್ಳುವುದು ಬೇಡ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6–30 P.M.

†ಶ್ರೀಮತಿ ನಾಗಮ್ಮ.—(ಕಮ್ಮಲ) ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಮುಂದಿಟ್ಟಿರತಕ್ಕ ಎಲೆಕ್ಟ್ರಿಸಿಟಿಬೋರ್ಡಿನ ಫೈನಾನ್ಷಿಯಲ್ ಸ್ಟೇಟ್‌ಮೆಂಟಿನ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟ ಮೊದಲನೆಯದಾಗಿ ನಾನು ಹೇಳುವುದಾದರೆ ಈಗ ವಿದ್ಯುಚ್ಛಕ್ತಿ ಬೋರ್ಡಿನವರು ರೈತರು ಪಂಪುಸೆಟ್ಟುಗಳಿಗೆ ಉಪಯೋಗಿಸತಕ್ಕ ವಿದ್ಯುಚ್ಛಕ್ತಿಯ ಮೇಲೆ ಹೆಚ್ಚಿನ ದರವನ್ನು ಹಾಕಿದ್ದಾರೆ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ. ರೈತರು ಪಂಪುಸೆಟ್ಟುಗಳನ್ನು ಕೊಂಡುಕೊಂಡದ್ದೇ ಒಂದು ದೊಡ್ಡ ತಪ್ಪಾಗಿದೆ ಎನ್ನುವಂತಾಗಿದೆ. ಎಲೆಕ್ಟ್ರಿಸಿಟಿ ಬೋರ್ಡಿನವರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ನಾವೆಲ್ಲರೂ ಪದೇಪದೇ ಹೇಳುತ್ತಿದ್ದೇವೆ. ಒಂದು ಪಂಪು ಸೆಟ್ಟಿಗೆ ಮಿನಿಮಮ್ ಚಾರ್ಜಸ್ 48 ರೂಪಾಯಿಗಳನ್ನು ರೈತ ಕೊಡಬೇಕೆಂದರೆ ಅವನು ಎಲ್ಲಿಂದ ತಂದು ಕೊಡಬೇಕು ? ಈ ರೀತಿ ರೈತರು ಉಪಯೋಗಿಸತಕ್ಕ ವಿದ್ಯುಚ್ಛಕ್ತಿಗೆ ದರವನ್ನು ಏರಿಸಿರುವುದು ಸರಿಯಲ್ಲ, ಇದನ್ನು ಕಡಿಮೆ ಮಾಡಬೇಕು, ಇಲ್ಲದೇ ಹೋದರೆ ರೈತ ಮುಂದಕ್ಕೆ ಬರುವುದಕ್ಕಾಗುವುದಿಲ್ಲ ಎಂದು ಹೇಳಿ ವಿದ್ಯುಚ್ಛಕ್ತಿ ಬೋರ್ಡಿನವರಿಗೆ ನಾವು ಮನವಿಯನ್ನು ಕೊಟ್ಟರೂ ಕೂಡ ಅದರ ಬಗ್ಗೆ ವಿದ್ಯುಚ್ಛಕ್ತಿ ಬೋರ್ಡಿನವರು ಸೂಕ್ತ ಕ್ರಮವನ್ನು ತೆಗೆದುಕೊಂಡು ರೈತರಿಗೆ ಯಾವರೀತಿಯ ಅನುಕೂಲತೆಯನ್ನು ಮಾಡಿಕೊಟ್ಟ ಹಾಗೆ ಕಾಣುವುದಿಲ್ಲ. ಇವೊತ್ತಿನ ದಿವಸ ರೈತರಿಂದ ದೇಶ ಉದ್ಧಾರವಾಗಬೇಕು. ಆದ್ದರಿಂದ ರೈತ ಚೆನ್ನಾಗಿದ್ದರೆ ಎಲ್ಲರೂ ಚೆನ್ನಾಗಿರುತ್ತಾರೆ. ರೈತನಿಗಾಗಿ ನೌಕರರು ಇರುವುದು. ರೈತರು ದುಡಿದಂತಹ ಹಣದಿಂದ ನೌಕರರಿಗೆ ಸಂಬಳ ಸಾರಿಗೆಗಳನ್ನು ಕೊಡಲಾಗುತ್ತಿದೆ. ಹೀಗಿರುವಾಗ ವಿದ್ಯುಚ್ಛಕ್ತಿ ಬೋರ್ಡಿನವರು ರೈತನು ಉಪಯೋಗಿಸತಕ್ಕಂಥ ವಿದ್ಯುಚ್ಛಕ್ತಿಗೆ ಹೆಚ್ಚಿನ ದರವನ್ನು ಹಾಕಿರತಕ್ಕದ್ದು ಸರಿಯೇ ಎಂದು ನಾನು ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಒತ್ತಾಯಪೂರ್ವಕವಾಗಿ ಕೇಳುತ್ತೇನೆ. ರೈತರು ಚೆನ್ನಾಗಿದ್ದರೆ ಎಲ್ಲರೂ ಚೆನ್ನಾಗಿರುತ್ತಾರೆ. ರೈತ ಚೆನ್ನಾಗಿಲ್ಲದಿದ್ದರೆ ನೌಕರರಿಗೆ ಸಂಬಳ ಎಲ್ಲಿಂದ ದೊರೆಯುತ್ತದೆ. ಆದ್ದರಿಂದ ಎಲ್ಲರೂ ಸೇರಿ ರೈತರನ್ನು ಉದ್ಧಾರ ಮಾಡುವಂತಹ ಕಾರ್ಯವನ್ನು ಮಾಡಬೇಕು. ಇವೊತ್ತು ಒಬ್ಬ ರೈತ ಒಂದು ಬಾವಿಗೆ ಪಂಪು ಸೆಟ್ಟು ಹಾಕಿಸಿ ಅದಕ್ಕೆ ವಿದ್ಯುಚ್ಛಕ್ತಿಯನ್ನು ಪಡೆಯಬೇಕಾದರೆ ಅವನು ವಿದ್ಯುಚ್ಛಕ್ತಿ ಬೋರ್ಡಿಗೆ ಎಷ್ಟು ಸಾರಿ ಅಲೆದಾಡಬೇಕು, ಎಷ್ಟು ಅವತಾರ ಆಡಬೇಕು, ಎಷ್ಟು ಕಷ್ಟಪಡಬೇಕು ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಈ ರೀತಿಯಾಗಿ ರೈತ ತನ್ನ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳಬೇಕಾದರೆ ಬೋರ್ಡ್ ಏತಕ್ಕೆ ಇರಬೇಕು ? ರಿಟೈರ್ ಆದಂಥವರು ಈ ಎಲೆಕ್ಟ್ರಿಸಿಟಿ ಬೋರ್ಡಿಗೆ ಚೇರ್ಮನ್ ಆಗಿ ಬಂದಿರುವುದರಿಂದ ಈರೀತಿ ರೈತರಿಗೆ ತೊಂದರೆಯಾಗುತ್ತಿದೆ ಎಂದು ಗೊತ್ತಾಗಿದೆ. ಅವರಿಗೆ ರೈತರ ಕಷ್ಟಸುಖಗಳೇನು ಎಂಬುದು ಚೆನ್ನಾಗಿ ಗೊತ್ತಿಲ್ಲ ಎಂದು ಕಾಣುತ್ತದೆ. ನಿಜ ವಾಗಿಯೂ ಅವರಿಗೆ ರೈತರ ಕಷ್ಟಸುಖಗಳ ಅರಿವು ಆಗಿದ್ದರೆ ಇಷ್ಟು ಹೆಚ್ಚಿನ ದರಗಳನ್ನು ರೈತರು ಉಪಯೋಗಿಸತಕ್ಕಂಥ ವಿದ್ಯುಚ್ಛಕ್ತಿಯಮೇಲೆ ಅವರು ಹಾಕುತ್ತಿರಲಿಲ್ಲ ಎಂದು ನಾವು ಹೇಳ ಬೇಕಾಗಿದೆ. ರೈತರ ಕಷ್ಟಸುಖಗಳೇನು ಎಂಬುದನ್ನೆಲ್ಲಾ ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಈ ದೃಷ್ಟಿಯಿಂದ ರೈತರಿಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವುದಕ್ಕೆ ಹೆಚ್ಚಿನ ದರವನ್ನು ಹಾಕಿರ ತಕ್ಕದ್ದು ಸರಿಯಲ್ಲ ಎಂದು ನಾನು ಹೇಳಬಯಸುತ್ತೇನೆ. ಸಾಧ್ಯವಾದ ಮಟ್ಟಿಗೆ ರೈತರಿಗೆ ಅನುಕೂಲ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದಕ್ಕೆ ಬದಲಾಗಿ ರೈತರನ್ನು ಭೂಮಿಗೆ ತುಳಿಯಬೇಕು ಎನ್ನುವಂಥಾದ್ದು ಸರಿಯಲ್ಲ. ರೈತ ನಮ್ಮ ಗುಲಾಮ ಎಂದು ತಿಳಿದುಕೊಳ್ಳತಕ್ಕದ್ದು

ಸರಿಯಲ್ಲ. ಯಾರಾದರೂ ಒಬ್ಬ ರೈತ ಒಂದು ಬಾವಿಗೆ ಪಂಪುಸೆಟ್ಟು ಹಾಕಿಸಿ ಅದಕ್ಕೆ ವಿದ್ಯುಚ್ಛಕ್ತಿ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಅಲ್ಲಿ ಕಂಬ ನೆಡುವುದಕ್ಕೆ, ಎರಡು ತಿಂಗಳು, ತಂತಿ ಎಳೆಯುವುದಕ್ಕೆ 4 ತಿಂಗಳು, ಆಮೇಲೆ ಕನೆಕ್ಷನ್ ಕೊಡುವುದಕ್ಕೆ 4 ತಿಂಗಳು ಈ ರೀತಿಯಾಗಿ ಅವನು ಒಂದು ಪಂಪು ಸೆಟ್ಟಿಗೆ ವಿದ್ಯುಚ್ಛಕ್ತಿ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಒಂದು ವರ್ಷವಾಗುತ್ತದೆ. ಹೀಗಾದರೆ ರೈತರ ಗತಿ ಏನು ? ರೈತ ತನ್ನ ಕೆಲಸವನ್ನು ಮಾಡಿಸಿಕೊಳ್ಳಬೇಕಾದರೆ ಎಷ್ಟು ಜನಗಳ ಹತ್ತಿರ ತಿರುಗಾಡಬೇಕು ? ಸೂಪರ್ ವೈಜರ್, ಅಸಿಸ್ಟೆಂಟ್ ಇಂಜಿನಿಯರ್, ಎಗ್ಸಿಕ್ಯುಟೀವ್ ಇಂಜಿನಿಯರ್ ಹೀಗೆ ಅನೇಕ ಆಫೀಸರುಗಳ ಹತ್ತಿರ ರೈತ ತನ್ನ ಕೆಲಸಮಾಡಿಸಿಕೊಳ್ಳುವುದಕ್ಕಾಗಿ ತಿರುಗಾಡ ಬೇಕಾಗಿದೆ. ರೈತನನ್ನು ಕೇಳುವವರೇ ಇಲ್ಲ. ಮೊದಲು ರೈತ ಉದ್ಧಾರವಾಗಬೇಕು. ರೈತನ ಉದ್ಧಾರವಾದರೆ ದೇಶದ ಉದ್ಧಾರವಾಗುತ್ತದೆ. ಇವೊತ್ತು ನಮ್ಮ ದೇಶದಲ್ಲಿ ನೌಕರರಿಗೆ ಸಂಬಳವನ್ನು ಕೊಡತಕ್ಕವನು, ಅನ್ನವನ್ನು ಕೊಡತಕ್ಕವನು ರೈತ. ಆದ್ದರಿಂದ ರೈತನನ್ನು ಉದ್ಧಾರ ಮಾಡುವ ಕಾರ್ಯದಲ್ಲಿ ವಿದ್ಯುಚ್ಛಕ್ತಿ ಬೋರ್ಡಿನವರು ಮತ್ತು ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ. ರೈತರೆಲ್ಲರೂ ನಮಗೆ ಪತ್ರವನ್ನು ಬರೆಯುತ್ತಿದ್ದಾರೆ ನೀವು ನಮ್ಮಿಂದ ಆರಿಸಿ ಹೋಗಿ ನಮಗೋಸ್ಕರ ವಿಧಾನಸಭೆಯಲ್ಲಿ ಏನು ಕೆಲಸ ಮಾಡುತ್ತಿದ್ದೀರಿ, ನಮ್ಮ ಹಿತ ಸಾಧನೆಯ ಬಗ್ಗೆ ಏನು ನೀವು ಕೆಲಸಮಾಡುತ್ತಿದ್ದೀರಿ ಎಂದು ಕೇಳುತ್ತಿದ್ದಾರೆ. ಅವರಿಗೆ ನಾವು ಜವಾಬು ಕೊಡಬೇಕು. ಈ ದೃಷ್ಟಿಯಿಂದ ನಾನು ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಹೇಳುವುದು ಏನೆಂದರೆ ಈಗ ರೈತರು ಉಪಯೋಗಿಸತಕ್ಕ ವಿದ್ಯುಚ್ಛಕ್ತಿ ಏನಿದೆ ಅದಕ್ಕೆ ಹೆಚ್ಚಿನ ದರವನ್ನು ವಿಧಿಸಿರುವುದು, ಮತ್ತು ಪಂಪುಸೆಟ್ಟುಗಳಿಗೆ ಉಪಯೋಗಿಸತಕ್ಕಂಥ ವಿದ್ಯುಚ್ಛಕ್ತಿಗೆ ಮಿನಿಮಮ್ ಚಾರ್ಜಸ್ 48 ರೂಪಾಯಿಗಳನ್ನು ಕಟ್ಟಬೇಕೆಂದು ವಿಧಿಸಿರುವುದು ಸರಿಯಾದ್ದಲ್ಲ. ಇದನ್ನು ಎಲ್ಲಾ ರೀತಿಯಿಂದಲೂ ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಆ ರೀತಿ ಮಾಡುವುದಾದರೆ ರೈತನ ಉದ್ಧಾರ ಆಗುತ್ತದೆ, ಅವನು ಚೆನ್ನಾಗಿ ಆಗುತ್ತಾನೆ. ರೈತ ಉದ್ಧಾರ ಆದರೆ ದೇಶ ಉದ್ಧಾರ ಆಗುತ್ತದೆ. ರೈತನು ಉಪಯೋಗಿಸುವಂಥ ವಿದ್ಯುಚ್ಛಕ್ತಿಗೆ ದರವನ್ನು ಕಡಿಮೆ ಮಾಡದಿದ್ದರೆ ವಿದ್ಯುಚ್ಛಕ್ತಿ ಬೋರ್ಡಿನವರು ರೈತನಿಗೆ ದ್ರೋಹವನ್ನು ಮಾಡಿದಂತಾಗುತ್ತದೆ. ಈ ದೃಷ್ಟಿಯಿಂದ ರೈತನು ಉಪಯೋಗಿಸುವಂತಹ ವಿದ್ಯುಚ್ಛಕ್ತಿಗೆ ದರವನ್ನು ಕಡಿಮೆ ಮಾಡಬೇಕು, ಮತ್ತು ಪಂಪುಸೆಟ್ಟಿಗೆ ಕಟ್ಟತಕ್ಕಂಥ ಮಿನಿಮಮ್ ಚಾರ್ಜನ್ನೂ ಸಹ ಕಡಿಮೆ ಮಾಡಬೇಕು. ರೈತರಿಗೆ ಯಾರು ದ್ರೋಹ ಮಾಡುತ್ತಾರೆ ಅಂಥವರನ್ನು ತನಿಖೆ ಮಾಡಿ ಅವರಿಗೆ ಶಿಕ್ಷೆ ವಿಧಿಸಬೇಕು. ರೈತನ ವಿಚಾರವಲ್ಲಿ ಸರ್ಕಾರದವರು ಕನಿಕರವನ್ನು ತೋರಿಸಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಅಧ್ಯಕ್ಷರೇ, 1957ರ ಅಕ್ಟೋಬರ್ ತಿಂಗಳಲ್ಲಿ ಸ್ವಾಯತ್ತ ಆಡಳಿತವುಳ್ಳ ಈ ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿ ಸ್ಥಾಪಿತವಾಯಿತು. ಒಂದು ಸುಗಮವಾದ ಸುವ್ಯವಸ್ಥಿತವಾದ ಮತ್ತು ಸರಳವಾದ ಆಡಳಿತವನ್ನು ಜನರಿಗೆ ಒದಗಿಸಬೇಕು, ಸರ್ಕಾರ ಯಾವುದೇ ಒಂದು ಜಂಜಾಟಕ್ಕೆ ಸಿಕ್ಕಬಾರದು. ಯಾರಿಗೆ ಯಾವ ರೀತಿ ವಿದ್ಯುಚ್ಛಕ್ತಿ ದರ ಹಾಕಿದರೆ ಅನುಕೂಲವಾಗುತ್ತದೆ ಎಂಬುದು ವಿಮರ್ಶೆಮಾಡಿ ಸರಿಯಾದ ಆಡಳಿತ ನಡೆಸಲಿ ಎಂಬ ಕಾರಣಗಳಿಂದ ಈ ಬೋರ್ಡನ್ನು ಸರ್ಕಾರದವರು ರಚನೆ ಮಾಡಿದರು. ಈ ಬೋರ್ಡಿನ ಆಡಳಿತ ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭವಾಯಿತು. ಸಾಮಾನ್ಯವಾಗಿ ಹಿಂದೂ ಶಾಸ್ತ್ರದ ಪ್ರಕಾರ ಅಕ್ಟೋಬರ್ ತಿಂಗಳಲ್ಲಿ ಶೂನ್ಯಮಾಸ ಬರುತ್ತದೆ. ಶೂನ್ಯಮಾಸದಲ್ಲಿ ಪ್ರಾರಂಭವಾದ ಎಲ್ಲಾ ಸಂಸ್ಥೆಗಳ ಪಾಡೂ ಕೂಡ ಇದೆ ಏನೋ ಎಂದು ಕಾಣುತ್ತದೆ. ಈ ಒಂದು ಬೋರ್ಡಿನ ಆಡಳಿತದಲ್ಲಿ ಅದಕ್ಷತೆ, ಅನ್ಯಾಯ, ಅನಾಚಾರ, ಭ್ರಷ್ಟಾಚಾರ ಮುಂತಾದವು ನಡೆಯುತ್ತಿದೆ ಎಂದು ಖಂಡನೆ ಇಲ್ಲವೆ ಸುಲಭವಾಗಿ ಹೇಳಬಹುದು. ನಮ್ಮ ಮುಖ್ಯಮಂತ್ರಿಗಳು ವಿದ್ಯುತ್ ದರವನ್ನು ಹೆಚ್ಚು ಮಾಡಿರುವುದರಿಂದ ಸುಮಾರು 2 ಕೋಟಿ ರೂಪಾಯಿಗಳ ಆದಾಯ ಮತ್ತು ಪಂಪ್‌ಸೆಟ್ಟುಗಳ ಕನಿಷ್ಠ ದರವನ್ನು ದ್ವಿಗುಣಗೊಳಿಸಿರುವುದರಿಂದ ಸುಮಾರು 22 ಲಕ್ಷ ರೂಪಾಯಿಗಳ ಆದಾಯ ಬೋರ್ಡಿಗೆ ಬರುತ್ತದೆಂದು ಹೇಳಿದರು. ಪಂಪ್‌ಸೆಟ್ಟುಗಳ ಮೇಲಿನ ಕನಿಷ್ಠ ದರವನ್ನು ಹೆಚ್ಚು ಮಾಡಿದರೆ ರಾಜ್ಯದ ಪ್ರತಿ ಮೂಲೆಯಿಂದಲೂ ಕೂಡ ರೈತರಿಂದ ಪ್ರಬಲ ವಿರೋಧ ಬರುತ್ತದೆ ಎಂಬುದು ಮುಖ್ಯಮಂತ್ರಿಗಳಿಗೆ ಗೊತ್ತು. ದೇಶಕ್ಕೆ ಆಹಾರವನ್ನು ಬೆಳೆದು ಒದಗಿಸುತ್ತಿರುವ ಮತ್ತು ಆ ಒಂದು ಘನತರವಾದ ಜವಾಬ್ದಾರಿಯನ್ನು ಹೊತ್ತಿರುವ ರೈತರಮೇಲೆ ಹೆಚ್ಚಿನ ದರವನ್ನು ಹಾಕಿದರೆ ಪ್ರತಿಭಟನೆ ಬರುತ್ತದೆ ಎಂದು ತಿಳಿದಿದ್ದರೂ ಕೂಡ ಹೆಚ್ಚು ಮಾಡಿದ್ದಾರೆ. ಸದನದಲ್ಲಿರುವ ಸಂಖ್ಯಾಬಲದಮೇಲೆ ಈ ರೀತಿ ದರವನ್ನು ಹೆಚ್ಚು ಮಾಡಿದ್ದಾರೆಂದು ನನಗೆ ಗೊತ್ತಾಗುತ್ತಿದೆ. ಬೋರ್ಡಿನ ಆಡಳಿತ ಮಂಡಲಿಯವರಾದರೂ ಕೂಡ ಈ ರೀತಿ ದರವನ್ನು ಹೆಚ್ಚಿಸುವುದಕ್ಕೆ ಮೊದಲು ಈ ಬಗ್ಗೆ ಆಳವಾಗಿ ಅಭ್ಯಸಿಸಿ ಬೇರೆ ಬೇರೆ ಮೂಲಗಳಿಂದ ವರಮಾನವನ್ನು

(ಶ್ರೀ ಎನ್. ಎ. ಚನ್ನೇಗೌಡ)

ಹೆಚ್ಚಿಸಿಕೊಳ್ಳುವುದಕ್ಕೆ ಇರುವ ಅವಕಾಶಗಳನ್ನು ಗಮನಿಸಬೇಕಾಗಿತ್ತು. ಜನರಿಗೆ ಹೆಚ್ಚಿನ ದರವನ್ನು ವಿಧಿಸದೆ ಈಗ ಬರುತ್ತಿರುವ ವಾರ್ಷಿಕ ಆದಾಯವನ್ನು ಸರಿಯಾಗಿ ವಸೂಲು ಮಾಡಿದ್ದರೆ ಈಗ ಕಡಿಮೆ ಎಂದು ತೋರಿರುವ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದಾಗಿತ್ತು. ಈ ದಿನ ಬೋರ್ಡಿನಲ್ಲಿ ತಜ್ಞರು ಹೆಚ್ಚು ಅಧಿಕಾರದಲ್ಲಿ ಇದ್ದಾರೆ. ಆದರೆ ಅವರಿಗೆ ವ್ಯವಹಾರ ಜ್ಞಾನ ಇಲ್ಲ. ಅವರದು ಪುಸ್ತಕ ಜ್ಞಾನ ಮಾತ್ರ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಹೆಚ್ಚಿನ ತೆರಿಗೆಯನ್ನು ಹಾಕಿದರೆ ಜನರು ಪ್ರತಿಭಟನೆ ಮಾಡುತ್ತಾರೆ ಎಂಬುದನ್ನು ಅವರು ಅರಿತುಕೊಂಡು ಮೂಲ ಉತ್ಪತ್ತಿ ಏನು ಬರುತ್ತಿತ್ತು ಅದನ್ನೇ ಸರಿಯಾದ ರೀತಿಯಲ್ಲಿ ಪಡೆಯುವುದಕ್ಕೆ ಪ್ರಯತ್ನಪಡಬೇಕಾಗಿತ್ತು. ಇದನ್ನು ಬಿಟ್ಟು ಬಡ ರೈತರ ಮೇಲೆ ಹೆಚ್ಚುವರಿ ತೆರಿಗೆಯನ್ನು ಹಾಕಿದ್ದಾರೆ. ರೈತರ ಕಷ್ಟಸುಖ ಗಳನ್ನು ಅವರು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ. ಬೋರ್ಡಿನ ಆಡಳಿತದ ಮೇಲ್‌ತರಗತಿ ಯಲ್ಲಿ ಸಿಬ್ಬಂದಿವರ್ಗ ಬಹಳ ಜಾಸ್ತಿ ಇದೆ. ಬೆಂಗಳೂರಿನಲ್ಲಿಯೇ ಮೂರು ಜನ ಚೀಫ್ ಇಂಜಿ ನಿಯರ್ ಇದ್ದಾರೆ, ಒಬ್ಬರು ಸೂಪರಿಂಟೆಂಡಿಂಗ್ ಇಂಜನಿಯರ್ ಇದ್ದಾರೆ, 12 ಜನ ಎಕ್ಸಿಕ್ಯುಟಿವ್ ಇಂಜನಿಯರ್ಸ್ ಇದ್ದಾರೆ, 28 ಜನ ಅಸಿಸ್ಟೆಂಟ್ ಇಂಜನಿಯರ್ಸ್ ಇದ್ದಾರೆ, 70 ಜನ ಜೂನಿಯರ್ ಇಂಜನಿಯರ್ಸ್ ಇದ್ದಾರೆ. ಮಂಡಲಿಯವರು ವಿದ್ಯುಚ್ಛಕ್ತಿ ರೆವಿನ್ಯೂ ವಸೂಲಿ ಮಾಡಲು ಆರು ಸರ್ಕಲ್ ಮಾಡಿದ್ದಾರೆ. ಮೊದಲು ಡಿವಿಜನ್ ಸಿಸ್ಟಮ್ ಇತ್ತು. ಆಗ ಹೆಚ್ಚಿನ ತನಿಖೆ ಸೌಲಭ್ಯ ಗಳನ್ನು ಒದಗಿಸುವ ವ್ಯವಸ್ಥೆ ಇತ್ತು. ಆದರೆ ಈಗ ತಮ್ಮ ಅನುಕೂಲಕ್ಕಾಗಿಯೇ ಸರ್ಕಲ್‌ವೈಸ್ ಸಿಸ್ಟಮ್ ಆಫ್ ಅಕೌಂಟಿಂಗ್ ಜಾರಿಗೆ ತಂದು ಲೆಕ್ಕಾಚಾರ ಸರಿಯಾಗಿ ಇಡಲಾರದಂತೆ ಮಾಡಿ ಬಿಟ್ಟಿದ್ದಾರೆ. ಸರಿಯಾಗಿ ಲೆಕ್ಕವೇ ಸಿಗುತ್ತಿಲ್ಲ. ಇದರಿಂದ ಹೆಚ್ಚು ನಷ್ಟ ಖರ್ಚು ಇದೆ ಎಂದು ಹೇಳುತ್ತೇನೆ. ಬರುವ ವರಮಾನದಲ್ಲಿಯೇ ತನ್ನ ವರಮಾನವನ್ನು ಹೆಚ್ಚಿಸಿಕೊಳ್ಳುವ ಬಗ್ಗೆ ವಿದ್ಯುಚ್ಛಕ್ತಿ ಮಂಡಲಿ ಯಾವ ರೀತಿ ವಿಫಲವಾಗಿದೆ ಎಂಬ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. 'ಮೈಕೋ' ಫ್ಯಾಕ್ಟರಿ ತೆಗೆದುಕೊಂಡರೆ ಅದಕ್ಕೆ 3370 ಕೆ. ವಿ. ಶಕ್ತಿಯುಳ್ಳ ಟ್ರಾನ್ಸ್‌ಫಾರಮ್ ಇಟ್ಟಿದ್ದಾರೆ. ಲೋಡ್ ಬರ್‍ನ್ 1730 ಕೆ. ವಿ. ಆದರೆ ಲೋಡ್ ನಾಟ್ ಬರ್‍ನ್ 1640 ಕೆ. ವಿ. ಈ ಕಾರಣದಿಂದ ಒಂದು ವರ್ಷಕ್ಕೆ ಬೋರ್ಡಿಗೆ 2 ಲಕ್ಷ ರೂಪಾಯಿ ನಷ್ಟವಾಗುತ್ತದೆ. ಇಂತಹ ಉದಾಹರಣೆಗಳನ್ನು ಇನ್ನೂ ಕೊಡಬಹುದು. ಇಂತಹ ತಪ್ಪುಗಳು ಆಗುತ್ತಿರುವುದು ಅಧಿಕಾರವರ್ಗದವರ ಗಮನಕ್ಕೆ ಬಂದಿಲ್ಲವೇ ಎಂದು ಕೇಳುತ್ತೇನೆ. ಬಂದಿದ್ದರೂ ಏತಕ್ಕೆ ಸುಮ್ಮ ನಿದ್ದಾರೆ. ಇದಕ್ಕಿಂತಲೂ ಅದಕ್ಷತೆಯ ಸಾಕ್ಷಿ ಬೇಕೆ! ನಮ್ಮ ರಾಜ್ಯದಲ್ಲಿ ಮೂರು ಲಕ್ಷ ಪವರ್ ಇನ್ಸ್‌ಟಲೇಷನ್‌ಗಳು ಇವೆ. ದಾವಣಗೆರೆ ಮತ್ತು ದೊಡ್ಡಬಳ್ಳಾಪುರದಲ್ಲಿ 630,1200 ಕ್ರಮಾನು ಸಂಖ್ಯೆಯಲ್ಲಿವೆ. ಆ ಸ್ಥಳಗಳಲ್ಲಿ ಬಹುಮಂದಿ 5 ಎಚ್.ಪಿ. ಮೋಟಾರ್‌ಗಳಿಗೆ ಪರ್ಮಿಷನ್ ತೆಗೆದು ಕೊಂಡು 10 ಎಚ್.ಪಿ. ಮೋಟಾರ್‌ಗಳನ್ನು ಉಪಯೋಗಿಸಿ, ಕಡಿಮೆ ಹಣವನ್ನು ಮಂಡಲಿಗೆ ಕಟ್ಟುತ್ತಿದ್ದಾರೆ. ಈ ವಿಚಾರ ಅಧಿಕಾರವರ್ಗದವರ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ಇದರಿಂದ ಕನಿಷ್ಟಪಕ್ಷ ಬೋರ್ಡಿಗೆ ಒಂದು ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿಗಳ ನಷ್ಟ ವಾಗುತ್ತಿದೆ. ಇನ್ನು ಮೀಟರ್ ಬಗ್ಗೆ ಹೇಳುವುದಾದರೆ ತರತೆಗ್ಗಿಸುವಂತಹ ಕೆಲಸಗಳು ನಡೆ ಯುತ್ತಿವೆ. ಬೆಂಗಳೂರು ನಗರ ಒಂದರಲ್ಲಿಯೇ 25 ಸಾವಿರ ಮೀಟರ್‌ಗಳು ಡಿಫೆಕ್ಟಿವ್ ಪಟ್ಟಿಯಲ್ಲಿವೆ. ಎಂದು ಡಿಸ್‌ಕನೆಕ್ಟ್ ಮಾಡಿದ್ದರೂ ಕೂಡ ಬಹುಭಾಗ ಸರ್ವಿಸ್‌ನಲ್ಲಿ ಇವೆ. ಈ ರೀತಿಯ ಸರ್ವಿಸನ್ನು ಬೋರ್ಡಿನ ನೌಕರರೇ ಕೊಡುತ್ತಿದ್ದಾರೆ. ಈ ರೀತಿಯ ಭ್ರಷ್ಟಾಚಾರ ನಡೆಯುತ್ತಿದೆ. ಇದಕ್ಕೆ ಯಾರು ಜವಾಬ್ದಾರಿ? ಇದರ ಕೊನೆ ಹೇಗೆ ಮಾಡುತ್ತೀರಿ! ಏನಾದರೂ ಕ್ರಮ ತೆಗೆದು ಕೊಂಡಿರುವಿರಾ?

ಇನ್ಸ್‌ಪೆಕ್ಷನ್ ವಿಚಾರದಲ್ಲಿ ನಮ್ಮ ವಿದ್ಯುತ್ ಮಂಡಲಿಯವರು ಬಹಳ ಅದಕ್ಷತೆಯಿಂದ ವರ್ತಿಸು ತ್ತಿದ್ದಾರೆ. ಒಂದೇ ಒಂದು ಉದಾಹರಣೆ ಕೊಡುತ್ತೇನೆ ಆರ್. ಆರ್. ನಂಬರು 93420 ಇದು ಒಬ್ಬ M.S.E.B. ಸರ್ವಿಸ್‌ನಲ್ಲಿರುವ ನೌಕರರ ಮನೆಯದು. ಇಲ್ಲಿ ಪವರು ಉಪಯೋಗವಾಗಿರ ತಕ್ಕದ್ದು 1017 ಯೂನಿಟ್ಟುಗಳು ಎಂದು ಬಿಲ್ ಮಾಡಿದ್ದರು ಮತ್ತು ಇದರ ಹಣ 385·93 ಎಂದು ಕಟ್ಟಬೇಕಾಗಿತ್ತು. ಆದರೆ ಬೋರ್ಡಿನವರಿಗೆ ಸಂದಾಯವಾಗಿರುವುದು ಬರೀ 54 ರೂಪಾಯಿಗಳು ಮಾತ್ರ. ಇದೇ ರೀತಿ ಇಲ್ಲಿನ ಒಬ್ಬರು ಉನ್ನತಾಧಿಕಾರಿಗಳ ಅದಕ್ಷತೆಯಿಂದ ಆರ್. ಆರ್. ನಂಬರು 41958 ಬಾಬ್ತು ಕಳೆದ ಒಂದೂವರೆ ವರ್ಷಗಳಿಂದ ಉಪಯೋಗವಾಗಿರುವ ಪವರು 2400 ಯೂನಿಟ್ಟುಗಳ ಬೆಲೆಸುಮಾರು 696 ರೂಪಾಯಿಗಳು ಕೊಡಬೇಕಾಗಿದ್ದು. ಅವರೆ ಕೊಟ್ಟಿರುವ ಹಣ ಕೇವಲ 70 ರೂಪಾಯಿಗಳು ಮಾತ್ರ ಆಗಿರುತ್ತದೆ. ವಿದ್ಯುಚ್ಛಕ್ತಿ ಮಂಡಲಿಯ ಅಧಿಕಾರಿಗಳು ಅಧಿಕಾರವನ್ನು ದುರುಪಯೋಗ ಮಾಡಿದ್ದಾರೆ. ಅವರು ಕೊಡಬೇಕಾಗಿರುವ ಹಣವನ್ನು ವಿದ್ಯುತ್

ಮಂಡಲಿಯವರು ವಸೂಲು ಮಾಡಲು ಆಗಲಿಲ್ಲ. ಹೀಗೆ ರಾಜ್ಯದಲ್ಲಿ ಬೇಕಾದಷ್ಟು ಪವರಿನ ದುರುಪಯೋಗವಾಗುತ್ತಿದೆ. ಬೇರೆಯವರಾಗಿದ್ದರೆ ಬೇಗನೆ ಡಿಸ್‌ಕನೆಕ್ಟ್ ಮಾಡುತ್ತಿದ್ದರು. ಇಂತಹ ಉದಾಹರಣೆಗಳನ್ನು ಬೇಕಾದಷ್ಟು ಹೇಳಬಹುದು. ಇಂತಹ ದುರಾಡಳಿತಗಾರರಿಂದ ನಷ್ಟವಾಗುವ ಹಣವನ್ನು ವಸೂಲು ಮಾಡದೆ ಮಂಡಲಿಯವರು ದೇಶದ ಬೆನ್ನು ಮೂಳೆಯಾಗಿರುವ ರೈತರ ಮೇಲೆ ಹೆಚ್ಚು ಹೊರೆ ಹಾಕುತ್ತಿದ್ದಾರೆ! ಹೀಗೆ ಹೆಚ್ಚು ಹೊರೆ ರೈತರಮೇಲೆ ಹಾಕಲು ಮಂಡಲಿಗೆ ಧೈರ್ಯವಾದರೂ ಹೇಗೆ ಬಂತು! ಇದು ನ್ಯಾಯಸಮ್ಮತವೆ?

ಇನ್ನು ವರದಿಯ ಪುಟ ಹತ್ತರಲ್ಲಿ ಮಂಡಲಿಯ ಬೇರೆ ಬೇರೆ ಕಡೆ ಇರುವ ಸ್ಟೋರುಗಳಲ್ಲಿ ಇರುವ ಸಾಮಾನುಗಳ ಒಟ್ಟು ಬೆಲೆ ಸುಮಾರು 9·50 ಲಕ್ಷ ಇತ್ತು ಎಂದು ಇದೆ. ಇದರಲ್ಲಿ ಯಾವ ಯಾವ ಸ್ಟೋರುಗಳಲ್ಲಿ ಎಷ್ಟು ಲೆಕ್ಕ ಸಿಕ್ಕಿಲ್ಲ ಎಂದರೆ ಪಟ್ಟಿ ಈ ರೀತಿ ಇದೆ. ತುಮಕೂರು ಸ್ಟೋರಿನಲ್ಲಿ 2·5 ಲಕ್ಷ, ಚಿತ್ರದುರ್ಗದಲ್ಲಿ 2·75 ಲಕ್ಷ, ಹಾಸನದಲ್ಲಿ 1·75 ಲಕ್ಷ, ಹುಬ್ಬಳ್ಳಿಯಲ್ಲಿ 4·50 ಲಕ್ಷ, ಬಾಗಲಕೋಟೆ 1·21 ಲಕ್ಷ, ದಾವಣಗೆರೆಯಲ್ಲಿ 1·00 ಲಕ್ಷ, ಚಿಕ್ಕಕೆರೆಯಲ್ಲಿ 1·52 ಲಕ್ಷ, ಮೈಸೂರಿನಲ್ಲಿ 3·7 ಲಕ್ಷ, ಮರ್‌ಕೆರಾದಲ್ಲಿ 1·20 ಲಕ್ಷ ಹೀಗೆ ಒಟ್ಟು 19·95 ಲಕ್ಷ ಬೆಲೆ ಬಾಳುವ ಸಾಮಾನುಗಳು ಕಣ್ಮರೆಯಾಗಿ ಲೆಕ್ಕ ತಪ್ಪಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿರುವ ಸೆಂಟ್ರಲ್ ಸ್ಟೋರ್ಸಿನಲ್ಲಿ ಕನಿಷ್ಠ ಪಕ್ಷ 25 ಲಕ್ಷ ರೂಪಾಯಿಗಳ ಸಾಮಾನುಗಳ ಲೆಕ್ಕವೇ ಸಿಕ್ಕಿಲ್ಲ. ಇದಲ್ಲದೆ ಪ್ರತ್ಯೇಕವಾಗಿ ಇದರಲ್ಲಿ ಎರಡು ಕೋಟಿ ರೂಪಾಯಿಗಳಷ್ಟು ಸಾಮಾನುಗಳು ಅಡ್ವಾನ್ಸ್ ಆಗಿ ಪಡೆದು ಅದನ್ನು ಸಸ್‌ಪೆನ್ಸ್ ಲೆಕ್ಕದಲ್ಲಿ ತೆಗೆದುಕೊಂಡಿದ್ದಾರೆ. ಇದಕ್ಕೆ ಕಾರಣವೇನು? ಅದಕ್ಕೆ ಎಂದಾದರೂ ಲೆಕ್ಕ ಸಿಕ್ಕುವುದೇ! ಇದೇ ರೀತಿ ಬೇರೆ ಜಿಲ್ಲೆಗಳಲ್ಲಿಯೂ ಇದೆ. ಇದನ್ನು ಸರಿಪಡಿಸಲು ಮಂಡಲಿಯವರು ಏನಾದರೂ ಪ್ರಯತ್ನ ಮಾಡಿದ್ದಾರೆಯೇ! ಕಳೆದ ಐದಾರು ವರ್ಷಗಳಿಂದಲೂ ಈ ಮಂಡಲಿಯ ಅಧೀನದಲ್ಲಿರುವ ಸುಮಾರು 350 ರೆವೆನ್ಯು ಆಫೀಸುಗಳಲ್ಲಿ ಸರಿಯಾಗಿ ಆಡಿಟ್ ತನಿಖೆ ಮಾಡಿಲ್ಲ. ಇಲ್ಲಿರುವ ಅಕೌಂಟುಗಳನ್ನು ಸರಿಯಾದ ಒಬ್ಬರು ಆಡಿಟರವರಿಂದ ಲೆಕ್ಕಾಚಾರ ಮಾಡಿದರೆ ಕನಿಷ್ಠ ಪಕ್ಷ ಇದರಲ್ಲಿ ಸುಮಾರು ಮೂರು ಕೋಟಿ ರೂಪಾಯಿಗಳಷ್ಟು ನಷ್ಟ ಬಂದಿರುವುದು ಗೊತ್ತಾಗುತ್ತದೆ. ಆದರೆ ಲೆಕ್ಕ ತನಿಖೆ ಮಾಡುವ ಅಧಿಕಾರಿಗಳು ತಮ್ಮ ಕರ್ತವ್ಯಪಾಲನೆ ಮಾಡುವ ಬದಲು ಅದಕ್ಷತೆಯಿಂದ ವರ್ತಿಸಿದ್ದರೂ ಆ ಅದಕ್ಷ ಅಧಿಕಾರಿಗೆ ಅಧಿಕಾರಾವಧಿ ವಿಸ್ತರಿಸಿ ಗೌರವಿಸಿದ್ದಾರೆ. ಇದಕ್ಕೆ ಕಾರಣವೇನು!

ಇನ್ನೊಂದು ಸಣ್ಣ ವಿಚಾರ: ಇದು ಎಸ್.ಎ.ಎಸ್. ಎಕ್ಸಾಮಿನೇಷನ್ ಬಗ್ಗೆ ಹೇಳಬೇಕಾಗಿದೆ. ಇದರಲ್ಲಿ ಪರೀಕ್ಷೆಗೆ ಕೂತು ಕಷ್ಟಪಟ್ಟು ಓದಿ ಯಾರೂ ಪಾಸು ಮಾಡಬೇಕಾಗಿಲ್ಲ. ಪರೀಕ್ಷಾ ಅಧಿಕಾರಿಗಳಿಗೆ ಯಾರನ್ನು ಪಾಸು ಮಾಡಬೇಕು ಎಂದು ಇರುತ್ತದೋ ಅಂತಹವರು ಪಾಸಾಗುತ್ತಾರೆ. ಇಂತಹ ಒಂದು ವಿಶೇಷ ಸೌಲಭ್ಯ ಈ ಮಂಡಲಿಯಲ್ಲಿದೆ. ಮಂಡಲಿಯವರು ಹೊಸ ತೆರಿಗೆಗಳನ್ನು ವಿಧಿಸುವುದಕ್ಕೆ ಬದಲು ಈ ನಗರದಲ್ಲಿರುವ ಡೊಮೆಸ್ಟಿಕ್ ಮತ್ತು ಕಮರ್ಷಿಯಲ್ ಕನೆಕ್ಷನ್ ದರಗಳನ್ನು ರೀ ಅಡ್ಜಸ್ಟ್ ಮಾಡಿದರೇ ಇವರಿಗೆ ಬೇಕಾದಷ್ಟು ಹಣ ಸಿಗುತ್ತಿತ್ತು. ಮಂಡಲಿಯಲ್ಲಿರುವ ಅನನುಭವಿ ಮತ್ತು ಭ್ರಷ್ಟಾಚಾರಿ ಅಧಿಕಾರಿಗಳಿಂದ ಸುಮಾರು ಎರಡು ಕೋಟಿಯಷ್ಟು ಹಣದ ನಷ್ಟ ಬಂದಿದೆ. ಬೆಂಗಳೂರು ಸಿಟಿಯೊಂದರಲ್ಲೇ ಅರ್ಧಕ್ಕಿಂತ ಹೆಚ್ಚು ಈ ಮೂಲದಿಂದ ನಷ್ಟವಾಗಿದೆ. ಇದಕ್ಕೆಲ್ಲಾ ಕಾರಣ ಇಲ್ಲಿರುವ ಅದಕ್ಷ ಮೇಲಧಿಕಾರಿಗಳು. ಇವರು ತಮಗೆ ಮನಸ್ಸು ಬಂದ ರೀತಿಯಲ್ಲಿ ಪಂಪುಸೆಟ್ಟುಗಳನ್ನು ಕೊಡುವುದು ಮತ್ತು ಸ್ವಾರ್ಥ ಮನೋಭಾವದಿಂದ ಕೆಲಸ ಮಾಡುವುದು ಮತ್ತು ರಾಂಗ್ ಸಿಸ್ಟಂ ಆಫ್ ಅಕೌಂಟಿಂಗು ಮಾಡುತ್ತಿರುವುದು ಕಾರಣವಲ್ಲವೇ ಎಂದು ನಾನು ಇಲ್ಲಿ ಕೇಳುತ್ತೇನೆ.

ಗ್ರಾಮಾಂತರ ವಿದ್ಯುತ್‌ಕರಣದ ಒಂದು ವಿಚಾರ ಇಲ್ಲೇ ಹೇಳಬೇಕಾಗಿದೆ. ನಮ್ಮ ಮಂಡಲಿ ರಾಜ್ಯದಲ್ಲಿ ಯಾವ ರೀತಿ ಕೆಲಸ ಮಾಡುತ್ತಿದೆ ಮತ್ತು ಯಾವ ರೀತಿಯಾದ ಕೆಲಸಕಾರ್ಯಗಳನ್ನು ಯೋಜನೆಯಲ್ಲಿ ಅಳವಡಿಸಿದೆ ಹಾಗೂ ಹೊರ ಪ್ರಾಂತಗಳಾದ ಆಂಧ್ರ ಅಥವಾ ಮದ್ರಾಸು ರಾಜ್ಯದ ವಿದ್ಯುತ್ ಮಂಡಳಿಗಳು ಯಾವ ರೀತಿ ಕೆಲಸ ಮಾಡುತ್ತಿದೆ ಮತ್ತು ಅವು ಯಾವ ಸ್ಥಿತಿಯಲ್ಲಿವೆ ಇಲ್ಲಿ ಹೇಗಿವೆ ಎನ್ನುವುದನ್ನೇನಾದರೂ ತುಲನೆಮಾಡಿ ನೋಡಿದ್ದೀರಾ? ಇಂದು ಆಂಧ್ರದಲ್ಲಿ ಸಪ್ಲೈ ಮಾಡುವ ರೇಟಿಗೂ ಮತ್ತು ನಮ್ಮ ರಾಜ್ಯದ ರೇಟಿಗೂ ವ್ಯತ್ಯಾಸವಿದೆ. ಆಂಧ್ರದವರು ಸಪ್ಲೈ ಮಾಡಲು ಶೇಕಡಾ ಹತ್ತರಷ್ಟು ವರಮಾನ ಬಂದರೆ ಸಾಕು. ಆದರೆ ನಮ್ಮ ಮಂಡಲಿಯವರು ಶೇಕಡಾ 18ರಷ್ಟು ವರಮಾನ ನಿರೀಕ್ಷೆ ಮಾಡುತ್ತಿದ್ದಾರೆ. ಹೀಗೇಕೆ ಮಾಡಬೇಕು? ಶೇಕಡ ಹತ್ತರಷ್ಟು ವರಮಾನ ನಿರೀಕ್ಷೆಯಲ್ಲಿ ಹೊರ ಪ್ರಾಂತಗಳಲ್ಲಿ ಗ್ರಾಮಾಂತರ ವಿದ್ಯುತ್ ಸರಬರಾಜು ಮಾಡುತ್ತಿರುವಾಗ ನಮ್ಮ ರಾಜ್ಯದವರು ಶೇಕಡಾ 18ರಷ್ಟು ಹೆಚ್ಚು ವರಮಾನ ನಿರೀಕ್ಷೆ ಮಾಡಬಾರದು. ಅಂಥ,

(ಶ್ರೀ ಎನ್. ಎ. ಚನ್ನೇಗೌಡ)

ದವರು ಹಾಗೂ ಮದ್ರಾಸಿನವರು ಎಸ್ಟಾಬ್ಲಿಷ್‌ಮೆಂಟಿಗೆ ಹೆಚ್ಚು ಖರ್ಚು ಮಾಡುತ್ತಿಲ್ಲ. ಆದರೆ ನಮ್ಮಲ್ಲಿ ಎಸ್ಟಾಬ್ಲಿಷ್‌ಮೆಂಟಿಗಾಗಿ ಹೇರಳವಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಇದು ಹೇಗಿದೆ ಎಂದರೆ ತೂತು ಮಡಕೆಗೆ ನೀರು ಹಾಕಿದಂತಾಗಿದೆ. ಇಲ್ಲಿ ಲೀಕೇಜು ಎಷ್ಟಾಗುತ್ತಲಿದೆ ಎನ್ನುವುದನ್ನು ಯಾರೂ ಸರಿಯಾಗಿ ನೋಡುತ್ತಿಲ್ಲ. ಮದ್ರಾಸಿನಲ್ಲಿ ಒಂದು ಗ್ರಾಮಾಂತರ ಲೈನು ಎಳೆಯಬೇಕಾದರೆ ಸುಮಾರು ಇನ್ನೂರು ರೂಪಾಯಿಗಳ ಖರ್ಚಿನಲ್ಲಿ ಮಾಡುತ್ತಾರೆ. ಆದರೆ ಇಲ್ಲಿ ಒಂದು ಲೈನು ಎಳೆಯಬೇಕಾದರೆ ಸುಮಾರು ಒಂದು ಸಾವಿರದವರೆಗೆ ಖರ್ಚು ಮಾಡುತ್ತಾರೆ. ಕಾರಣ ಅನವಶ್ಯಕವಾದ ಸಾಮಾನು, ಡಿಸೈನ್, ಸ್ಟ್ರಕ್ಚರ್ ಮತ್ತು ವೈರಿಂಗ್. ಇಲಾಖೆಯವರ ತೃಪ್ತಿಗಾಗಿ ರೈತರಮೇಲೆ ಹೆಚ್ಚು ಹೊರೆ ಹಾಕಬೇಕು ಎಂದು ಹೇಳುತ್ತಿದ್ದಾರೆ. ರಾಜ್ಯದಲ್ಲಿ ದಿನಬಳಕೆ ಸಾಮಾನಿನಮೇಲೆ ಶೇಕಡ ಮೂರರಷ್ಟು ಸೇಲ್ಸ್ ಟ್ಯಾಕ್ಸ್ ಹಾಕುತ್ತಿದ್ದರೆ ಮಂಡಳಿ ವಿದ್ಯುಚ್ಛಕ್ತಿಯ ಮೇಲೆ ಶೇಕಡಾ ಹತ್ತರಷ್ಟು ಟ್ಯಾಕ್ಸ್ ಹಾಕುತ್ತಿದ್ದಾರೆ. ಈ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟು ಕೊಂಡು ಸರಕಾರ ರೈತರಮೇಲೆ ಹೆಚ್ಚು ಕರ ವಿಧಿಸಬೇಕೆಂಬುದನ್ನು ಕೈಬಿಡಬೇಕು. ಮದ್ರಾಸು ಹಾಗೂ ಇತರ ರಾಜ್ಯಗಳಲ್ಲಿ ಮೊದಲು ಕೃತಿಗೆ ಹೆಚ್ಚು ಗಮನ ಕೊಡುತ್ತಿರುವ ಪಾಠವನ್ನು ಮಂಡಲಿಯವರು ಕಲಿಯಬೇಕು. ಆದರೆ ರೈತರಿಗೆ ಹೆಚ್ಚು ಅನಾನುಕೂಲವಾಗುವ ಈ ದರವನ್ನು ವಜಾ ಮಾಡಬೇಕೆಂದು ಹೇಳಿ ಅಧ್ಯಕ್ಷರು ಇಷ್ಟು ಅವಕಾಶ ಕೊಟ್ಟುದಕ್ಕೆ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri K. PUTTASWAMY.—The Business Advisory Committee has allotted only one day for this discussions. To-morrow after the Question Hour Government will reply to the debate on the Financial Statement of the Electricity Board. It has been sufficiently discussed here yesterday and to-day.

Mr. SPEAKER.—As the programme stands, the House is expected to adjourn *sine die* on 5th instant. On that basis one day was allotted for this subject. There are other matters to be discussed by the House. There is also a possibility of the current session being extended.

7-00 P.M.

Sri K. N. VEERAPPA GOWDA (Sringeri).—There are so many members yet to speak on the financial statement of the Electricity Board.

Mr. SPEAKER.—I would like to make a suggestion. If the Hon. Members are agreeable to meet tomorrow at 11 A.M. instead of 1 P.M. I think that would be allright.

Sri B. P. GANGADHAR.—We are prepared to come by 11 A.M.

Mr. SPEAKER.—What does the Hon. Minister for Parliamentary Affairs say ?

Sri K. PUTTASWAMY.—When the House is agreeable I have nothing to say.

Mr. SPEAKER.—Allright, we shall meet to-morrow at 11-00 A.M. Now we shall take up half-an-hour discussion.